


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಆಗಸ್ಟ್ 20 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 124 | ಪುಟಗಳು: 12 ₹4
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com



ಒಳಮೀಸಲಾತಿ ಸಂಪುಟ ಅಸ್ತು



ಬಲಗೈ–ಎಡಗೈಗೆ ತಲಾ ಶೇ.6; ಸ್ಪೃಶ್ಯ ಸಮುದಾಯಕ್ಕೆ ಶೇ.5 ಮೀಸಲು

● ಇಂದು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟ ● ಮೂರು ಗುಂಪುಗಳಾಗಿ ವರ್ಗೀಕರಣ ಮಾಡಿ ಮೀಸಲಾತಿ ಪ್ರಮಾಣ ಹಂಚಿಕೆ ನಿರ್ಣಯ

ಬೆಂಗಳೂರು, ಆ.19(ಕೆಎಂಶಿ)– ಪರಿಶಿಷ್ಟ ಜಾತಿ ಒಳಮೀಸಲಾತಿ ಕಗ್ಗಂಟು ಬಿಡಿಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದ್ದು, ಈ ಮೂಲಕ ಮೂರು ದಶಕಗಳ ಬೇಡಿಕೆ ಈಡೇರಿದಂತಾಗಿದೆ

ನ್ಯಾ.ನಾಗಮೋಹನ್‌ದಾಸ್ ಆಯೋಗದ ಒಳ ಮೀಸಲಾತಿ ವರದಿ ಅನುಷ್ಠಾನ ಸಂಬಂಧ ಮಂಗಳವಾರ ನಡೆದ ವಿಶೇಷ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ, ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ನೂರೊಂದು ಪರಿಶಿಷ್ಟ ಜಾತಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ, ಬಲಗೈ ಸಮುದಾಯಕ್ಕೆ ಶೇ.6, ಎಡಗೈ ಸಮುದಾಯಕ್ಕೆ ಶೇ.6 ಹಾಗೂ ಸ್ಪೃಶ್ಯ ಸಮುದಾಯಗಳಿಗೆ ಶೇ.5ರಷ್ಟು ಮೀಸಲಾತಿ ಪ್ರಮಾಣ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳನ್ನೂ ಒಟ್ಟಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ವಿಶೇಷ ಸಚಿವ ಸಂಪುಟದಲ್ಲಿ ಕೈಗೊಂಡಿರುವ ಈ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಬುಧವಾರ ವಿಧಾನಸಭೆಯಲ್ಲಿ ಪ್ರಕಟಿಸಲಿದ್ದಾರೆ.

ಒಳಮೀಸಲಾತಿ ಸಂಬಂಧ ಸುಪ್ರೀಂಕೋರ್ಟ್ ತೀರ್ಪಿನನ್ವಯ ರಾಜ್ಯ ಸರ್ಕಾರವು ಒಳಮೀಸಲಾತಿಗಾಗಿ ಸಮೀಕ್ಷೆ ನಡೆಸಿ ವರದಿ ನೀಡಲು ನ್ಯಾ.ನಾಗಮೋಹನ್ ದಾಸ್ ಆಯೋಗವನ್ನು ರಚಿಸಿತ್ತು. ಮನೆ ಮನೆ ಭೇಟಿ ಹಾಗೂ ಆನ್‌ಲೈನ್ ವಿಧಾನದ ಮೂಲಕ ಸಮೀಕ್ಷೆ ನಡೆಸಿದ್ದ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಈ ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ, ಸುದೀರ್ಘ ಚರ್ಚೆ ನಡೆಸಲಾಗಿತ್ತಾದರೂ ▶ 6ನೇ ಪುಟಕ್ಕೆ

ಒಳ ಮೀಸಲಾತಿ ಹಂಚಿಕೆ ವಿವರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಎಲ್ಲಾ ಪರಿಶಿಷ್ಟ ಜಾತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ವೈಜ್ಞಾನಿಕವಾಗಿ ಒಳ ಮೀಸಲಾತಿಯನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ.

ನ್ಯಾ.ನಾಗಮೋಹನ್ ದಾಸ್ ವರದಿಯಲ್ಲಿ 5 ವಿಂಗಡಣೆ ಮಾಡಲಾಗಿತ್ತು. ಆದರೆ ಸರ್ಕಾರ ಒಂದಷ್ಟು ಪರಿಷ್ಕರಣೆ ಮಾಡಿಕೊಂಡು 3 ಗುಂಪುಗಳಾಗಿ ವರ್ಗೀಕರಣ ಮಾಡಿಕೊಂಡಿದೆ. 18 ಜಾತಿಗಳಿರುವ ಎಡಗೈ ಸಮುದಾಯಕ್ಕೆ ಶೇ.6 ಹಾಗೂ 20 ಜಾತಿಗಳಿರುವ ಬಲಗೈ ಸಮುದಾಯಕ್ಕೆ ಶೇ.6 ಹಾಗೂ 63 ಜಾತಿಗಳಿರುವ ಇತರ ಸಮುದಾಯಕ್ಕೆ ಶೇ.5 ಮೀಸಲಾತಿ ನೀಡುವ ಬಗ್ಗೆ ಕ್ಯಾಬಿನೆಟ್ ಸಭೆಯಲ್ಲಿ ಬಹುತೇಕ ಅಂತಿಮವಾಗಿದೆ.

ದಲಿತ ಎಡಗೈ ಜಾತಿಗಳು: ಭಾಂಬಿ, ಅಸದರು, ಅಸೋಡಿ, ▶ 6ನೇ ಪುಟಕ್ಕೆ

▶▶ ಪರಿಶಿಷ್ಟ ಜಾತಿ ಒಳ ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ಸ್ವಾಗತಿಸುತ್ತೇವೆ. ಕಳೆದ 35 ವರ್ಷಗಳ ಹೋರಾಟದ ಫಲವಾಗಿ ಪರಿಶಿಷ್ಟ ಜಾತಿ ಬಲಗೈ ಹಾಗೂ ಎಡಗೈ ಸಮುದಾಯಕ್ಕೆ ತಲಾ ಶೇ.6 ಹಾಗೂ ಉಳಿದ ಸ್ಪೃಶ್ಯ ಸಮುದಾಯಗಳಿಗೆ ಶೇ.5ರಷ್ಟು ಮೀಸಲಾತಿ ಹಂಚಿಕೆಯಾಗಿರುವುದು ಸಂತೋಷದ ವಿಚಾರ. ಈ ನಿರ್ಧಾರದಿಂದಾಗಿ ಮೂಲ ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯ ದೊರಕಿದೆ. ಸುದೀರ್ಘ ಹೋರಾಟದಲ್ಲಿ ಅಂಕಿ–ಅಂಶಗಳಿಗಿಂತ ಸಾಮಾಜಿಕ ನ್ಯಾಯ, ಸಂವಿಧಾನ ರಕ್ಷಣೆ, ಸಮುದಾಯದಲ್ಲಿ ಸಾಮರಸ್ಯ ಅತೀ ಮುಖ್ಯ. ಹಾಗಾಗಿ ಈ ನಿರ್ಧಾರವನ್ನು ಒಪ್ಪಿಕೊಂಡಿದ್ದೇವೆ. ಸಮುದಾಯದೊಳಗೆ ಯಾವುದೇ ಸಂಘರ್ಷಕ್ಕೆ ಎಡೆಮಾಡಿಕೊಡದೇ ಒಳ ಮೀಸಲಾತಿ ಜಾರಿಗೊಳ್ಳುತ್ತಿರುವುದು ಸಂತೋಷದ ವಿಚಾರ. ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಸಮುದಾಯದ ಪರವಾಗಿ ಗೌರವ ಸಲ್ಲಿಸುತ್ತೇವೆ.



– ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉರಿಲಿಂಗ ಪೆದ್ದಿಮಠ

ಉಪ ರಾಷ್ಟ್ರಪತಿ ಸ್ಥಾನಕ್ಕೆ ನಿವೃತ್ತ ನ್ಯಾ.ಸುದರ್ಶನ್ ರೆಡ್ಡಿ ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿ


ನವದೆಹಲಿ, ಆ.19–ಸೆಪ್ಟೆಂಬರ್ 9 ರಂದು ನಡೆಯಲಿರುವ ಉಪ ರಾಷ್ಟ್ರಪತಿ ಚುನಾವಣೆಗೆ ಇಂಡಿಯಾ ಬಣವು ಮಂಗಳವಾರ ಸುಪ್ರೀಂಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ನಡೆದ ಸಭೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ವಿರೋಧ ಪಕ್ಷದ ನಾಯಕರು ಜಂಟಿ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ನಿರ್ಧರಿಸಿದರು.



ಬಿಜೆಪಿ ನೇತೃತ್ವದ ಎನ್‌ಡಿಎ ಮಹಾರಾಷ್ಟ್ರ ರಾಜ್ಯಪಾಲ ಮತ್ತು ಆರ್‌ಎಸ್‌ಎಸ್ ಹಿನ್ನೆಲೆಯ ಹಿರಿಯ ಅನುಭವಿ ಸಿ.ಪಿ. ರಾಧಾಕೃಷ್ಣನ್ ಅವರನ್ನು ಉಪ ರಾಷ್ಟ್ರಪತಿ ಹುದ್ದೆಗೆ ನಾಮನಿರ್ದೇಶನ ಮಾಡಿದೆ. ತಮಿಳುನಾಡು ಬಿಜೆಪಿಯ ಮಾಜಿ ಮುಖ್ಯಸ್ಥ ರಾಧಾಕೃಷ್ಣನ್ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿ ಭಾನುವಾರ ಘೋಷಿಸಲಾಯಿತು.

ಮೈಶುಗರ್ 140 ಕೋಟಿ ಅವ್ಯವಹಾರ ಸಂಬಂಧ ಉನ್ನತ ಮಟ್ಟದ ತನಿಖೆ

ಬೆಂಗಳೂರು, ಆ.19(ಕೆಎಂಶಿ)– ಮಂಡ್ಯದ ಮೈಶುಗರ್ ಕಾರ್ಖಾನೆಯಲ್ಲಿ ನಡೆದಿರುವ 140 ಕೋಟಿ ರೂ. ಅವ್ಯವಹಾರಕ್ಕೆ ಸಂಬಂಧಿಸಿದಂತೆ ಉನ್ನತಮಟ್ಟದ ತನಿಖೆ ನಡೆಸುವುದಾಗಿ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ವಿಧಾನಪರಿಷತ್ತಿನಲ್ಲಿಂದು ಪ್ರಕಟಿಸಿದ್ದಾರೆ.



ಶಿವಾನಂದ ಪಾಟೀಲ್

ಪ್ರಶ್ನೋತ್ತರ ವೇಳೆಯಲ್ಲಿ ಮಧುಮಾದೇಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ತನಿಖೆ ಜೊತೆಗೆ ಕಾರ್ಖಾನೆಯ ಒತ್ತುವರಿ ಭೂಮಿ ತೆರವಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಸಕ್ಕರೆ ಕಾರ್ಖಾನೆ ಪುನಃಶ್ಚೇತನ ಹಾಗೂ ಉನ್ನತೀಕರಣಕ್ಕೆ 640 ಕೋಟಿ ರೂ. ನೆರವು ನೀಡಲಾಗಿದೆ, ಈ ಹಣದಲ್ಲಿ ಹೊಸದಾಗಿ 4 ಹೊಸ ಕಾರ್ಖಾನೆಗಳನ್ನು ಸ್ಥಾಪಿಸಬಹುದಿತ್ತು ನೀಡಿದ ಹಣ ದುರುಪಯೋಗವಾಗಿದೆ ಎಂದರು.

22 ಕ್ಯಾರೆಟ್ ಚಿನ್ನದ ದರ @ ತೊಳಸಿ



ಅಶೋಕ ರಸ್ತೆ, ಮೈಸೂರು. ಫೋ: 0821-2521926, ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821-2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221-200926

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8548089469/9164946160

ಡಿಎಲ್, ಆರ್‌ಸಿಗೆ ಮೊಬೈಲ್ ಸಂಖ್ಯೆ ಲಿಂಕ್ ಕಡ್ಡಾಯ

ಸಾರಿಗೆ ಇಲಾಖೆಯಿಂದ ವಾಹನ ಚಾಲಕರು, ಮಾಲೀಕರಿಗೆ ಹೊಸ ಸಲಹೆ

- ವಾಹನ ಚಾಲಕರು, ಮಾಲೀಕರೊಂದಿಗೆ ಉತ್ತಮ ಸಂವಹನಕ್ಕಾಗಿ ಈ ಕ್ರಮ
- ದಂಡ ಪಾವತಿಯಿಂದ ತಪ್ಪಿಸಿಕೊಳ್ಳುವವರನ್ನು ಕಟ್ಟಿ ಹಾಕಲು ಕಾನೂನು
- ಆಗಾಗ್ಗೆ ವಿಳಾಸ ಬದಲಾಯಿಸಿಕೊಳ್ಳುವವರಿಗೆ ಸಾರಿಗೆ ಇಲಾಖೆ ಚಾಟಿ
- ಮೋಸದಿಂದ ವಾಹನಗಳ ನೋಂದಣಿ, ವರ್ಗಾವಣೆ ತಡೆಗಟ್ಟಲು ತಂತ್ರಗಾರಿಕೆ

ಮೈಸೂರು, ಆ.19(ಬಿಎಲ್‌ಯು, ಆರ್‌ಕೆ, ಕೆಎಸ್)– ಚಾಲನಾ ಪರವಾನಗಿ (ಡಿಎಲ್) ಹೊಂದಿರುವ ಚಾಲಕರು ಹಾಗೂ ವಾಹನಗಳ ನೋಂದಣಿ ಪ್ರಮಾಣ ಪತ್ರ (ಆರ್ ಸಿ) ಹೊಂದಿರುವ ವಾಹನ ಮಾಲೀಕರು ಕೂಡಲೇ ತಮ್ಮ ಡಿಎಲ್ ಹಾಗೂ ಆರ್‌ಸಿಗೆ ಮೊಬೈಲ್ ನಂಬರ್ ಅನ್ನು ತ್ವರಿತವಾಗಿ ಲಿಂಕ್ ಅಥವಾ ನವೀಕರಿಸಬೇಕು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಕಟ್ಟುನಿಟ್ಟಿನ ಸೂಚನೆ ನೀಡಿದೆ.



ಮೈಸೂರಿನ ಲಕ್ಷ್ಮಿಪುರಂನ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ)ಯಲ್ಲಿ ವಾಹನ ಚಾಲಕರು ಹಾಗೂ ಮಾಲೀಕರು ತಮ್ಮ ಡಿಎಲ್ ಹಾಗೂ ಆರ್‌ಸಿಗೆ ಮೊಬೈಲ್ ಸಂಖ್ಯೆ ಲಿಂಕ್ ಮಾಡಿಕೊಳ್ಳುತ್ತಿದ್ದಾರೆ.

ಸಾರಿಗೆ ಇಲಾಖೆಯ ಜೊತೆ ಉತ್ತಮ ಸಂವಹನ, ಸಂಪರ್ಕ ಹೊಂದಲು ಮೊಬೈಲ್ ನಂಬರ್ ಅನ್ನು ಡಿಎಲ್ ಹಾಗೂ ಆರ್‌ಸಿಗೆ ಲಿಂಕ್ ಮಾಡುವುದು ಕಡ್ಡಾಯವಾಗಿದೆ. ಸಾರಿಗೆ ಸಂಬಂಧಿತ ಸೇವೆಗಳಲ್ಲಿ ಸುಧಾರಣೆ ತರಲು ಈ ಪ್ರಕ್ರಿಯೆ ಅತ್ಯವಶ್ಯವಾಗಿದೆ ಎಂದು ಸಚಿವಾಲಯ ಅಭಿಪ್ರಾಯಪಟ್ಟಿದೆ.

ಡಿಎಲ್ ಹಾಗೂ ಆರ್‌ಸಿ ಹೊಂದಿರುವ ವಾಹನ ಚಾಲಕರು ಹಾಗೂ ಮಾಲೀಕರು ತಮ್ಮ ಮೊಬೈಲ್ ಫೋನ್ ಸಂಖ್ಯೆಯನ್ನು ತಾತ್ಕಾಲಿಕವಾಗಿ ನವೀಕರಿಸಿರುವುದು ಕಂಡು ಬಂದಿದೆ. ಇದರ ಪರಿಣಾಮವಾಗಿ ಪ್ರಮುಖ ಸೇವೆಗಳಿಗೆ ಸಂಬಂಧಿಸಿದ ಎಚ್ಚರಿಕೆಗಳು, ಶಾಸನಬದ್ಧ ಸೂಚನೆಗಳು ಹಾಗೂ ಇತರೆ ಸಂವಹನಗಳು ವಾಹನ ಚಾಲಕರು, ಮಾಲೀಕರಿಗೆ ತಲುಪುತ್ತಿಲ್ಲ ಎಂದು ಹೇಳಿದೆ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಪ್ರಾದೇಶಿಕ ಸಾರಿಗೆ ಅಧಿಕಾರಿ (ಪೂರ್ವ ಆರ್‌ಟಿಒ) ಸೈಫುದ್ದೀನ್ ಖಾನ್ ಅವರು, ಯಾವುದೇ ಸಾರಿಗೆ ಮತ್ತು ವಾಹನಗಳನ್ನು ಪಡೆಯಲು ಮೊಬೈಲ್ ಸಂಖ್ಯೆಯ ನವೀಕರಣ ಕಡ್ಡಾಯವಾಗಿದೆ ಎಂದು ತಿಳಿಸಿದರು.

ನಗರದ ಲಕ್ಷ್ಮಿಪುರಂನಲ್ಲಿರುವ ಮೈಸೂರು ಪಶ್ಚಿಮ ಆರ್‌ಟಿಓ ಪ್ರಭುಸ್ವಾಮಿ ಅವರು ಈ ಬಗ್ಗೆ ಮಾಹಿತಿ ನೀಡಿ, ಡಿಎಲ್ ಹಾಗೂ ಆರ್‌ಸಿ ಹೊಂದಿರುವವರು ಖುದ್ದು ಆರ್‌ಟಿಒ ಕಚೇರಿಗೆ ಅಥವಾ ಸಾರಥಿ ಪೋರ್ಟಲ್‌ಗೆ ಭೇಟಿ ನೀಡಿ ಡಿಎಲ್ ಹಾಗೂ ಆರ್‌ಸಿಗೆ ತಮ್ಮ ಮೊಬೈಲ್ ನಂಬರ್ ಅನ್ನು ಕಡ್ಡಾಯವಾಗಿ ಲಿಂಕ್ ಅಥವಾ ನವೀಕರಣ ಮಾಡಿಕೊಳ್ಳಬೇಕು ▶ 6ನೇ ಪುಟಕ್ಕೆ

ಆನ್‌ಲೈನ್ ಬೆಟ್ಟಿಂಗ್‌ಗೆ ಜೈಲು ಶಿಕ್ಷೆ ಫಿಕ್ಸ್!

ದೆಹಲಿ: ಮೊಬೈಲ್ ಗೇಮ್‌ಗಳು, ಆನ್‌ಲೈನ್ ಬೆಟ್ಟಿಂಗ್‌ಗಳಿಗೆ ಇನ್ಮುಂದೆ ಕಡಿವಾಣ ಬೀಳಲಿದೆ. ಇವುಗಳನ್ನು ನಿಯಂತ್ರಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ಇಂದು ಮಸೂದೆ ಮಂಡನೆ ಮಾಡಲು ಸಿದ್ಧತೆ ನಡೆಸಿದೆ. ಇನ್ನು ಮುಂದೆ ಆನ್‌ಲೈನ್ ಬೆಟ್ಟಿಂಗ್ ಶಿಕ್ಷಾರ್ಹ ಅಪರಾಧವಾಗಲಿದೆ. ಆನ್‌ಲೈನ್ ಗೇಮಿಂಗ್ ಮಸೂದೆಯನ್ನು ಇಂದು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿದೆ. ಆನ್‌ಲೈನ್ ಬೆಟ್ಟಿಂಗ್ ಅನ್ನು ಶಿಕ್ಷಾರ್ಹವಾಗಿಸುವ, ಪ್ರವರ್ತಕರು ಮತ್ತು ಅನುಮೋದಕರಿಗೆ ದಂಡ ವಿಧಿಸುವ ಮೂಲಕ ಭಾರತದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಆನ್‌ಲೈನ್ ಗೇಮಿಂಗ್ ವಲಯವನ್ನು ನಿಯಂತ್ರಿಸುವ ಗುರಿಯನ್ನು ಇದು ಹೊಂದಿದೆ.

ಬಿಲ್‌ನಲ್ಲಿ ಏನಿದೆ: ಆನ್‌ಲೈನ್ ಗೇಮಿಂಗ್ ಮಸೂದೆಯಲ್ಲಿ ಬೆಟ್ಟಿಂಗ್ ಅಪ್ಲಿಕೇಶನ್‌ಗಳಿಗೆ ಸಂಬಂಧಿಸಿದ ವ್ಯಸನ, ಆರ್ಥಿಕ ವಂಚನೆ ಮತ್ತು ಮೋಸಗೊಳಿಸುವ ಜಾಹೀರಾತುಗಳ ಬಗ್ಗೆ ಕಳವಳಗಳನ್ನು ಪರಿಹರಿಸಲು ಈ ಶಾಸನವು ಪ್ರಯತ್ನಿಸುತ್ತದೆ. 2022 ರಿಂದ, 1,400 ಕ್ಕೂ ಹೆಚ್ಚು ಅಕ್ರಮ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ನಿರ್ಬಂಧಿಸಲಾಗಿದೆ. ಬಳಕೆದಾರರ ರಕ್ಷಣೆ ಮತ್ತು ಜವಾಬ್ದಾರಿಯುತ ಗೇಮಿಂಗ್‌ಗೆ ಒತ್ತು ನೀಡುವ, ಅಂತಹ ಅಪ್ಲಿಕೇಶನ್‌ಗಳನ್ನು ಅನುಮೋದಿಸುವ ಸೆಲೆಬ್ರಿಟಿಗಳು ಮತ್ತು ಪ್ರಭಾವಿಗಳ ಮೇಲೆ ಕಟ್ಟುನಿಟ್ಟಾದ ಹೊಣೆಗಾರಿಕೆಯನ್ನು ಮಸೂದೆ ಪ್ರಸ್ತಾಪಿಸುತ್ತದೆ.

ಆನ್‌ಲೈನ್ ಗೇಮ್‌ಗೆ ಕಡಿವಾಣ: ಯಾವುದೇ ವ್ಯಕ್ತಿ ಭಾರತದಲ್ಲಿ ಆನ್‌ಲೈನ್ ಮನಿ ಗೇಮ್‌ಗಳು ಅಥವಾ ಆನ್‌ಲೈನ್ ಮನಿ ಗೇಮಿಂಗ್ ಸೇವೆಗಳನ್ನು ನೀಡುವುದನ್ನು ನಿಷೇಧಿಸಲಿದೆ. ಇದು ಅಂತಹ ಆಟಗಳಿಗೆ ಸಂಬಂಧಿಸಿದ ▶ 6ನೇ ಪುಟಕ್ಕೆ

ಈ ಬಾರಿ ಅರಮನೆ ಆವರಣದಲ್ಲಿ 48 ಸಾವಿರ ಮಂದಿಗೆ ಜಂಬೂ ಸವಾರಿ ವೀಕ್ಷಣೆಗೆ ಅವಕಾಶ

● ಈ ಸಂಖ್ಯೆಯಲ್ಲಿ ಒಂದೇ ಒಂದು ಹೆಚ್ಚುವರಿಯಾಗಲು ಬಿಡಲ್ಲ: ಡಿಸಿ ● ಕಳೆದ ಬಾರಿ 59 ಸಾವಿರ ಆಸನ ಅವಕಾಶ ಮಾಡಲಾಗಿತ್ತು



ಮೈಸೂರು, ಆ.19(ಎಂಕೆ)– ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯಲ್ಲಿ ಭಾರಿ ಜನದಟ್ಟಣೆ, ನೂಕು–ನುಗ್ಗಲು ನಿಯಂತ್ರಣಕ್ಕೆ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನ (ಎಸ್‌ಒಪಿ) ಅಳವಡಿಸಲು ಜಿಲ್ಲಾಡಳಿತ ನಿರ್ಧರಿಸಿದ್ದು, ಅರಮನೆ ಆವರಣದಲ್ಲಿ 48 ಸಾವಿರ ಮಂದಿಗೆ ಮಾತ್ರವೇ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುತ್ತಿದೆ.

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತ ದುರಂತದಿಂದ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ, ಬೃಹತ್ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಜನ ಸಂದಣಿ ನಿರ್ವಹಣೆಗಾಗಿ ಎಸ್‌ಒಪಿ ಜಾರಿ ಮಾಡಿದ್ದು, ಲಕ್ಷಾಂತರ ಜನ ಸೇರುವ ಮೈಸೂರು ದಸರಾ ಜಂಬೂ ಸವಾರಿ ಮೆರವಣಿಯನ್ನು ವ್ಯವಸ್ಥಿತವಾಗಿ, ಯಾವುದೇ ಗೊಂದಲ–ಗೋಜುಗಳಿಲ್ಲದೆ ನಡೆಸುವಂತೆ ಸೂಚಿಸಲಾಗಿದೆ ಎಸ್‌ಒಪಿ ಮಾರ್ಗಸೂಚಿಯಂತೆ ಜಂಬೂಸವಾರಿ ದಿನದಂದು ಅರಮನೆ ಆವರಣದಲ್ಲಿ ಈ ವರ್ಷ 48 ಸಾವಿರ ಮಂದಿಗೆ ಮಾತ್ರ ವೀಕ್ಷಣೆಗೆ ಅವಕಾಶ ಕಲ್ಪಿಸಲಿದ್ದು, ಕಳೆದ ವರ್ಷಕ್ಕಿಂತ 11 ಸಾವಿರ ಜನರ ಕಡಿತಗೊಳಿಸಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಮಾಹಿತಿ ನೀಡಿದರು. ಕಳೆದ ವರ್ಷ ಅರಮನೆ ಆವರಣದಲ್ಲಿ 59 ಸಾವಿರ ಮಂದಿಗೆ ಅವಕಾಶ ನೀಡಲಾಗಿತ್ತು. ಈ ವರ್ಷ ಸರ್ಕಾರದ ಮಾರ್ಗಸೂಚಿಯಂತೆ ಎಸ್‌ಒಪಿ ಜಾರಿ ಮಾಡಲಿದ್ದು, ಜನಸಂದಣಿ, ನೂಗು–ನುಗ್ಗಲನ್ನು ನಿಯಂತ್ರಿಸುವ ದೃಷ್ಟಿಯಿಂದ ಕಡಿಮೆ ಮಾಡಲಾಗಿದೆ.

ವೆಬ್‌ಸೈಟ್ ಮೂಲಕ ಗೋಲ್ಡ್‌ಕಾರ್ಡ್ ಮಾರಾಟ...!



▶▶ ಮೈಸೂರು ದಸರಾ ಸಂಬಂಧಿತ ಎಲ್ಲಾ ಕಾರ್ಯಚಟುವಟಿಕೆಗಳನ್ನು ಹಂತ ಹಂತವಾಗಿ ರೂಪಿಸಲಾಗುತ್ತಿದ್ದು, ಪ್ರತೀ ವರ್ಷದಂತೆ ಮುಂದಿನ 10–15 ದಿನಗಳ ನಂತರ ಆನ್‌ಲೈನ್ ಮೂಲಕ ಗೋಲ್ಡ್‌ಕಾರ್ಡ್ ಮಾರಾಟ ಪ್ರಾರಂಭಿಸಲಾಗುವುದು. ಈ ಕುರಿತು ಹಾಗಾಗ ಅಪ್‌ಡೇಟ್ ನೀಡಲಾಗುವುದು.

– ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾಧಿಕಾರಿ

ಈ ಬಾರಿ ದಸರಾ ಉದ್ಘಾಟನೆಗೆ ಸೋನಿಯಾ ಗಾಂಧಿಗೆ ಆಹ್ವಾನ?

ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರಾಸಕ್ತಿ

ಬೆಂಗಳೂರು, ಆ.19(ಕೆಎಂಶಿ)– ವಿಶ್ವ ವಿಖ್ಯಾತ ಮೈಸೂರು ದಸರಾ ಉತ್ಸವ ಉದ್ಘಾಟನೆಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಆಹ್ವಾನಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದಾರೆ.



ದಸರಾ ಮಹೋತ್ಸವ ಉದ್ಘಾಟಿಸುವಂತೆ ಮುಖ್ಯಮಂತ್ರಿ ಪತ್ರ ಮುಖೇನ ಕೋರಿದ್ದಾರೆ. ಆದರೆ, ಅವರಿಂದ ಇದುವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಸ್ವತಃ ಮುಖ್ಯಮಂತ್ರಿ ಅವರೇ ದೆಹಲಿಗೆ ತೆರಳಿ ಸೋನಿಯಾ ಗಾಂಧಿ ಅವರನ್ನು, ಆಹ್ವಾನಿಸಲಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ. ಸೆಪ್ಟೆಂಬರ್ 22ರಿಂದ 11 ದಿನಗಳವರೆಗೆ ದಸರಾ ಮಹೋತ್ಸವ ಜರುಗಲಿದೆ. ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ದಸರಾ ಉದ್ಘಾಟಿಸಬೇಕೆಂದು ಕೋರಲಿದ್ದಾರೆ.

ನಗರದಲ್ಲಿ ನಡೆದ ದಸರಾ ಉನ್ನತಮಟ್ಟದ ಸಭೆಯಲ್ಲಿ ಈ ಬಾರಿ ಯಾರಿಂದ ಉದ್ಘಾಟನೆ ಮಾಡಿಸಬೇಕೆಂಬ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸಭೆ ಮಾಮೂಲಿನಂತೆ ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಟ್ಟಿತು. ಈ ಬಾರಿಯ ದಸರಾ ಉತ್ಸವವನ್ನು ಮಹಿಳೆಯೊಬ್ಬರಿಂದ, ಅದರಲ್ಲೂ ಸೋನಿಯಾ ಗಾಂಧಿ ಅವರಿಂದಲೇ ಮಾಡಿಸಬೇಕೆಂಬ ದೃಢ ನಿರ್ಧಾರವನ್ನು ಮುಖ್ಯಮಂತ್ರಿ ತೆಗೆದುಕೊಂಡಿದ್ದಾರೆ. ವಿಧಾನಮಂಡಲದ ಮಳೆಗಾಲದ ಅಧಿವೇಶನ ಮುಗಿಯುತ್ತಿದ್ದಂತೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರೊಂದಿಗೆ ದೆಹಲಿಗೆ ತೆರಳಿ ಸೋನಿಯಾ ಅವರಿಗೆ ಆಹ್ವಾನ ನೀಡಲಿದ್ದಾರಂತೆ.

ಸುಳ್ಳು ಪ್ರಚಾರಕ್ಕೆ ನಾವು ಎಂದಿಗೂ ವಿಚಲಿತರಾಗಲ್ಲ


ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗಡೆ ದೃಢ ನುಡಿ

ಬೆಂಗಳೂರು, ಆ.19– ಅಸಹಜ ಸಾವುಗಳ ಆರೋಪ ಕುರಿತಂತೆ ದೇಶಾದ್ಯಂತ ಸುದ್ದಿಯಾಗಿರುವ ಧರ್ಮಸ್ಥಳದ ಪ್ರಕರಣಗಳ ಕುರಿತಂತೆ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗಡೆ ಮೌನ ಮುರಿದಿದ್ದಾರೆ.

ಇದೇ ಮೊದಲ ಬಾರಿಗೆ ಸೌಜನ್ಯ ಕೊಲೆ, ಎರಡು ದಶಕಗಳ ಅವಧಿಯಲ್ಲಿ ಧರ್ಮಸ್ಥಳ ಬಳಿ ನಡೆದಿರುವ ಸರಣಿ ಕೊಲೆ, ಅತ್ಯಾಚಾರ,ನೂರಾರು ಶವ ಹೂತು ಹಾಕಿರುವ ಆರೋಪಗಳ ಕುರಿತು ಸ್ಪಷ್ಟನೆ ನೀಡಿದ್ದಾರೆ. ಮಾಧ್ಯಮಗಳಲ್ಲಿ ಪುಂಖಾನುಪುಂಖವಾಗಿ ಬಿತ್ತರವಾಗುತ್ತಿರುವ ಸುದ್ದಿಗಳು ಆಧಾರ ರಹಿತವಾಗಿವೆ, ಸುಳ್ಳಿನಿಂದ ಕೂಡಿವೆ ಎಂದು ಹೇಳಿದ್ದು, ಈ ಕುರಿತು ನಡೆಯುತ್ತಿರುವ ಎಸ್‌ಐಟಿ ತನಿಖೆಯಿಂದ ಹೊರಬರಲಿ ಎಂದು ತಿಳಿಸಿದ್ದಾರೆ.

ಆರೋಪಗಳ ಸತ್ಯಾಸತ್ಯತೆಯನ್ನು ಪತ್ತೆಹಚ್ಚಲು ರಾಜ್ಯ ಸರ್ಕಾರ ರಚಿಸಿರುವ ಎಸ್‌ಐಟಿ ಮತ್ತದರ ತನಿಖೆಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದರೆ ಆಧಾರರಹಿತ ಆರೋಪಗಳು, ಸುಳ್ಳುಗಳಿಂದ ನನಗೆ ನಿಜವಾಗಿಯೂ ನೋವಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪದ ವಿಷಯಗಳನ್ನು ಬಿಂಬಿಸುವ ರೀತಿ ನೈತಿಕವಾಗಿ ತಪ್ಪು ಎಂದು ಪ್ರತಿಪಾದಿಸಿದ್ದಾರೆ.

ಸುದ್ದಿಸಂಸ್ಥೆಯೊಂದಕ್ಕೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಹಲವಾರು ವಿಚಾರಗಳನ್ನು ತಿಳಿಸಿರುವ ಅವರು, ಧರ್ಮಸ್ಥಳದ ಸಾಮಾಜಿಕ ಸೇವೆಯ ದೀರ್ಘಕಾಲದ ಪರಂಪರೆಯ ಮೇಲಿನ ಈ ಆರೋಪಗಳು ಗಂಭೀರವಾಗಿವೆ ಎಂದರು.



ಈಗ ನಡೆಯುತ್ತಿರುವ ಎಸ್‌ಐಟಿ ತನಿಖೆಯ ಫಲಿತಾಂಶವು ಸತ್ಯವನ್ನು ಬಹಿರಂಗಪಡಿಸಲಿದೆ. ಸದ್ಯದ ವಿವಾದವು ಧರ್ಮಸ್ಥಳದ ಖ್ಯಾತಿಗೆ ಕಳಂಕವನ್ನುಂಟು ಮಾಡುವ ಯೋಜಿತ ಷಡ್ಯಂತ್ರವೇ ಎಂಬ ಪ್ರಶ್ನೆಗೆ ಉತ್ತರ ನೀಡಲಿದೆ ಎಂದು ಹೇಳಿದರು.

ಅಕ್ಟೋಬರ್ 9, 2012 ರಂದು ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಪಿಯುಸಿ ವಿದ್ಯಾರ್ಥಿನಿ ಸೌಜನ್ಯ (17) ▶ 6ನೇ ಪುಟಕ್ಕೆ

ಧರ್ಮಸ್ಥಳದಲ್ಲಿ ಷಡ್ಯಂತ್ರದ ಹಿಂದೆ ತಮಿಳ್ನಾಡು ಸಂಸದ ಸಸಿಕಾಂತ್ ಸೆಂಥಿಲ್ ಕೈವಾಡ!

ಬೆಂಗಳೂರು, ಆ.19– ದೇಶಾದ್ಯಂತ ವ್ಯಾಪಕ ಸುದ್ದಿಗೆ ಗ್ರಾಸವಾಗಿರುವ ಧರ್ಮಸ್ಥಳ ಪ್ರಕರಣದಲ್ಲಿ ದೊಡ್ಡ ಷಡ್ಯಂತ್ರ ನಡೆದಿದ್ದು, ಇದರಲ್ಲಿ ಕಾಂಗ್ರೆಸ್ ಸಂಸದ ಹಾಗೂ ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್ ಕೈವಾಡವಿದೆ ಎಂದು ಶಾಸಕ ಜನಾರ್ಧನ ರೆಡ್ಡಿ ಗಂಭೀರ ಆರೋಪ ಮಾಡಿದ್ದಾರೆ.



ಜನಾರ್ಧನ ರೆಡ್ಡಿ

ಬೆಂಗಳೂರಿನಲ್ಲಿ ಈ ಕುರಿತು ಮಾತನಾಡಿದ ಜನಾರ್ಧನ ರೆಡ್ಡಿ, ಧರ್ಮಸ್ಥಳ ದೇವಸ್ಥಾನದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದ ಹಿಂದೆ ತಮಿಳುನಾಡಿನ ಕಾಂಗ್ರೆಸ್ ಸಂಸದ ಹಾಗೂ ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್ ಕೈವಾಡವಿದೆ. ▶ 6ನೇ ಪುಟಕ್ಕೆ



ಧರ್ಮಸ್ಥಳದ ಬಗ್ಗೆ ಅಪಪ್ರಚಾರ ನಿಲ್ಲಿಸದಿದ್ದರೆ ಕಠಿಣ ಕ್ರಮ

ಯೂಟ್ಯೂಬರ್ಸ್‌ಗೆ ರಾಜ್ಯ ಸರ್ಕಾರ ಖಡಕ್ ಎಚ್ಚರಿಕೆ

ಬೆಂಗಳೂರು, ಆ.19– ಧರ್ಮಸ್ಥಳ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದಲ್ಲಿ ಜನರ ಭಾವನೆ ಕೆರಳಿಸುವಂತಹ ವರದಿಯ ಪ್ರಸಾರವನ್ನು ಯೂಟ್ಯೂಬರ್ಸ್ ಹಾಗೂ ಸಾಮಾಜಿಕ ಜಾಲತಾಣಗಳು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ಕಠಿಣ ಎಚ್ಚರಿಕೆ ನೀಡಿದೆ.



ಜಿ.ಪರಮೇಶ್ವರ್

ವಿಧಾನಸಭೆಯಲ್ಲಿ ಬಿಜೆಪಿ ಹಿರಿಯ ಶಾಸಕ ಮತ್ತು ಮಾಜಿ ಸಚಿವ ಎಸ್. ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಉತ್ತರಿಸಿದರು.

ಧರ್ಮಸ್ಥಳ ಗ್ರಾಮ ಪ್ರಕರಣದಲ್ಲೂ ಯೂಟ್ಯೂಬ್ ಸೇರಿ ಸಾಮಾಜಿಕ ಜಾಲತಾಣಗಳಲ್ಲಿ ಭಾವನೆಗಳನ್ನು ಕೆರಳಿಸುವಂತಹ ವರದಿ ಮಾಡಲಾಗುತ್ತಿದೆ ಎಂದು ದೂರುಗಳು ಬಂದಿವೆ.

ನಾವು ಅದನ್ನು ಗಮನಿಸಿದ್ದೇವೆ. ಹೀಗೆ ಅವಹೇಳನಕಾರಿಯಾಗಿ ಸುದ್ದಿ ಮಾಡುವವರು, ▶ 6ನೇ ಪುಟಕ್ಕೆ



ಮೈಸೂರು ಮಿತ್ರ ಬುಧವಾರ 20 ಆಗಸ್ಟ್ 2025

ಇಂದು ಡಿ.ದೇವರಾಜ ಅರಸು ಜನ್ಮ ದಿನಾಚರಣೆ



ಮೈಸೂರು,ಆ.19–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಆ.20 ರಂದು ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ 110ನೇ ಜನ್ಮ ದಿನಾಚರಣೆಯನ್ನು ಕರ್ನಾಟಕ ಕಲಾ ಮಂದಿರದಲ್ಲಿ ಬೆಳಿಗ್ಗೆ 10.30 ಗಂಟೆಗೆ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ, ಹೆಚ್.ಡಿ.ಕೋಟೆ ಶಾಸಕ ಅನಿಲ್‌ಕುಮಾರ್ ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್ ಡಿ., ಟಿ.ಎಸ್.ಶ್ರೀವತ್ಸ ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಮತ್ತು ವಿವೇಕಾನಂದ ಎಂ.ಕೆ. ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಗಿಗ್ ಕಾರ್ಮಿಕರ ವಿಧೇಯಕಕ್ಕೆ ವಿಧಾನಸಭೆ ಅಂಗೀಕಾರ

ಬೆಂಗಳೂರು, ಆ.19(ಕೆಎಂಶಿ)– ಕಾರ್ಮಿಕರ ಹಕ್ಕುಗಳ ರಕ್ಷಣೆ, ಸಾಮಾಜಿಕ ಭದ್ರತೆ, ವೃತ್ತಿಜನ್ಯ ಆರೋಗ್ಯ ಮತ್ತು ಸುರಕ್ಷತೆಗೆ ಒತ್ತು ನೀಡುವ 2025ನೇ ಸಾಲಿನ ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ವಿಧೇಯಕಕ್ಕೆ ವಿಧಾನಸಭೆ ಇಂದು ಅನುಮೋದನೆ ನೀಡಿತು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ವಿಧೇಯಕ ಮಂಡಿಸಿ, ಡಿಜಿಟಲ್ ವೇದಿಕೆಯಲ್ಲಿ ಕೆಲಸ ಮಾಡುವ ಗಿಗ್ ಕಾರ್ಮಿಕರಾಗಿದ್ದು, ಆಹಾರ ಧಾನ್ಯಗಳು, ಇ–ಮಾರ್ಕೆಟ್, ವೃತ್ತಿಪರ, ಸಾರಿಗೆ, ಆರೋಗ್ಯ ಸೇವೆ ಕೂಡ ಒಳಗೊಳ್ಳುತ್ತದೆ ಎಂದರು.

ದೇಶದಲ್ಲಿ ಹೊಸ ಪರಿಕಲ್ಪನೆ ಬಂದಿದೆ. ವಿದೇಶಗಳಲ್ಲೂ ಇಂತಹ ಕಾಯಿದೆ ಇದೆ. ವರ್ಷದಿಂದ ವರ್ಷಕ್ಕೆ ಇ–ಕಾಮರ್ಸ್ ಬೆಳೆಯುತ್ತಿದೆ, ನೀತಿ ಆಯೋಗದ ಪ್ರಕಾರ, 23.5 ಮಿಲಿಯನ್ ಕಾರ್ಮಿಕರು ಇದರ ವ್ಯಾಪ್ತಿಗೆ ಒಳಪಡಲಿದ್ದು, ಕರ್ನಾಟಕದಲ್ಲಿ 4 ಲಕ್ಷ ಡಿಜಿಟಲ್ ವೇದಿಕೆ ಕಾರ್ಮಿಕರಿದ್ದು, ದ್ವಿಚಕ್ರ ವಾಹನ, ತ್ರಿಚಕ್ರ ಹಾಗೂ ನಾಲ್ಕು ಚಕ್ರ ವಾಹನ ಉಳ್ಳವರಿದ್ದಾರೆ.

ಈ ಕಾರ್ಮಿಕರು ಕಾರ್ಬನ್ ಮೊನಾಕ್ಸೈಡ್ ಮತ್ತು ಕಾರ್ಬನ್ ಡೈಆಕ್ಸೈಡ್‌ನಿಂದ ತೊಂದರೆಗೆ ಒಳಗಾಗುತ್ತಾರೆ. ಅನಿಲ ಸೇವನೆಯಿಂದ ಆಟೋ ಚಾಲಕನೊಬ್ಬ ಒಂದು ದಿನಕ್ಕೆ 10 ಸಿಗರೇಟ್ ಸೇದಿದಂತಾಗುತ್ತದೆ. ಸರ್ಕಾರ ಇವರಿಗೆ 2 ಲಕ್ಷರೂ.ವರೆಗೆ ಆರೋಗ್ಯ ವಿಮೆ ಒದಗಿಸಿದೆ. 10,560 ಕಾರ್ಮಿಕರು ನೋಂದಾಯಿಸಿಕೊಂಡಿದ್ದಾರೆ.

ಡಿಜಿಟಲ್ ವೇದಿಕೆ ಸಂಗ್ರಹಗಾರರಿಗೆ ಹೊಣೆಗಾರಿಕೆ ವಹಿಸಲು ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ವಾನ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ವಿಧೇಯಕ ತರಲಾಗಿದೆ. ವಿವಾದ ಪರಿಹಾರ ವ್ಯವಸ್ಥೆ ಉಪಬಂಧಿಸುವುದು, ಕ್ಷೇಮಾಭಿವೃದ್ಧಿ ಮಂಡಳಿ ರಚಿಸುವುದು, ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವುದು ಒಳಗೊಂಡಿದೆ ಎಂದರು.

ಹಲವು ಸದಸ್ಯರು ಪಕ್ಷಭೇದ ಮರೆತು ಸಲಹೆ, ಸೂಚನೆ ನೀಡಿದ ನಂತರ ಸಭಾಧ್ಯಕ್ಷ ಯು.ಟಿ.ಖಾದರ್ ವಿಧೇಯಕವನ್ನು ಮತಕ್ಕೆ ಹಾಕಿದಾಗ ಸದನದ ಸರ್ವಾನುಮತದ ಅನುಮೋದನೆ ದೊರೆಯಿತು.

ಸೇಂಟ್ ಮೇರೀಸ್ ಸ್ಕೂಲ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ...




ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಕ್ಯಾಂಪಸ್‌ನ ಸೇಂಟ್ ಮೇರೀಸ್ ಸ್ಕೂಲ್‌ನಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪೂಜ್ಯ ಡಾ.ಬರ್ನಾರ್ಡ್ ಮೊರಾಸ್ ಅವರು, ಎಂದೆಂದಿಗೂ ನಮ್ಮ ರಾಷ್ಟ್ರವೇ ಮೊದಲು ಎಂಬ ಬದ್ಧತೆಯಲ್ಲಿ ನಾವು ಬದುಕಬೇಕು. ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿದು, ಶಾಂತಿ–ಸೌಹಾರ್ದತೆಯಿಂದ ಬದುಕಬೇಕೆಂದು ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು. ರೆವರೆಂಡ್ ಫಾದರ್ ಅಲೆಕ್ಸ್ ಪ್ರಶಾಂತ್ ಸಿಕ್ವೇರಾ ಸೇರಿದಂತೆ ಮತ್ತಿತರರು ಹಾಜರಿದ್ದರು.

ಬಸ್ ಡಿಕ್ಕಿ ; ಸ್ಕೂಟರ್ ಸವಾರನಿಗೆ ಗಂಭೀರ ಗಾಯ

ಮೈಸೂರು,ಆ.19(ಪಿಎಂ)– ನಗರ ಸಾರಿಗೆ ಬಸ್ ಡಿಕ್ಕಿಯಾದ ಪರಿಣಾಮ ಸ್ಕೂಟರ್ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದ ದಾಸಪ್ಪ ವೃತ್ತದಲ್ಲಿ ಮಂಗಳವಾರ ಸಂಜೆ ನಡೆದಿದೆ. ಮೈಸೂರಿನ ಶ್ರೀರಾಂಪುರ ನಿವಾಸಿ ಹನುಮಂತಪ್ಪ (54) ಗಾಯಗೊಂಡ ಸ್ಕೂಟರ್ ಸವಾರ. ದೇವರಾಜ ಸಂಚಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಗಾಯಾಳು ಹನುಮಂತಪ್ಪರನ್ನು ಆಸ್ಪತ್ರೆಗೆ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜಯಪುರ ಗ್ರಾಪಂ ಉಪಾಧ್ಯಕ್ಷರಾಗಿ ಮಂಗಳಮ್ಮ ಅವಿರೋಧ ಆಯ್ಕೆ



ಜಯಪುರ ಗ್ರಾಪಂ ಉಪಾಧ್ಯಕ್ಷೆ ಮಂಗಳಮ್ಮ ಅವರನ್ನು ಅಭಿನಂದಿಸಲಾಯಿತು.

ಮೈಸೂರು: ಮೈಸೂರು ತಾಲೂಕು ಜಯಪುರ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಕೆಲ್ಲಹಳ್ಳಿ ವಾರ್ಡ್‌ನ ಮಂಗಳಮ್ಮ ವಿಜಯ ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ರಾಜೀನಾಮೆಯಿಂದ ತೆರವಾದ ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಯಿತು. ಮಂಗಳಮ್ಮ ವಿಜಯ ಕುಮಾರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ದೇವೇಂದ್ರಪ್ಪ ಅವಿರೋಧ ಆಯ್ಕೆ ಘೋಷಣೆ ಮಾಡಿದರು.

ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಮಂಗಳಮ್ಮ ವಿಜಯಕುಮಾರ್ ಅವರನ್ನು ಜಯಪುರ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಸವಣ್ಣ, ಕಾರ್ಯದರ್ಶಿ ವೈ.ಕೆ.ಅನ್ನಪೂರ್ಣ, ಲೆಕ್ಕ ಸಹಾಯಕ ಆನಂದೇಗೌಡ ಅಭಿನಂದಿಸಿದರು. ಮುಖಂಡರಾದ ಕೆಲ್ಲಹಳ್ಳಿ ಬೈರೇಶ್, ರಾಣಿ ಮಂಜುನಾಥ್, ರಜನಿ ನಾಗರಾಜು, ನಿಂಗರಾಜು, ಶಿಳ್ಳೆಗೌಡ, ಬಸವಣ್ಣ, ನಾಗರಾಜು, ಜವರನಾಯಕ, ರೇಣುಕಾ, ಶಿವಣ್ಣ, ಹರೀಶ್, ಕಾಲೋನಿ ನಾಗರಾಜು, ಬಸವರಾಜು, ಬರಡನಪುರ ಮಹದೇವು, ಮಹಾದೇವಿ, ಸುಮಾ, ಶಿವರಾಜು, ಚಿಕ್ಕಣ್ಣ, ಸಣ್ಣಸ್ವಾಮಿ ಉಪಸ್ಥಿತರಿದ್ದರು.

ಪಿ.ಹೆಚ್.ಡಿ ಪದವಿ



ಮೈಸೂರು,ಆ.19–ಡಾ.ಮಹೆಜಿಬಿನ್ ಖಾನ್ ಅವರ ಮಾರ್ಗದರ್ಶನದಲ್ಲಿ ನಿಧಿ ಸೋರಿ ಅವರು ಸಾದರಪಡಿಸಿದ influence of symbiotic formulation on intestinal dysbios and gut microbiota ಎಂಬ ಮಹಾಪ್ರಬಂಧವನ್ನು ಸೂಕ್ಷ್ಮಜೀವವಿಜ್ಞಾನ ವಿಷಯದಲ್ಲಿ ಮಂಡಿಸಿದ್ದು, ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಉತ್ತಮರನ್ನು ಆಯ್ಕೆ ಮಾಡಿ, ಪ್ರಜಾಪ್ರಭುತ್ವ ಉಳಿಸಿ

ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಡಾ. 'ಮುಖ್ಯಮಂತ್ರಿ' ಚಂದ್ರು ಕರೆ

ಮೈಸೂರು,ಆ.19(ಜಿಎ)–ನಾವು ಆಯ್ಕೆ ಮಾಡುವ ಪ್ರತಿನಿಧಿ ಐದು ವರ್ಷದಲ್ಲಿ ಏನೆಲ್ಲ ಅಭಿವೃದ್ಧಿ ಮಾಡುತ್ತಾನೆ ಅಥವಾ ಭ್ರಷ್ಟಾಚಾರ ಮಾಡುತ್ತಾನಾ ಎಂಬ ವಿಚಾರವನ್ನು ತಿಳಿದು ಮತ ಚಲಾಯಿಸಬೇಕು. ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡುವ ಮೂಲಕ ಪ್ರಜಾಪ್ರಭುತ್ವ ಉಳಿಸಲು ಮುಂದಾಗಬೇಕು ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಡಾ.'ಮುಖ್ಯಮಂತ್ರಿ' ಚಂದ್ರು ತಿಳಿಸಿದರು.

ಮೈಸೂರಿನ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನಲ್ಲಿ 'ದಾರಿ ಫೌಂಡೇಶನ್' ಮೈಸೂರು ವತಿಯಿಂದ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ' ಮುಕ್ತ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರಿನ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ' ಮುಕ್ತ ಸಂವಾದ ಕಾರ್ಯಕ್ರಮವನ್ನು ಡಾ.ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

> ಹಿಂದೆ ರಾಜರು ಅರಮನೆಯಲ್ಲಿ ಹುಟ್ಟಿ ಅನೇಕ ಅಭಿವೃದ್ಧಿ ಮಾಡಿದರು. ಆದರೆ, ಇದೀಗ ಅರಮನೆಗಳನ್ನು ಕಟ್ಟಿಕೊಳ್ಳಲು ಮುಖ್ಯಮಂತ್ರಿ, ಮಂತ್ರಿ, ಎಂಎಲ್‌ಎ, ಎಂಪಿ ಆಗುತ್ತಿದ್ದಾರೆ. ಶಾಸಕಾಂಗದ ಜವಾಬ್ದಾರಿ ಏನು? ಗಣಿ ಲೂಟಿಯಿಂದ 35 ಕೋಟಿ ರೂ. ಕಿರೀಟವನ್ನು ದೇವಸ್ಥಾನಕ್ಕೆ ದಾನವಾಗಿ ನೀಡಿದವರು ಎಂಎಲ್‌ಎ ಆಗುತ್ತಿದ್ದಾರೆ. ಹತ್ತಾರು ಕೊಲೆ ಮಾಡಿದವರು ಮುಖ್ಯಮಂತ್ರಿ ಆಗಬಹುದು. ನಮ್ಮ ದೇಶ ಎಲ್ಲಿಗೆ ಬಂದಿದೆ ಎಂದು ಯುವಕರು ಯೋಚಿಸಬೇಕು.
>
> –ಡಾ.ಮುಖ್ಯಮಂತ್ರಿ ಚಂದ್ರು, ರಾಜ್ಯಾಧ್ಯಕ್ಷ, ಆಮ್ ಆದ್ಮಿ ಪಕ್ಷ

ಬದುಕಿಗಾಗಿ ಒಂದು ಉದ್ಯೋಗ ಪಡೆಯುವ ಜೊತೆಗೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು. ಕನ್ನಡಾಭಿಮಾನವನ್ನು ಮೈಗೂಡಿಸಿಕೊಂಡು ದೇಶದ ಭವಿಷ್ಯ ರೂಪಿಸಲು ಸ್ವಲ್ಪ ಆಲೋಚಿಸಬೇಕು. ಮುಖ್ಯವಾಗಿ ಸಂವಿಧಾನ ಉಳಿಸಲು, ಪ್ರಜಾಪ್ರಭುತ್ವ ರಕ್ಷಿಸಲು ಉತ್ತಮ ಜನಪ್ರತಿನಿಧಿ ಆಯ್ಕೆ ಮಾಡಬೇಕು. ನಾವು ಆಯ್ಕೆ ಮಾಡುವ ಪ್ರತಿನಿಧಿ ಐದು ವರ್ಷದಲ್ಲಿ ಏನೆಲ್ಲ ಅಭಿವೃದ್ಧಿ ಮಾಡುತ್ತಾನೆ ಅಥವಾ ಭ್ರಷ್ಟಾಚಾರ ಮಾಡುತ್ತಾನಾ ಎಂಬ ವಿಚಾರವನ್ನು ತಿಳಿದು ಮತ ಚಲಾಯಿಸಬೇಕು ಎಂದರು.

ಪ್ರಪಂಚದಲ್ಲೇ ಭಾರತದಲ್ಲಿ ದೊಡ್ಡ ಸಂವಿಧಾನ ಇದೆ. ವಿವಿಧತೆಯಲ್ಲಿ ಏಕತೆ ಕಂಡಿರುವ ದೇಶ ನಮ್ಮದು. ಅನೇಕ ಧರ್ಮ, ಜಾತಿ, ಸಂಪ್ರದಾಯ, ಸಮಸ್ಯೆ, ಭಾಷೆ, ಅನ್ಯಾಯ ಎಲ್ಲವನ್ನು ಒಳಗೊಂಡು ಬದುಕುತ್ತಿದ್ದೇವೆ. ನಮ್ಮ ಒಕ್ಕೂಟ ವ್ಯವಸ್ಥೆ ಉತ್ತಮ ಚೌಕಟ್ಟಿನಲ್ಲಿ ನಡೆಸಲು ಡಾ.ಬಿ.ಆರ್.ಅಂಬೇಡ್ಕರ್ ಮತ್ತು ತಂಡದವರು ಸಂವಿಧಾನ ನೀಡಿದ್ದಾರೆ. ಸಮಾಜವನ್ನು ಕಾಪಾಡಿದರೆ ದೇಶವನ್ನು ಉಳಿಸಿದಂತೆ, ದೇಶವನ್ನು ಉಳಿಸಿದಾಗ ಸಂವಿಧಾನವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಾಧ್ಯ ಎಂದು ತಿಳಿಸಿದರು.

ಪ್ರಜಾಪ್ರಭುತ್ವ ಉಳಿಸಲು, ಸಂವಿಧಾನ ರಕ್ಷಿಸಲು ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗಗಳು ಬಹಳ ಮುಖ್ಯ. ಈ ಮೂರು ಅಂಗಗಳ ಜತೆಗೆ ಪತ್ರಿಕಾರಂಗವೂ ಮುಖ್ಯ. ಆದರಿಂದ ಸಮಾಜ ಕೆಡಲು ಈ ಎಲ್ಲ ಅಂಗಗಳು ಕಾರಣವಾಗಿದೆ. ರಾಜಕಾರಣದಲ್ಲಿ ಧರ್ಮ ಇರಬೇಕೇ ಹೊರೆತು ಧರ್ಮವೇ ರಾಜಕಾರಣ ಆಗಬಾರದು. ಇಂದು ಧರ್ಮಸ್ಥಳ ವಿಚಾರದಲ್ಲಿ ಅದೇ ಆಗಿದೆ. ಧರ್ಮಸ್ಥಳದ ಪ್ರಕರಣವನ್ನು ಸಂಪೂರ್ಣ ವೈಭವೀಕರಿಸಲಾಗಿದೆ ಎಂದು ಡಾ.ಮುಖ್ಯಮಂತ್ರಿ ಚಂದ್ರು ಬೇಸರ ವ್ಯಕ್ತಪಡಿಸಿದರು.

ಮದ್ಯಪಾನ ಕೆಟ್ಟದ್ದು. ಅದನ್ನು ತಡೆಯಲು ಸರ್ಕಾರ ಒಂದು ಮಂಡಳಿ ಸ್ಥಾಪಿಸಿದೆ. ಆದರೆ, ಅದೇ ಸರ್ಕಾರ ಮತ್ತೊಂದು ಇಲಾಖೆಯಿಂದ ಮದ್ಯ ಮಾರಾಟ ಮಾಡಿಸುತ್ತಿದೆ. ಇದು ಪ್ರಜಾಪ್ರಭುತ್ವದ ವಿಪರ್ಯಾಸ. ಸಮಾಜವಾದ ಎಂದರೆ ಕಟ್ಟಕಡೆ ಮನುಷ್ಯರು ಅಭಿವೃದ್ಧಿ ಆಗಬೇಕು. ಆದರೀಗ ಬಡವರ ಮಕ್ಕಳು ಡಾಕ್ಟರ್, ಇಂಜಿನಿಯರ್, ಲಾಯರ್ ಆಗಲು ಸಾಧ್ಯನಾ? ಅವರಿಗೆ ಅಪಾರ ಜ್ಞಾನ ಇದ್ದರೂ ಶಿಕ್ಷಣ ಸಂಸ್ಥೆಗಳಿಗೆ ಹಣ ಕಟ್ಟಲು ಆಗುತ್ತಿಲ್ಲ. ಇಂತಹ ವ್ಯವಸ್ಥೆಯನ್ನು ಎಲ್ಲಿಂದ ಸರಿಪಡಿಸಬೇಕು ಎಂದು ಆಲೋಚಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಂಶುಪಾಲರಾದ ಡಾ.ಎಂ.ದೇವಿಕಾ, ನವೀನ್, ಮಹೇಶ್, ದಾರಿ ಫೌಂಡೇಶನ್ ಅಧ್ಯಕ್ಷ ಎಲ್.ರಂಗಯ್ಯ, ಪದಾಧಿಕಾರಿಗಳಾದ ಸಕಲೇಶಪುರ ಗುಂಡಪ್ಪ ಸೀತಾರಾಮ್, ರವಿಕುಮಾರ್, ವಿರೇಶ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ವಿವಿ ಪ್ರವೇಶಕ್ಕೆ ವಿದ್ಯಾರ್ಥಿಗಳು ಹಿಂದೇಟು

ಗಂಗೋತ್ರಿಯ 9 ವಿಭಾಗಗಳು ಮುಚ್ಚುವ ಆತಂಕ


ಒಂದು ಕಾಲದಲ್ಲಿ ಸೀಟಿಗೆ ಡಿಮ್ಯಾಂಡಪ್ಪೊ ಡಿಮ್ಯಾಂಡಿತ್ತು; ಈಗ ಗತವೈಭವ ಬರೀ ನೆನಪಷ್ಟೇ

ಮೈಸೂರು, ಆ.19(ಎಸ್‌ಪಿಎನ್)– ಶತಮಾನ ಆಚರಿಸಿಕೊಂಡಿರುವ ಮೈಸೂರು ವಿವಿಯ 9 ವಿಭಾಗಗಳಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಅರ್ಜಿ ಹಾಕುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ.

ಸಾಮಾನ್ಯವಾಗಿ ಮೈಸೂರು ವಿವಿ ಮಾನಸ ಗಂಗೋತ್ರಿಯ ಸ್ನಾತಕೋತ್ತರ ವಿಭಾಗಕ್ಕೆ ವಿದ್ಯಾರ್ಥಿಗಳು ದಾಖಲಾಗಬೇಕಾದರೆ ಮೊದಲು ಸಾಮಾನ್ಯ ಪರೀಕ್ಷೆಯನ್ನು (ಸ್ಪರ್ಧಾತ್ಮಕ ಪರೀಕ್ಷೆ) ಎದುರಿಸಬೇಕು. ಇದರಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಾಧ್ಯ. ಯಾವುದೇ ಒಂದು ವಿಷಯಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯಬೇಕಾದರೆ ಕನಿಷ್ಠ 100 ಅರ್ಜಿಗಳು ಬರಬೇಕು.

ಆದರೆ, ಈ ಶೈಕ್ಷಣಿಕ ಸಾಲಿನಲ್ಲಿ 20 ವಿಷಯಗಳಿಗೆ ನಿರೀಕ್ಷಿತ ಅರ್ಜಿ ಬಾರದ ಕಾರಣ ಈ ವಿಭಾಗಗಳಿಗೆ ನಡೆಸುವ ಸಾಮಾನ್ಯ ಪರೀಕ್ಷೆಯನ್ನೇ ವಿವಿ ರದ್ದುಪಡಿಸಿದೆ. ಅದರಲ್ಲಿ 9 ವಿಷಯಗಳಿಗೆ 15ಕ್ಕೂ ಕಡಿಮೆ ಅರ್ಜಿಗಳು ಬಂದಿರುವ ಕಾರಣ ಆ ವಿಭಾಗಗಳು ಮುಚ್ಚುವ ಪರಿಸ್ಥಿತಿ ಎದುರಾಗಿದೆ ಎಂದು ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಜಿಲ್ಲೆಗೊಂದು ವಿವಿ ಸ್ಥಾಪನೆಯಾದ ಕಾರಣ ಮೈಸೂರು ವಿವಿ ಕಳೆದೆರಡು ವರ್ಷದಿಂದ ದಾಖಲಾತಿ ಪ್ರಮಾಣದಲ್ಲಿ ಕುಸಿತ ಕಂಡಿದೆ. ಮೊದಲು ಮೈಸೂರು ವಿವಿ ವ್ಯಾಪ್ತಿಯಲ್ಲಿ 232 ಕಾಲೇಜು ಗಳು ಬರುತ್ತಿದ್ದವು. ಈಗ ಆ ಸಂಖ್ಯೆ 111ಕ್ಕೆ ಇಳಿದಿದೆ. ಅಲ್ಲದೆ, ಕಳೆದ ವರ್ಷ ಮಾನಸ ಗಂಗೋತ್ರಿಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಬಯಸಿ 9 ಸಾವಿರಕ್ಕೂ



ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆದರೆ, ಈ ಬಾರಿ 5,119 ವಿದ್ಯಾರ್ಥಿ ಗಳು ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ 4,833 ವಿದ್ಯಾರ್ಥಿ ಗಳು ಸಾಮಾನ್ಯ ಪ್ರವೇಶ ಪರೀಕ್ಷೆ ಎದುರಿಸಿದ್ದಾರೆ.

9 ವಿಭಾಗ ಮುಚ್ಚುವ ಆತಂಕ: ಪ್ರಸ್ತುತ ಮೈಸೂರು ವಿವಿಯಲ್ಲಿ 58 ವಿಷಯಗಳಲ್ಲಿ ವ್ಯಾಸಂಗ ಮಾಡಲು ಅವಕಾಶವಿದೆ. ಇದರಲ್ಲಿ ಈ ಬಾರಿ 20 ವಿಭಾಗಗಳಿಗೆ ಅತೀ ಕಡಿಮೆ ಅರ್ಜಿಗಳು ಬಂದಿವೆ. ಎಂಎ ಹಿಂದಿ, ಎಂಎಸ್ಸಿ ಮಾಹಿತಿ ತಂತ್ರಜ್ಞಾನ ಹಾಗೂ ಎಂಎ ಸಂಸ್ಕೃತ ವಿಷಯಗಳಿಗೆ ಕೇವಲ 2 ಅರ್ಜಿಗಳು ಬಂದಿವೆ. ಎಂಎಸ್ಸಿ ಅನಿಮೇಶನ್‌ಗೆ 3, ಎಂಎಸ್ಸಿ ಮಾನವ ಅಭಿವೃದ್ಧಿಗೆ 9, ಎಂಟೆಕ್ ಮೆಟಿರಿಯಲ್ ಸೈನ್ಸ್‌ಗೆ 11, ಎಂಎ ಮಾನವಶಾಸ್ತ್ರಕ್ಕೆ 12 ಹಾಗೂ ಎಂಎ ಉರ್ದುಗೆ 13 ಅರ್ಜಿಗಳಷ್ಟೇ ಬಂದಿವೆ. ಯಾವುದೇ ವಿಭಾಗವನ್ನು ನಡೆಸಬೇಕಾದರೆ ಕನಿಷ್ಠ 15 ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬೇಕು. ಹೀಗಾಗಿ 15ಕ್ಕಿಂತ ಕಡಿಮೆ ಅರ್ಜಿ ಬಂದಿರುವ 9 ವಿಭಾಗ ಮುಚ್ಚುವ ಆತಂಕ ಎದುರಾಗಿದೆ.

ಸಾಮಾನ್ಯವಾಗಿ ಒಂದು ವಿಭಾಗಕ್ಕೆ ಕನಿಷ್ಠ 40 ವಿದ್ಯಾರ್ಥಿಗಳು, ಗರಿಷ್ಠ 60 ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಅವಕಾಶವಿದೆ. ಇದರಲ್ಲಿ 40 ಸೀಟು ಇರುವ ವಿಭಾಗಕ್ಕೆ 30 ಸರ್ಕಾರಿ ಕೋಟಾ ಇರುತ್ತವೆ 10 ಪೇಮೆಂಟ್ ಕೋಟಾ ಇರುತ್ತದೆ. 60 ಸೀಟು ಇರುವ ವಿಷಯಗಳಿಗೆ 40 ಸರ್ಕಾರಿ ಸೀಟು, 20 ಪೇಮೆಂಟ್ ಸೀಟು ಇರುತ್ತದೆ.


> ಮೈಸೂರು ವಿವಿಯ ಎಲ್ಲಾ ವಿಭಾಗಗಳಲ್ಲೂ ಖಾಯಂ ಅಧ್ಯಾಪಕರ ಸಂಖ್ಯೆ ಕಡಿಮೆಯಾಗುತ್ತಿದೆ. ವರ್ಷದಿಂದ ವರ್ಷಕ್ಕೆ ನಿವೃತ್ತಿ ಹೊಂದುತ್ತಿರುವ ಸಂಖ್ಯೆ ಹೆಚ್ಚಾಗುತ್ತಿದೆ. ಮೈಸೂರು ವಿವಿಯಲ್ಲಿ ಈಗ ಶೇ.70 ರಷ್ಟು ಅತಿಥಿ ಶಿಕ್ಷಕರ ನೆರವಿನಿಂದ ಬೋಧನಾ ಚಟುವಟಿಕೆಗಳು ನಡೆಯುತ್ತಿವೆ. ಇದರಿಂದ ಗುಣಮಟ್ಟದ ಶಿಕ್ಷಣ ನೀಡಲು ವಿವಿ ಆಡಳಿತ ಮಂಡಳಿಗೆ ಸಾಧ್ಯವಾಗುತ್ತಿಲ್ಲ.
>
> - ಡಾ.ಎಚ್.ಮರಿದೇವಯ್ಯ, ಮಾಜಿ ಅಧ್ಯಕ್ಷರು, ಮೈಸೂರು ವಿವಿ ಸಂಶೋಧಕ ಸಂಘ

> ಮೈಸೂರು ವಿವಿಯಲ್ಲಿ ಸೀಟು ಇರುವಷ್ಟೇ ಪ್ರಮಾಣದಲ್ಲಿ ಅರ್ಜಿಗಳು ಬಂದರೆ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವುದು ಹೇಗೆ? ಈ ಶೈಕ್ಷಣಿಕ ಸಾಲಿನಲ್ಲಿ ಎಲ್ಲಾ ವಿಷಯದ ಸ್ನಾತಕೋತ್ತರ ವಿಭಾಗಗಳಿಗೆ 5 ಸಾವಿರ ಅರ್ಜಿಗಳಷ್ಟೇ ಬಂದಿವೆ. 9 ವಿಷಯಗಳಿಗೆ ಪ್ರವೇಶಾತಿ ಪಡೆಯಲು 15ಕ್ಕಿಂತ ಕಡಿಮೆ ಅರ್ಜಿ ಸಲ್ಲಿಕೆಯಾಗಿವೆ. ವಿದ್ಯಾರ್ಥಿಗಳೇ ದಾಖಲಾಗದಿದ್ದರೆ ಈ ವಿಭಾಗಗಳನ್ನು ಮುಚ್ಚುವುದು ಅನಿವಾರ್ಯ.
>
> - ಪ್ರೊ.ಎನ್.ಕೆ.ಲೋಕನಾಥ್, ಕುಲಪತಿ, ಮೈಸೂರು ವಿವಿ

ದಾಖಲಾತಿ ಕುಸಿತಕ್ಕೆ ಕಾರಣ: ರಾಜ್ಯ ಸರ್ಕಾರ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಜಿಲ್ಲೆಗೊಂದು ವಿವಿ ಸ್ಥಾಪನೆ, ವಿವಿಗಳಲ್ಲಿ ಖಾಯಂ ಬೋಧಕರ ಕೊರತೆ, ಖಾಸಗಿ ಶಿಕ್ಷಣ ಸಂಸ್ಥೆಗಳ ಪೈಪೋಟಿ, ವಿವಿಯಿಂದ ಸಮರ್ಪಕವಾಗಿ ಕ್ಯಾಂಪಸ್ ಸೆಲೆಕ್ಷನ್ ಒತ್ತು ಹಾಗೂ ಬೋಧಕರ ನಡುವೆ ಜಾತಿ ರಾಜಕಾರಣ ವಿಪರೀತವಾಗುತ್ತಿರುವ ಹಿನ್ನೆಲೆಯಲ್ಲಿ ಕೆಲ ವಿಭಾಗಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ.

ಈ ಹಿಂದೆ ಹಿರಿಮೆಯಿತ್ತು: ಮೈಸೂರು ವಿವಿಯಲ್ಲಿ ಸ್ನಾತಕೋತ್ತರ ಪದವಿ, ಪಿಎಚ್‌ಡಿ ಪಡೆದವರಿಗೆ ಬೇರೆಬೇರೆ ಕ್ಷೇತ್ರದಲ್ಲಿ ಸ್ಕೋಪ್ ಇತ್ತು. ಅಲ್ಲದೆ, ರಾಜ್ಯದ ಇತರೆ ವಿವಿಗಳಿಗಿಂತ ಮೈಸೂರು ವಿವಿ ಪದವಿ ಪ್ರಮಾಣ ಪತ್ರಕ್ಕೆ ತಾರಾ ಮೌಲ್ಯವಿತ್ತು. ಈಗಿನ ಆಧುನಿಕ ಪರಿಭಾಷೆಯಲ್ಲಿ ಹೇಳಬೇಕೆಂದರೆ ಒಂದೊಳ್ಳೆಯ ಬ್ರ್ಯಾಂಡ್ ಕೂಡ ಇದೆ. ಇದೇ ಕಾರಣಕ್ಕಾಗಿ ಕೇಂದ್ರ ಸರ್ಕಾರ ಸೆಂಟ್ರಲ್ ಆಫ್ ಎಕ್ಸಲೆನ್ಸ್ ಶೀರ್ಷಿಕೆಯಡಿ ಅನುದಾನವನ್ನೂ ನೀಡಿತ್ತು. ಆದರೆ ಈಗ ವಿವಿ ತಾರಾ ಆಕರ್ಷಣೆಯನ್ನೇ ಕಳೆದುಕೊಳ್ಳುತ್ತಿದೆ. ವಿವಿಗೆ ಹೆಸರು ತಂದುಕೊಡುವ ಪ್ರಾಧ್ಯಾಪಕರೂ ನೇಮಕವಾಗಿಲ್ಲ. ಎಲ್ಲರೂ ಆರಂಕಿ ಸಂಬಳ ಪಡೆದು ಬೇರೆ ಬೇರೆ ವ್ಯವಹಾರ ನಡೆಸುತ್ತಿದ್ದಾರೆ ಎಂದು ವಿವಿಯ ನಿವೃತ್ತ ಪ್ರಾಧ್ಯಾಪಕರೊಬ್ಬರು 'ಮೈಸೂರು ಮಿತ್ರ' ಜತೆ ಬೇಸರ ವ್ಯಕ್ತಪಡಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.08.2025 ಬುಧವಾರ, ಮಳೆ ನಕ್ಷತ್ರ: ಮಖ 17.08.2025ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಮಲೇಷಿಯಾ ಯೂನಿವರ್ಸಿಟಿ:** ಡಿಜಿಟಲ್ ಇನ್ನೋವೇಷನ್ ಅಂಡ್ ಟ್ರಾನ್ಸ್‌ಫಾರ್ಮೇಷನ್ ಇನ್ ಸೌತ್ ಈಸ್ಟ್ ಏಷಿಯಾ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು: ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್, ಗೌರವ ಅತಿಥಿಗಳು: ಮಲೇಷಿಯಾ ವಿಜ್ಞಾನ–ತಂತ್ರಜ್ಞಾನ ವಿವಿ ಅಧ್ಯಕ್ಷ ಡಾ.ಪ್ರೇಮಕುಮಾರ್ ರಾಜಗೋಪಾಲ್, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್, ಕುಲಪತಿ ಪ್ರೊ.ಸಂತೋಷ್‌ಕುಮಾರ್, ಕುಲಸಚಿವ ಪ್ರೊ.ಧನರಾಜ್, ಪ್ರಿನ್ಸಿಪಾಲ್ ಡಾ. ನಟರಾಜು, ಸ್ಥಳ: ಆರ್.ಪಿ. ಸಿಂಘಾನಿಯಾ ಸಭಾಂಗಣ, ಬೆಳಗ್ಗೆ 8.30ಕ್ಕೆ.

■ **ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜು ಮತ್ತು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ):** ತಾಲೂಕು ಮಟ್ಟದ ಬಾಲಕರ ವಾಲಿಬಾಲ್ ಹಾಗೂ ಬಾಲಕಿಯರ ಥ್ರೋಬಾಲ್ ಪಂದ್ಯಾವಳಿ, ಮುಖ್ಯ ಅತಿಥಿಗಳು: ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕಿ ಶ್ರೀಮತಿ ನಾಗಮ್ಮ, ಅಧ್ಯಕ್ಷತೆ: ಸಂತ ಫಿಲೋಮಿನಾ ಕಾಲೇಜಿನ ರೆಕ್ಟರ್ ಫಾ.ಡಾ.ಲೂರ್ದು ಪ್ರಸಾದ್ ಜೋಸೆಫ್, ಉಪಸ್ಥಿತರು : ಫಾ. ಗ್ನಾನಪ್ರಾಸಂ (ಆಡಳಿತಾಧಿಕಾರಿ), ಫಾ.ಡೇವಿಡ್ ಸಾಗಯರಾಜ್ ಎಸ್. (ಸಹಾಯಕ ರೆಕ್ಟರ್), ಸುನಿಲ್ ಡಿಸೋಜ (ಪ್ರಾಂಶುಪಾಲರು, ಪದವಿ ಪೂರ್ವ ವಿಭಾಗ), ಡಾ.ರವಿ ಜೆ.ಡಿ. ಸಲ್ಡಾನ್ಹಾ (ಪ್ರಾಂಶುಪಾಲರು–ಪದವಿ ವಿಭಾಗ), ಸ್ಥಳ: ಕಾಲೇಜಿನ ಒಳಾಂಗಣ ಕ್ರೀಡಾಂಗಣ, ಬನ್ನಿಮಂಟಪ, ಬೆಳಗ್ಗೆ 9ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮಧು ಮೇಹದ ಗಾಯಗಳಿಗೆ ಚಿಕಿತ್ಸೆ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಎಲ್ಲಾ ತರಹದ ತಲೆನೋವಿಗೆ ಚಿಕಿತ್ಸೆ, ಆರ್ಥರೈಟಿಸ್‌ಗೆ, ಕುತ್ತಿಗೆ ನೋವು ಮತ್ತು ಭುಜದ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸಯಾಟೀಕ, ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ.ಎಸ್.ಪೂರ್ಣಿಮಾ, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿಸರಣಿ, ಗಾಯನ–ಕೆ.ಪಿ.ರೇವತಿ ಹಾಗೂ ಜಯಂತಿ ಭಟ್, ವ್ಯಾಖ್ಯಾನ–ಡಾ.ಎನ್.ಎಸ್.ತಾರಾನಾಥ್, 6.50 ರೈತರಿಗೆ ಸಲಹೆ, 7.15 ಭಾವ ಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಜ್ಞಾನ್ ಪ್ರಕಾಶ್ ಘೋಷ್–ಹಾರ್ಮೋನಿಯಂ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಪತ್ರೋತ್ತರ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20–ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಜಿ.ಉಷಾ–ಹಾಡುಗಾರಿಕೆ, 4.00 ಮಹಿಳಾ ರಂಗ–ಮಹಿಳೆಯರ ಆರೋಗ್ಯದಲ್ಲಿ ಆಹಾರದ ಪಾತ್ರ ಈ ಕುರಿತು ಆಹಾರತಜ್ಞೆ ಸುಮಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ– ದಿಗ್ವಿಜಯ್ .ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಶಾಂತಾಕಿಣಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಹಲೋ ಕೃಷಿರಂಗ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಸಸ್ಯ ಸಂರಕ್ಷಣೆ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ, ಭಾಗವಹಿಸುತ್ತಾರೆ–ಜಂಟಿ ಕೃಷಿ ನಿರ್ದೇಶಕರಾದ ಕೆಂಪೇಗೌಡ, 7.20 ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, 7.35 ಕನ್ನಡದಲ್ಲಿ ವಾರ್ತೆಗಳು, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಸಂಶೋಧನಾ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ನಿರ್ದೇಶಕರಾದ ಡಾ.ಎಸ್. ಗಾಂಧಿದಾಸ್ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ–ಎನ್.ಕೇಶವಮೂರ್ತಿ, 9.30 ಕ್ರೀಡಾಲೋಕ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ, 10.15 ಜನಪದ ಸಂಗೀತ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನು ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಕಾಂಗ್ರೆಸ್ ಯುಗ ಪುರುಷರಾದ ಡಿ.ದೇವರಾಜ ಅರಸು, ರಾಜೀವ್‌ಗಾಂಧಿ ಜಯಂತಿ ಆಚರಣೆ, ಉದ್ಘಾಟನೆ: ಅರಸು ಅವರ ಆಪ್ತ ಒಡನಾಡಿ ಮಾಜಿ ಮಂತ್ರಿ ದಿವಂಗತ ಹೆಚ್.ಎಂ.ಚನ್ನಬಸಪ್ಪ ಅವರ ಪುತ್ರಿ ಶ್ರೀಮತಿ ರಾಣಿ ಸತೀಶ್, ಉಪಸ್ಥಿತರು: ಇತಿಹಾಸ ಹಾಗೂ ಪರಂಪರೆ ತಜ್ಞ ಪ್ರೊ. ಎಸ್.ಎನ್.ರಂಗರಾಜು, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ನಗರ ಅಧ್ಯಕ್ಷ ಆರ್.ಮೂರ್ತಿ, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11.30ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ವಾಚನ–ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಸಂಚಲನ ಮೈಸೂರು:** ಸಂಚಲನ ರಂಗ ತಂಡದ ಕಲಾವಿದರಿಂದ ಎರಡೆರಡ್ಲಾ ಐದು ನಾಟಕ ಪ್ರದರ್ಶನ, ರಚನೆ: ಆಸಿಫ್ ಕ್ಷತ್ರಿಯ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.

ಎಲ್ಲಾ ಸಹಕಾರಿ ಸಂಸ್ಥೆಗಳು ಒಂದೇ ಎಂದು ಪರಿಭಾವಿಸಬೇಡಿ; ಸ್ವಾಯತ್ತ, ಸ್ವಾವಲಂಬನಾ ಸಹಕಾರ ಕ್ಷೇತ್ರದ ಶಕ್ತಿ ಕುಂದಿಸಬೇಡಿ

● ಸಹಕಾರ ಕಾಯಿದೆ ತಿದ್ದುಪಡಿ ವಿಧೇಯಕದ ಮೇಲಿನ ಚರ್ಚೆಯಲ್ಲಿ ಹಿರಿಯ ಸಹಕಾರಿ ಶಾಸಕ ಜಿ.ಟಿ.ದೇವೇಗೌಡರ ನೋವಿನ ನುಡಿ ● ಸರ್ಕಾರಿ ಪಾಲುದಾರಿಕೆ, ಷೇರು ಧನ ಹೊಂದಿರುವ ಸಹಕಾರ ಸಂಸ್ಥೆಗಳಿಗೆ ನಾಮ ನಿರ್ದೇಶನ, ಮೀಸಲಾತಿ ನೀಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ ● ಯಾವುದೇ ಮಾನದಂಡವಿಲ್ಲದೆ ಎಲ್ಲಾ ಸಹಕಾರಿ ಸಂಘಗಳಿಗೆ ನಾಮ ನಿರ್ದೇಶನ, ಮೀಸಲಾತಿ ನ್ಯಾಯಸಮ್ಮತವೇ? ● ಅಧಿಕಾರ ತ್ಯಾಗ ಮಾಡಿ, ದಲಿತ ಸಹಕಾರಿ ಮುಖಂಡನ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷನ ಮಾಡಿದ ನಾನು ದಲಿತ ವಿರೋಧಿನಾ?

ಮೈಸೂರು, ಆ.19(ಎಂಕೆ)– ಸರ್ಕಾರದ ಪಾಲುದಾರಿಕೆ ಹಾಗೂ ಷೇರು ಧನ ಇರುವ ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡಿ, ಮೀಸಲಾತಿ ಕಲ್ಪಿಸಲು ನಮ್ಮದು ಯಾವುದೇ ತಕರಾರಿಲ್ಲ ಎಂದು ಮಾಜಿ ಸಚಿವರೂ, ಹಿರಿಯ ಸಹಕಾರಿ ಧುರೀಣರೂ ಆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಸರಿಯಲ್ಲ ಎಂಬುದನ್ನು ಎಳೆ ಎಳೆಯಾಗಿ ಮನದಟ್ಟು ಮಾಡಿದ್ದಾರೆ.

ವಿಧಾನಸಭಾ ಅಧಿವೇಶನದಲ್ಲಿ ಸಹಕಾರ ಕಾಯಿದೆ ತಿದ್ದುಪಡಿ ವಿಧೇಯಕ ಚರ್ಚೆಯಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಸಹಕಾರ ಸಂಘಕ್ಕೂ ಹೊಸದಾಗಿ 3 ಜನರನ್ನು ನಾಮ ನಿರ್ದೇಶನ ಮಾಡಲು ತಿದ್ದುಪಡಿಯಲ್ಲಿ ಅವಕಾಶ ನೀಡಲಾಗಿದ್ದು, ಇದರ ಬಗ್ಗೆ ನಮ್ಮ ಎಲ್ಲಾ ಸಹಕಾರಿಗಳಿಂದ ಯಾವುದೇ ತಕರಾರು ಇಲ್ಲ.

ಸಹಕಾರ ಕಾಯಿದೆಯಲ್ಲಿ ಈಗಾಗಲೇ 6 ಸದಸ್ಯರಿಗೆ ಮೀಸಲಾತಿ ಕಲ್ಪಿಸಿದ್ದು, ಮತ್ತೆ 3 ಜನರಿಗೆ ಮೀಸಲಾತಿ ಕಲ್ಪಿಸಲು ಸರ್ಕಾರ ಮುಂದಾಗಿದೆ. ಇದೇ ಬಿಲ್ ವಿಚಾರವಾಗಿ ಅಧಿವೇಶನದಲ್ಲಿ ಮಾತನಾಡಿದ್ದಕ್ಕೆ ಪರಿಶಿಷ್ಟ ಜಾತಿ ಸಮುದಾಯದವರು ನನ್ನ ವಿರುದ್ಧ ಧರಣಿ ಮಾಡಿದರು. ಇದುವರೆಗೂ ರಾಜ್ಯದ 30 ಜಿಲ್ಲಾ ಸಹಕಾರ ಯೂನಿಯನ್‌ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಅಧ್ಯಕ್ಷರನ್ನಾಗಿ ಯಾರೂ ಸಹ ಮಾಡಿಲ್ಲ. ಆದರೆ, ನಾನು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ, ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ದಲಿತ ಸಹಕಾರಿ ಮುಖಂಡರಾದ ನಂಜುಂಡಸ್ವಾಮಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೆ ಎಂದು ತಿಳಿಸುವ ಮೂಲಕ ತಾವು ದಲಿತರ ವಿರೋಧಿ ಎಂದು ಬಿಂಬಿಸಿದವರಿಗೆ ತಿರುಗೇಟು ನೀಡಿದರು.

ಪ್ರಪಂಚದಲ್ಲಿ 180 ವರ್ಷ, ಭಾರತದಲ್ಲಿ 120 ವರ್ಷಗಳಿಂದ ಬೆಳೆದು ಬಂದಿರುವ ಸಹಕಾರ ಕ್ಷೇತ್ರ ಆರ್ಥಿಕತೆಯ ಜೊತೆಗೆ ಅಧಿಕಾರ ವಿಕೇಂದ್ರೀಕರಣದ ಮೂಲಕ ನಾಯಕರನ್ನು, ನಾಯಕತ್ವವನ್ನು ರೂಪಿಸಿದೆ. ಸಹಕಾರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶಾಸಕ ಲಕ್ಷ್ಮಣ ಸವದಿ ಅಧ್ಯಕ್ಷತೆಯಲ್ಲಿ ತಿದ್ದುಪಡಿ ಸಮಿತಿ ರಚಿಸಲಾಗಿತ್ತು. ಸಮಿತಿಯಲ್ಲಿ ನಾನು, ಎಸ್.ಆರ್. ಪಾಟೀಲ್, ಶಿವರಾಮ್ ಹೆಬ್ಬಾರ್, ಷಡಕ್ಷರಿ, ರಾಜೇಂದ್ರ ಕುಮಾರ್, ಹೆಚ್.ಎಸ್.ರಮಣರೆಡ್ಡಿ ಇದ್ದು, ಸಮಿತಿ ನೀಡಿದ ವರದಿಯನ್ನು ನಿರ್ಲಕ್ಷಿಸಿ, ಈ ಕಾಯ್ದೆಯನ್ನು ತಂದು ವಿಧಾನಮಂಡಲದಲ್ಲಿ ಹಿರಿಯ ಸಹಕಾರಿಗಳಾದ ಹೆಚ್.ಕೆ. ಪಾಟೀಲರು ಮಂಡಿಸುತ್ತಿರುವುದು ನ್ಯಾಯಸಮ್ಮತವೇ ಎಂಬುದನ್ನು ಒಂದು ಬಾರಿ ಯೋಚಿಸಬೇಕು ಎಂದು ಸಲಹೆ ನೀಡಿದರು.

ಸಹಕಾರ ಕ್ಷೇತ್ರ ಎಲ್ಲರಿಗೂ ಸೇರಿದ್ದು: ಎಲ್ಲರಿಗೂ ಸೇರಿದ ಸಹಕಾರಿ ಕ್ಷೇತ್ರ ದೇಶದಲ್ಲಿ ಸ್ವಾಯತ್ತತೆ ಹಾಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು. ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ, ಡಾ.ವರ್ಗೀಸ್ ಕುರಿಯನ್ ಅವರನ್ನು ಎನ್.ಡಿ.ಡಿ.ಬಿ ಮುಖ್ಯಸ್ಥರಾಗಲು ಕೋರಿಕೊಂಡಾಗ ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ ಇಲ್ಲದಿದ್ದರೆ ಮಾತ್ರ ಅಧಿಕಾರ ವಹಿಸಿಕೊಳ್ಳುವುದಾಗಿ ಷರತ್ತು ವಿಧಿಸಿದ್ದರು. ಕುರಿಯನ್‌ರವರ ಷರತ್ತನ್ನು ಒಪ್ಪಿಕೊಂಡು, ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರಿಂದಾಗಿ ದೇಶದಲ್ಲಿ ಕ್ಷೀರಕ್ರಾಂತಿ ನಡೆಯಿತು. ಈಗ ರಾಷ್ಟ್ರದಲ್ಲಿ ಪ್ರತಿ ದಿನ 4.5 ಕೋಟಿ ಲೀಟರ್ ಹಾಗೂ ಕರ್ನಾಟಕ ರಾಜ್ಯದಲ್ಲಿ ಪ್ರತಿದಿನ 1 ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತಿರುವುದು ಸರ್ಕಾರದ ಹಸ್ತಕ್ಷೇಪ ಇಲ್ಲದ ಕಾರಣಕ್ಕೆ ಎಂದು ವಿವರಿಸಿದರು.

ಸಹಕಾರ ಕ್ಷೇತ್ರಕ್ಕೆ ಹೋಲಿಕೆ ಸರಿಯಲ್ಲ: ಗ್ರಾಪಂ, ಜಿಪಂ ಹಾಗೂ ಮಂಡಲ್ ಪಂಚಾಯತ್‌ನಲ್ಲಿ ಸಾಮಾಜಿಕ ನ್ಯಾಯ ಕೊಟ್ಟಿದ್ದು, ಅದೇ ರೀತಿ ಸಹಕಾರ ಕ್ಷೇತ್ರದಲ್ಲೂ ತರುವುದಾಗಿ ಹೇಳಿರುವ ಹೆಚ್.ಕೆ.ಪಾಟೀಲ್ ಅವರು, ಗ್ರಾಪಂಗಳಿಗೆ ಸಹಕಾರ ಕ್ಷೇತ್ರವನ್ನು ಹೋಲಿಕೆ ಮಾಡಿರುವುದು ಸರಿಯಲ್ಲ. ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಯಿಂದ ಕೂಡಿರುವ ಸಹಕಾರಿ ಕ್ಷೇತ್ರವನ್ನು ಸರ್ಕಾರಕ್ಕೆ ಹೋಲಿಕೆ ಮಾಡುವುದು ಸರಿಯಲ್ಲ. ಅಲ್ಲದೆ ಸಹಕಾರಿ ಕ್ಷೇತ್ರ ಸರ್ಕಾರದಿಂದ ನಡೆಯುತ್ತಿಲ್ಲ. ಸಹಕಾರ ಸಂಘಗಳ ನೌಕರರು, ಸರ್ಕಾರಿ ನೌಕರರಲ್ಲ. ಸಹಕಾರ ಸಂಘದ ವ್ಯಾಪ್ತಿ ಹಳ್ಳಿಯಿಂದ ದಿಲ್ಲಿಯವರೆಗೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರಕ್ಕೂ ಸಹಕಾರಕ್ಕೂ ವ್ಯತ್ಯಾಸವಿದೆ: ಸಹಕಾರ ಸಂಘಗಳ ಸಂಪನ್ಮೂಲವನ್ನು ಜನರಿಂದ ಕ್ರೋಢೀಕರಿಸಿ, ಅದರ ವೆಚ್ಚವನ್ನು ತಾನೇ ಭರಿಸುತ್ತದೆ. ಸಹಕಾರ ಸಂಘವು ಆರ್ಥಿಕ ಸಂಸ್ಥೆಯನ್ನಾಗಿ ತನ್ನದೆ ಬಂಡವಾಳದ ಮೂಲಕ ಕಾರ್ಯ ಚಟುವಟಿಕೆ ನಡೆಸುತ್ತಿದೆ. ಆದರೆ, ಗ್ರಾಪಂ ನೌಕರರು ಸರ್ಕಾರಿ ನೌಕರರಾಗಿದ್ದು, ಅದರ ವ್ಯಾಪ್ತಿ ಗ್ರಾಮಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸರ್ಕಾರ ಗ್ರಾಪಂಗಳಿಗೆ ಅನುದಾನ ಒದಗಿಸಿ, ನಿರ್ದೇಶನ ಮಾಡಲಿದೆ. ಹಾಗಾಗಿ ಸರ್ಕಾರಕ್ಕೂ, ಸಹಕಾರ ಕ್ಷೇತ್ರಕ್ಕೂ ಬಹಳ ವ್ಯತ್ಯಾಸವಿದೆ ಎಂದು ಮನವರಿಕೆ ಮಾಡಿಕೊಟ್ಟರು.

ಸಹಕಾರ ಕ್ಷೇತ್ರವನ್ನು ಏನು ಮಾಡಲು ಹೊರಟ್ಟೀದ್ದೀರಿ: ಅರ್ಧನಾರೀಶ್ವರನ್ ಸಮಿತಿ, ಚೌಧರಿ ಬ್ರಹ್ಮ ಪ್ರಕಾಶ್ ಮತ್ತು ವೈದ್ಯನಾಥನ್ ಸಮಿತಿ ವರದಿಗಳಲ್ಲಿ ಸಹಕಾರ ಕ್ಷೇತ್ರ ಸ್ವಾಯತ್ತತೆ, ಸ್ವಾತಂತ್ರ್ಯವಾಗಿರಬೇಕು ಎಂದು ಹೇಳಲಾಗಿದೆ. ಅದರಂತೆ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಮನಮೋಹನ್ ಸಿಂಗ್, ಶರದ್ ಪವಾರ್ ಅವರು ಸಹಕಾರ ಕ್ಷೇತ್ರಕ್ಕೆ ಶಕ್ತಿ ತುಂಬಿದ್ದರು. ಆದರೆ ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ, ಸಹಕಾರ ಕಾಯ್ದೆಗೆ ತಿದ್ದುಪಡಿ ತಂದು ಏನು ಮಾಡಲು ಹೊರಟ್ಟಿದ್ದೀರಿ ಎಂದು ಜಿ.ಟಿ.ದೇವೇಗೌಡರು ಪ್ರಶ್ನಿಸಿದರು.

ಎಲ್ಲಾ ಸಹಕಾರ ಸಂಘಗಳು ಒಂದೇ ವರ್ಗಕ್ಕೆ ಬರಲ್ಲ: ವಿವಿಧ ವೃತ್ತಿಪರ ಸಹಕಾರ ಸಂಘ–ಸಂಸ್ಥೆಗಳಿದ್ದು, ಅವುಗಳೆಲ್ಲ ಒಂದೇ ವರ್ಗಕ್ಕೆ ಬರಲ್ಲ. ಉತ್ತರ ಪ್ರದೇಶದ ಸುಲ್ತಾನ್‌ಪುರಿ ಶುಗರ್ ಸಂಸ್ಥೆ, ರಾಜ್ಯದ ಸಹಕಾರ ಸಕ್ಕರೆ ಕಾರ್ಖಾನೆ ಸರ್ಕಾರದ ಶೇ.50ರಷ್ಟು ಬಂಡವಾಳ ಹೊಂದಿದ್ದರೂ ಸಂವಿಧಾನದ ಅನುಚ್ಛೇದ 12ರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದಾಗ್ಯೂ ಎಲ್ಲಾ ಸಹಕಾರ ಸಂಘಗಳು ಒಂದೇ ವರ್ಗಕ್ಕೆ ಬರುತ್ತವೆ ಎಂದು ನಾಮನಿರ್ದೇಶನ ಮಾಡಲು ಹೊರಟಿದ್ದೀರಿ ಎಂದು ಜಿಟಿಡಿ ಆಕ್ಷೇಪ ವ್ಯಕ್ತಪಡಿಸಿದರು.

ದಲಿತರ, ಮಹಿಳೆಯರ, ಹಿಂದುಳಿದವರ ವಿರೋಧಿಗಳಲ್ಲ...!

ಸಹಕಾರ ಸಂಘ–ಸಂಸ್ಥೆಗಳಲ್ಲಿ ಈಗಾಗಲೇ 6 ಜನರಿಗೆ ಮೀಸಲಾತಿ ಮೂಲಕ ಅವಕಾಶ ಕಲ್ಪಿಸಿದ್ದು, ಅದರ ಜೊತೆಗೆ ಎಸ್‌ಸಿ, ಎಸ್‌ಟಿ ಮತ್ತು ಸಾಮಾನ್ಯ ಮಹಿಳೆ ಸೇರಿ ಮೂವರ ನಾಮ ನಿರ್ದೇಶನಕ್ಕೆ ತಿದ್ದುಪಡಿ ಮಾಡಿರುವುದನ್ನು ಸದನದ ಸದಸ್ಯರ‍್ಯಾರು ವಿರೋಧಿಸಿಲ್ಲ, ವಿರೋಧಿಗಳೂ ಅಲ್ಲ. ಆದರೆ, ನಾಮ ನಿರ್ದೇಶನ ಮಾಡಿದ ಅಭ್ಯರ್ಥಿಗಳು ಹಾಗೂ ಅವರ ಕುಟುಂಬದ ಸದಸ್ಯರು ಪ್ರತಿ ವರ್ಷ ಆಸ್ತಿ ವಿವರ ಘೋಷಣೆ ಮಾಡುವಂತೆ ಸೂಚಿಸಿರುವುದರಿಂದ ನಾಮನಿರ್ದೇಶಿತ ಅಭ್ಯರ್ಥಿಗಳಿಗೆ ಖರ್ಚಿನ ಹೊರೆಯ ಜೊತೆಗೆ ಅಕಸ್ಮಾತ್ ಅರ್ಹರಾಗದಿದ್ದರೆ ತಪ್ಪಿತಸ್ಥರೆಂದು ಬಿಂಬಿಸುವ ಸಾಧ್ಯತೆಗಳು ಇರಲಿದೆ. ಹಾಗಾಗಿ ಸುಪ್ರೀಂಕೋರ್ಟ್ ಹಲವು ತೀರ್ಪುಗಳಲ್ಲಿ ತಿಳಿಸಿರುವಂತೆ ಸರ್ಕಾರದ ಷೇರು ಧನ ಇಲ್ಲದೆ ಇರುವಂತಹ ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡುವುದು ಸಹಕಾರ ತತ್ವಗಳಿಗೆ ವಿರುದ್ಧವಾಗಿದೆ. ಹಾಗೆಯೇ ರಾಜ್ಯದಲ್ಲಿ 47,000 ಸಹಕಾರ ಸಂಘಗಳಿದ್ದು, ಸುಮಾರು 7 ಲಕ್ಷ ಜನ ನಿರ್ದೇಶಕರು ಹಾಗೂ ಅವರ ಕುಟುಂಬದವರು ಪ್ರತಿ ವರ್ಷ ಸರ್ಕಾರಕ್ಕೆ ಆಸ್ತಿ ಘೋಷಣೆ ಮಾಡುವ ಪತ್ರ ವ್ಯವಹಾರವನ್ನು ಸ್ವೀಕರಿಸಿ, ಪರಿಶೀಲಿಸಲು ಸಹಕಾರ ಇಲಾಖೆಯಲ್ಲಿ ಸಿಬ್ಬಂದಿ ಕೂಡ ಇರುವುದಿಲ್ಲ. ಹಾಗಾಗಿ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಏಕಾಏಕಿ ಕಾನೂನು ತಿದ್ದುಪಡಿ ಮಾಡುವುದು ಸೂಕ್ತವಲ್ಲ.

-ಜಿ.ಟಿ.ದೇವೇಗೌಡ, ಶಾಸಕರು ಹಾಗೂ ಸಹಕಾರಿ ಧುರೀಣ



ನಾಮ ನಿರ್ದೇಶನಕ್ಕೆ ಸ್ವಾಗತ; ಹಿಂದುಳಿದ ವರ್ಗ ಕಾಣಲಿಲ್ಲವೇ...!

ಸಹಕಾರ ಸಂಘ–ಸಂಸ್ಥೆಗಳಿಗೆ ಹೊಸದಾಗಿ ಮೂವರ ನಾಮ ನಿರ್ದೇಶನವನ್ನು ಸ್ವಾಗತಿಸುತ್ತೇನೆ. ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ಮಹಿಳೆಗೆ ಅವಕಾಶ ನೀಡಲಾಗಿದೆ. ಆದರೆ, ಹಿಂದುಳಿದ ವರ್ಗದವರು ಕಣ್ಣಿಗೆ ಕಾಣಲಿಲ್ಲವೇ. ಹಿಂದುಳಿದ ವರ್ಗವನ್ನು ಕಟ್ಟಿಕೊಂಡು ಬಂದಿರುವ ಮುಖ್ಯಮಂತ್ರಿ(ಸಿದ್ದರಾಮಯ್ಯ)ಗಳು ಈ ಅವಕಾಶವನ್ನು ಏಕೆ ಮಾಡಿಲ್ಲ. ಈಗಲೂ ಕೂಡ ಮೂರರ ಜೊತೆಗೆ ಹಿಂದುಳಿದವರಿಗೂ ಒಂದು ಸ್ಥಾನ ಕಲ್ಪಿಸಲು ಪುನರ್‌ಪರಿಶೀಲನೆ ಮಾಡಿ, ಸಹಕಾರಿ ಕಾನೂನು ತಿದ್ದುಪಡಿ ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗಿರಬೇಕೇ ಹೊರತು ಮಾರಕವಾಗಬಾರದು.

- ಜಿ.ಟಿ.ದೇವೇಗೌಡ, ಮಾಜಿ ಸಚಿವರು ಹಾಗೂ ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಬಿಬಿಎಂಪಿಯ ಪಂಚ ಪಾಲಿಕೆಗೆ ಆಯುಕ್ತರ ನೇಮಕ: ಗ್ರೇಟರ್ ಬೆಂಗಳೂರು ತಿದ್ದುಪಡಿ ವಿಧೇಯಕ ಅಂಗೀಕಾರ

ಬೆಂಗಳೂರು: ವಿಭಜಿತ ಬಿಬಿಎಂಪಿಯ ಪಂಚ ಪಾಲಿಕೆಗಳಿಗೆ ಆಯುಕ್ತರನ್ನು ನೇಮಿಸಲು ಅವಕಾಶ ಕೊಡುವ ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕಕ್ಕೆ ವಿಧಾನಸಭೆಯಲ್ಲಿ ವಿಪಕ್ಷಗಳ ತೀವ್ರ ವಿರೋಧದ ಮಧ್ಯೆಯೂ ಅಂಗೀಕಾರ ಪಡೆದುಕೊಂಡಿತು.

ವಿಧೇಯಕ ಬಗ್ಗೆ ಸದನದಲ್ಲಿ ವಿವರ ನೀಡಿದ ಡಿಸಿಎಂ ಡಿಕೆಶಿ, ಪಾಲಿಕೆಗಳಿಗೆ ಆಯುಕ್ತರನ್ನು ನೇಮಿಸಿ ಸಮನ್ವಯ ಸಮಿತಿಯಂತೆ ಐದೂ ಪಾಲಿಕೆಗಳು ಕೆಲಸ ಮಾಡಲು ತಿದ್ದುಪಡಿ ತರಲಾಗಿದೆ. ಐದೂ ಪಾಲಿಕೆಗಳ ಆಡಳಿತಾತ್ಮಕ ಹಾಗೂ ನೇಮಕಾತಿ ನಿಯಮಗಳ ರಚನೆ, ನೌಕರರ ನೇಮಕಾತಿ ಹೊಣೆ ಜಿಬಿಎಗೆ ಕೊಡಲು ಅವಕಾಶ ಇದೆ ಎಂದರು.

ಆದರೆ ಈ ವಿಧೇಯಕಕ್ಕೆ ಬಿಜೆಪಿ ಸದಸ್ಯರು ತೀವ್ರವಾಗಿ ವಿರೋಧಿಸಿದರು. ಶಾಸಕ ಅಶ್ವಥ್ ನಾರಾಯಣ್ ಮಾತನಾಡಿ, ಸ್ಥಳೀಯ ಸಂಸ್ಥೆಗಳ ಅಧಿಕಾರ ಕಿತ್ತುಕೊಳ್ಳುತ್ತಿದ್ದೀರಿ ಎಂದರು. ವಿಪಕ್ಷ ನಾಯಕ ಆರ್ ಅಶೋಕ್ ಮಾತನಾಡಿ, ಗ್ರೇಟರ್ ಬೆಂಗಳೂರು ಹೆಸರನ್ನು ಕನ್ನಡದಲ್ಲಿಡುವಂತೆ ಆಗ್ರಹಿಸಿದರು. ಆದರೆ ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ವಿಧೇಯಕ ಪರ ಬಿಜೆಪಿ ಉಚ್ಚಾಟಿತ ಶಾಸಕ ಎಸ್‌ಟಿ ಸೋಮಶೇಖರ್ ಬ್ಯಾಟಿಂಗ್ ನಡೆಸಿದರು. ಸದನದಲ್ಲೇ ಡಿಕೆಶಿಗೂ ಸೋಮಶೇಖರ್ ಶ್ಲಾಘನೆ ವ್ಯಕ್ತಪಡಿಸಿದರು.

ಈ ಮಧ್ಯೆ, ಬೆಂಗಳೂರು ನಗರ ವಿವಿಗೆ ಡಾ. ಮನಮೋಹನ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಎಂದು ಮರುನಾಮಕರಣಗೊಳ್ಳಲಿದೆ. ಈ ಸಂಬಂಧ ವಿಧಾನಸಭೆಯಲ್ಲಿ ಇಂದು ಬಿಜೆಪಿಯವರ ವಿರೋಧದ ಮಧ್ಯೆಯೂ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ತಿದ್ದುಪಡಿ ವಿಧೇಯಕಕ್ಕೆ ಸರ್ಕಾರ ಅಂಗೀಕಾರ ಪಡೆದುಕೊಂಡಿತು.

16ನೇ ವರ್ಷದ ಸವಿನೆನಪು



ಶ್ರೀ ಸಿ.ತುಕಾರಾಮ್

ದುಃಖಿತಪ್ತರು: ಉಮೇಶ್ ನಾಯಕ್, ರಾಮಾನುಜ ರಸ್ತೆ, ಮೈಸೂರು

ಏಷ್ಯಾ ಕಪ್‌ಗೆ ಭಾರತ ತಂಡ ಪ್ರಕಟ

ಸೂರ್ಯಕುಮಾರ್ ನಾಯಕ, ಶುಭಮನ್ ಗಿಲ್ ಉಪನಾಯಕ

ಮುಂಬೈ: ಸೆಪ್ಟೆಂಬರ್ 9ರಿಂದ ಯುಎಇಯಲ್ಲಿ ಆರಂಭವಾಗಲಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಗೆ 15 ಮಂದಿ ಆಟಗಾರರ ಭಾರತ ತಂಡವನ್ನು ಆಯ್ಕೆ ಮಾಡಲಾಗಿದ್ದು, ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್ ತಂಡವನ್ನು ಮುನ್ನಡೆಸಲಿದ್ದಾರೆ.



ಮುಂಬೈಯಲ್ಲಿ ಇಂದು (ಮಂಗಳವಾರ) ನಡೆದ ಆಯ್ಕೆ ಮಂಡಳಿ ಸಭೆಯಲ್ಲಿ ಅಜಿತ್ ಅಗರಕರ್ ಅವರು ಭಾರತ ತಂಡವನ್ನು ಪ್ರಕಟಿಸಿದ್ದಾರೆ. ಟೆಸ್ಟ್ ತಂಡದ ನಾಯಕ ಶುಭಮನ್ ಗಿಲ್ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ. ವೇಗಿ ಜಸ್‌ಪ್ರೀತ್ ಬೂಮ್ರಾ ಕೂಡಾ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಈಚೆಗೆ ಮುಕ್ತಾಯಗೊಂಡ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಶುಭಮನ್ ಗಿಲ್ ಅವರು ನಿರೀಕ್ಷೆಗೂ ಮೀರಿ ಉತ್ತಮ ಪ್ರದರ್ಶನ ನೀಡಿದ್ದಾರೆ ಎಂದು ಅಗರಕರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಕ್ಟೋಬರ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಸ್ವದೇಶಿ ಟೆಸ್ಟ್ ಸರಣಿಗೆ ಬೂಮ್ರಾ ಲಭ್ಯತೆಯ ಬಗ್ಗೆ ಅನುಮಾನ ಗಳಿದ್ದವು. ಆದರೆ, ಆಯ್ಕೆದಾರರು ಬೂಮ್ರಾಗೆ ಮಣೆ ಹಾಕಿದ್ದಾರೆ. ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರನ್ನು ಸಹ ಆಯ್ಕೆ ಮಾಡಲಾಗಿದೆ.

ಸೂರ್ಯಕುಮಾರ್ ಯಾದವ್ ನೇತೃತ್ವದ ಟಿ20 ತಂಡ ಶೇ 85ರಷ್ಟು ಯಶಸ್ಸಿನ ದಾಖಲೆ ಹೊಂದಿದೆ. ಆಡಿದ ಕೊನೆಯ 20 ಪಂದ್ಯಗಳಲ್ಲಿ 17ರಲ್ಲಿ ಗೆಲುವಿನ ಸವಿಯುಂಡಿದೆ. ಈ ತಂಡದಲ್ಲಿ ಗಿಲ್ ಅಥವಾ ಜೈಸ್ವಾಲ್ ಇರಲಿಲ್ಲ.

ಆದರೆ ಟೆಸ್ಟ್ ತಂಡದಲ್ಲಿ ಕಾಯಂ ಆಗುವ ಮೊದಲು ಗಿಲ್ ಮತ್ತು ಜೈಸ್ವಾಲ್ ಅವರು ಟಿ20 ತಂಡದಲ್ಲೂ ಇದ್ದರು. ಐಪಿಎಲ್‌ನಲ್ಲೂ ತಾಕತ್ತು ಪ್ರದರ್ಶಿಸಿದ್ದರು. ಗಿಲ್ ಅವರು ಹಿಂದೊಮ್ಮೆ ಟಿ20 ತಂಡದ ಉಪನಾಯಕರೂ ಆಗಿದ್ದರು.

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರಿದ್ದ ಕನ್ನಡಿಗ ಕೆ.ಎಲ್.ರಾಹುಲ್, ಪ್ರಸಿದ್ಧ ಕೃಷ್ಣ ಮತ್ತು ಮೊಹಮ್ಮದ್ ಸಿರಾಜ್ ಅವರನ್ನು ತಂಡದಿಂದ ಕೈಬಿಡಲಾಗಿದೆ.

ಭಾರತ ತಂಡ ಇಂತಿದೆ: ಸೂರ್ಯಕುಮಾರ್ ಯಾದವ್ (ನಾಯಕ), ಶುಭ್‌ಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಶಿವಂ ದುಬೆ, ಅರ್ಷದೀಪ್ ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಹರ್ಷಿತ್ ರಾಣಾ, ತಿಲಕ್ ವರ್ಮಾ, ರಿಂಕು ಸಿಂಗ್, ವರುಣ್ ಚಕ್ರವರ್ತಿ.

ಹೆತ್ತಮ್ಮನ ಹುಡುಕಾಟದಲ್ಲಿ ತುಂಬಿದ ಹೊಳೆ ದಾಟಿ ಬಂದ ಆನೆ ಮರಿ

● ಎರಡು ದಿನದ ಹಿಂದೆ ಕೇರಳದ ಸುಲ್ತಾನ್ ಬತೇರಿಯ ಪುಲಪಳ್ಳಿಯಲ್ಲಿ ಪ್ರತ್ಯಕ್ಷವಾಗಿದ್ದ ಆನೆ ಮರಿ ● ಆನೆ ಮರಿ ತಾಯಿಯ ಮಡಿಲು ಸೇರಿಸಲು ಸಫಲವಾಗದ ಕೇರಳ ಅರಣ್ಯ ಇಲಾಖೆ

ಮೈಸೂರು, ಆ.19(ಎಂಟಿವೈ)– ತಾಯಿಯಿಂದ ಬೇರ್ಪಟ್ಟು ಕೇರಳದ ಶಾಲಾ ಆವರಣದಲ್ಲಿ ಕಾಣಿಸಿಕೊಂಡಿದ್ದ ಆನೆ ಮರಿ, ಅಮ್ಮನ ಹುಡುಕಾಟದಲ್ಲಿ ರಭಸವಾಗಿ ಹರಿಯುತ್ತಿರುವ ಹೊಳೆ ದಾಟಿ ಹೆಚ್.ಡಿ.ಕೋಟೆ ಬಳಿ ಪ್ರತ್ಯಕ್ಷವಾಗಿದೆ.



ತಾಯಿಗಾಗಿ ರಭಸವಾಗಿ ಹರಿಯುತ್ತಿರುವ ಹೊಳೆ ದಾಟಿ ಬಂದಿರುವ ಆನೆಮರಿಯನ್ನು ಕರ್ನಾಟಕ ಅರಣ್ಯ ಇಲಾಖೆ ಸಿಬ್ಬಂದಿ ಆರೈಕೆ ಮಾಡುತ್ತಿರುವುದು.

ಕೇರಳದ ವೈನಾಡು ಜಿಲ್ಲೆ, ಸುಲ್ತಾನ್ ಬತೇರಿ ತಾಲೂಕಿನ ಪುಲಪಳ್ಳಿ ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿ ಎರಡು ದಿನದ ಹಿಂದೆ ಕಾಣಿಸಿಕೊಂಡಿದ್ದ ಹೆಣ್ಣಾನೆ ಮರಿ, 48 ಗಂಟೆಯಲ್ಲಿ ಕರ್ನಾಟಕದ ಗಡಿ ದಾಟಿ ಹೆಚ್.ಡಿ.ಕೋಟೆ ತಾಲೂಕು ಬಳ್ಳೆ ಸಮೀಪದ ಕಡಗದ್ದೆ ಬಳಿ ಪ್ರತ್ಯಕ್ಷವಾಗಿ ಅಚ್ಚರಿ ಮೂಡಿಸಿದೆ.

ಸುಮಾರು ಮೂರರಿಂದ ಐದು ತಿಂಗಳ ಈ ಹೆಣ್ಣಾನೆ ಮರಿ ಎರಡು ದಿನದ ಹಿಂದೆ ತಾಯಿಂದ ಬೇರ್ಪಟ್ಟು ಕೇರಳದ ಪುಲಪಳ್ಳಿಯಲ್ಲಿ ಓಡಾಡುತ್ತಿತ್ತು. ಅಲ್ಲಿನ ಸರ್ಕಾರಿ ಶಾಲೆ ಆವರಣದಲ್ಲಿ ವಿದ್ಯಾರ್ಥಿಗಳ ಪಾದರಕ್ಷೆಗಳನ್ನು ಚೆಲ್ಲಾಪಿಲ್ಲಿ ಮಾಡಿತ್ತು. ಬಳಿಕ ಅಲ್ಲಿನ ಅರಣ್ಯ ಸಿಬ್ಬಂದಿ ಆನೆ ಮರಿಯನ್ನು ರಕ್ಷಿಸಿ, ಅದನ್ನು ತಾಯಿಯ ಮಡಿಲಿಗೆ ಸೇರಿಸಲೆಂದು ಸಮೀಪದ ಅರಣ್ಯ ಪ್ರದೇಶದಲ್ಲಿ ಬಿಟ್ಟಿದ್ದರು. ಆದರೆ ಅದು ತಾಯಿ ಹುಡುಕುತ್ತಾ ಮೈದುಂಬಿ ಹರಿಯುತ್ತಿರುವ ಕಪಿಲ ಹೊಳೆಯನ್ನು ದಾಟಿ ಕರ್ನಾಟಕದ ಗಡಿ ಪ್ರವೇಶಿಸಿದೆ. ಕೇರಳದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ತುಂಬಿ ಹರಿಯುತ್ತಿರುವ ಹೊಳೆಯನ್ನು ಈಜಿಕೊಂಡು ಸುರಕ್ಷಿತವಾಗಿ ದಡ ಸೇರಿರುವುದು ಅಚ್ಚರಿ ಮೂಡಿಸಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಸಿಬ್ಬಂದಿ ಆನೆಮರಿಯನ್ನು ರಕ್ಷಣೆ ಮಾಡಿ, ಅದರ ತಾಯಿ ಬರುವಿಕೆಗಾಗಿ ಅರಣ್ಯ ಪ್ರದೇಶದಲ್ಲಿ ಮರಿಯೊಂದಿಗೆ ಕಾಯುತ್ತಿದ್ದಾರೆ. ಮೂಲಗಳ ಪ್ರಕಾರ ತಾಯಿ ಆನೆ ಕೇರಳ ಭಾಗದಲ್ಲಿದ್ದು ರಭಸವಾಗಿ ಹರಿಯುತ್ತಿರುವ ಹೊಳೆ ದಾಟಲು ಮುಂದಾಗುವುದಿಲ್ಲ ಎಂದು ಅಂದಾಜಿಸಲಾಗಿದೆ. ಆದರೂ ಅರಣ್ಯ ಸಿಬ್ಬಂದಿ ಮರಿ ಆನೆಯ ತಾಯಿಯೊಂದಿಗೆ ಸೇರಿಸುವ ಪ್ರಯತ್ನವನ್ನು ಮುಂದುವರೆಸಿದ್ದಾರೆ. ಒಂದು ವೇಳೆ ಬುಧವಾರ ತಾಯಿ ಆನೆ ಸಿಗದಿದ್ದರೆ ಮೇಲಾಧಿಕಾರಿಗಳ ಅನುಮತಿ ಪಡೆದು ಮರಿಯನ್ನು ಆನೆ ಶಿಬಿರಕ್ಕೆ ಕೊಂಡೊಯ್ದು ಪಾಲನೆ ಮಾಡಲು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ.

ಪ್ರಾಣಿ ಪ್ರಿಯರ ಆಗ್ರಹ: ಮೂರ‍್ನಾಲ್ಕು ದಿನಗಳಿಂದ ಕೇರಳ ಭಾಗದಲ್ಲಿ ತಾಯಿಯಿಂದ ಬೇರ್ಪಟ್ಟು ಓಡಾಡುತ್ತಿರುವ ಆನೆಮರಿಯನ್ನು ಅಲ್ಲಿನ ಅರಣ್ಯ ಸಿಬ್ಬಂದಿ ತಾಯಿ ಮಡಿಲಿಗೆ ಸೇರಿಸುವಲ್ಲಿ ವಿಫಲರಾಗಿದ್ದಾರೆ. ಅರಣ್ಯ ಪ್ರದೇಶದಲ್ಲಿ ಹುಲಿ ದಾಳಿಗೆ ಒಳಗಾಗುವ ಅಪಾಯವಿತ್ತಾದರೂ ನಿರ್ಲಕ್ಷ್ಯ ಮಾಡಿದ್ದಾರೆ. ಸದ್ಯ ತಾಯಿಯ ಅರಸಿ ಹೇಗೊ ಸುರಕ್ಷಿತವಾಗಿ ಕರ್ನಾಟಕದ ಅರಣ್ಯ ಇಲಾಖೆ ಸಿಬ್ಬಂದಿಗೆ ಸಿಕ್ಕಿರುವ ಆನೆಮರಿಯನ್ನು ಯಾವುದಾದರೂ ಕ್ಯಾಂಪ್‌ನಲ್ಲಿಟ್ಟು ಸಲಹಬೇಕೆಂದು ಪ್ರಾಣಿ ಪ್ರಿಯರು ಆಗ್ರಹಿಸಿದ್ದಾರೆ.

ಸೈಟ್ ಮಾರಾಟಕ್ಕಿದೆ

ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಪಶ್ಚಿಮ ಮುಖದ 40X60 ಸೈಟ್ ಮಾರಾಟಕ್ಕಿದೆ.

ಬೆಲೆ: ರೂ. 69 ಲಕ್ಷ

9448601655

PUBLIC NOTICE

The General public is hereby informed that my client is intending to purchase the below mentioned schedule property from its owner Sri.L.Shivanna S/o Lakshmana resident of #439/A, 8th cross, Neeti Marga 2nd Stage, Siddartha Layout Mysore-570011. If any body is having any objection,claim, interest, dispute with the above owner, boundaries for the intended sale transaction, he/she/they may contact the undersigned with the docu-mentary proof substantiating his/her/-their objections/claims/ details of dispute/s within Seven(07) days from the date of this publication, failing which my client will proceed to complete the sale transaction with the above owner as if there are no third party claims/ objections/ disputes in respect of the Schedule property and there after no claims/ objections/ disputes will be entertained.

SCHEDULE PROPERTY

Residential House Property bearing Municipal Corporation D.No.439/A. (Ward No.63) and as per E-Khatha (PID No:-63-3-678-439) document No:-25307410 Consisting of building in Ground Floor (87.793335 Square meters) and First floor (81.290125 square meters as per Form No.2, E- Khatha issued by Mysore City Corporation on 9/07/2025) having electricity, water and sanitary connection, Situated at T.N Pura Road, 2nd stage, (8th Cross, Sanmarga street), Siddartha nagara Badvane, Nazarbad Mohalla, Mysore city, constructed on the site measuring East -West 60.00 Feet and North-South 35.00 feet and bounded on the East By : Property No.440/A, West By : Road, North By: Property No.438, South By: PropertyNo.439

Sd/- H.S.Kumar, B.A.L., LL.B.
Advocate,
Law Lexicon Associates,
No.# 1411, 1st Floor,6th Cross,
Thyagaraja Road,K.R.Mohalla,
Mysuru. Mob. : 9448797546

19-08-2025, Mysore

ಮಹಾರಾಜ ಟ್ರೋಫಿ–2025

ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಹ್ಯಾಟ್ರಿಕ್ ಜಯ

ಟೂರ್ನಿಯಿಂದ ಶಿವಮೊಗ್ಗ ಲಯನ್ಸ್ ಹೊರಬೀಳುವ ಸಾಧ್ಯತೆ

ಮೈಸೂರು, ಆ.19(ವಿವಿಹೆಚ್)– ಸ್ಮರಣ್ ರವಿಚಂದ್ರನ್ ಅರ್ಧ ಶತಕ, ನಿಕಿನ್ ಜೋಸ್ ಅವರ ಭರ್ಜರಿ ಬ್ಯಾಟಿಂಗ್ ಪ್ರದರ್ಶನದ ಫಲವಾಗಿ ಶಿವಮೊಗ್ಗ ಲಯನ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿದ ಗುಲ್ಬರ್ಗಾ ಮಿಸ್ಟಿಕ್ಸ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ದಾಖಲಿಸಿತು. ಟೂರ್ನಿಯಲ್ಲಿ ಸತತ ಐದನೇ ಸೋಲು ಕಂಡ ಶಿವಮೊಗ್ಗ ಬಹುತೇಕ ಟೂರ್ನಿಯಿಂದ ಹೊರಬಿದ್ದಂತೆಯೆ.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 133 ರನ್ ಕಲೆಹಾಕಿತು. ತುಷಾರ್‌ಸಿಂಗ್ 32(25) ರನ್ ಗಳಿಸಿದ್ದೆ ತಂಡದ ಪರವಾಗಿ ವೈಯಕ್ತಿಕ ಗರಿಷ್ಠ ರನ್ ಆಗಿತ್ತು. ಆರಂಭಿಕ ಧ್ರುವ್ ಪ್ರಭಾಕರ್ 18(16), ನಾಯಕ ನಿಹಾನ್ ಉಲ್ಲಾಳ್ 18(12), ರೋಹಿತ್ ಕುಮಾರ್ 6(10), ಅನೀಶ್ವರ್ ಗೌತಮ್ 3(5), ಅನಿರುದ್ಧ ಜೋಶಿ 6(11), ಡಿ.ಅವಿನಾಶ್ 16(13) ರನ್ ಗಳಿಸಿ ಔಟಾದರೆ, ಅಜೇಯರಾಗಿ ಉಳಿದ ಹಾರ್ದಿಕ್ ರಾಜ್ 23(19) ರನ್ ಕಲೆಹಾಕಿ ತಂಡ ಸ್ಪರ್ಧಾತ್ಮಕ ಮೊತ್ತ ಕಲೆಹಾಕುವಲ್ಲಿ ಸಹಕರಿಸಿದರು. ಎಂ.ಬಿ.ದರ್ಶನ್ 2(10) ರನ್ ಗಳಿಸಿ ನಾಟ್‌ಔಟ್ ಆಗಿ ಉಳಿದರು.



ಸ್ಮರಣ್ ರವಿಚಂದ್ರನ್ ಬ್ಯಾಟಿಂಗ್ ವೈಖರಿ

ಬಿಗಿ ಬೌಲಿಂಗ್ ಪ್ರದರ್ಶನ ತೋರಿದ ಗುಲ್ಬರ್ಗಾ ಪರವಾಗಿ ಕೆ.ಶಶಿಕುಮಾರ್ ಮತ್ತು ಪೃಥ್ವಿರಾಜ್ ಶೆಖಾವತ್ ತಲಾ 2 ವಿಕೆಟ್ ಪಡೆದು ಗಮನ ಸೆಳೆದರು. ಪ್ರವೀಣ್ ದುಬೆ ಹಾಗೂ ಲವಿಷ್ ಕುಶಾಲ್ ತಲಾ ಒಂದೊಂದು ವಿಕೆಟ್ ಕಿತ್ತರು.

ಶಿವಮೊಗ್ಗ ನೀಡಿದ 134 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ್ದ ಗುಲ್ಬರ್ಗಾ ತಂಡಕ್ಕೆ ನಿಕಿನ್ ಜೋಸ್ ಮತ್ತು ಸ್ಮರಣ್ ರವಿಚಂದ್ರನ್ ಆಸರೆಯಾದರು. ಜೋಸ್ 40(42) ರನ್ ಗಳಿಸಿದರೇ, ರವಿಚಂದ್ರನ್ 30 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಸಹಿತ 53 ರನ್ ಗಳಿಸಿ ಅಜೇಯರಾಗಿ ಉಳಿದು ತಂಡಕ್ಕೆ ಗೆಲುವು ತಂದುಕೊಟ್ಟರು. ಉಳಿದಂತೆ ಲುವ್ನಿತ್ ಸಿಸೋಡಿಯಾ 7(3), ಪ್ರಜ್ವಲ್ ಪವನ್ 20(25), ಪ್ರವೀಣ್ ದುಬೆ ಔಟಾಗದೇ 5(3) ರನ್ ಗಳಿಸಿದರು. ಶಿವಮೊಗ್ಗ ಪರ ವಾಸುಕಿ ಕೌಶಿಕ್, ಧ್ರುವ್ ಪ್ರಭಾಕರ್ ಹಾಗೂ ಹಾರ್ದಿಕ್ ರಾಜ್ ತಲಾ ಒಂದೊಂದು ವಿಕೆಟ್ ಪಡೆದರು.

ಪಂದ್ಯಶ್ರೇಷ್ಠ: ಸ್ಮರಣ್ ರವಿಚಂದ್ರನ್

ಇಂದಿನ ಪಂದ್ಯಗಳು

ಪಂದ್ಯ–19: ಗುಲ್ಬರ್ಗಾ ಮಿಸ್ಟಿಕ್ಸ್ vs ಮೈಸೂರು ವಾರಿಯರ್ಸ್ (ಮಧ್ಯಾಹ್ನ 3.15)

ಪಂದ್ಯ–20: ಹುಬ್ಬಳ್ಳಿ ಟೈಗರ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ 7.15)

ಡ್ರ್ಯಾಗನ್ಸ್ ಮಣಿಸಿ ಅಗ್ರಸ್ಥಾನಕ್ಕೇರಿದ ಟೈಗರ್ಸ್

ಮೈಸೂರು, ಆ.19(ವಿವಿಹೆಚ್)– ಕೆ.ಸಿ.ಕಾರ್ಯಪ್ಪ ಹಾಗೂ ಯಶ್‌ರಾಜ್ ಪೂಂಜಾ ಅವರ ಮಾರಕ ಬೌಲಿಂಗ್ ದಾಳಿಗೆ ನಲುಗಿದ ಮಂಗಳೂರು ಡ್ರ್ಯಾಗನ್ಸ್ 23 ರನ್‌ಗಳ ಸೋಲು ಅನುಭವಿಸಿದರೇ, ಡ್ರ್ಯಾಗನ್ಸ್ ಮಣಿಸಿದ ಹುಬ್ಬಳ್ಳಿ ಟೈಗರ್ಸ್ ಆಡಿರುವ 6 ಪಂದ್ಯಗಳಲ್ಲಿ 4 ರಲ್ಲಿ ಗೆಲುವು ಸಾಧಿಸಿ, 2ರಲ್ಲಿ ಸೋಲು ಅನುಭವಿಸಿ 8 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಮೈಸೂರಿನ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಪರ ನಾಯಕನಿಗೆ ತಕ್ಕ ಆಟವಾಡಿದ ದೇವದತ್ತ ಪಡಿಕ್ಕಲ್ 45 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಒಳಗೊಂಡ 63 ರನ್ ಗಳಿಸಿ ಆರಂಭಿಕ ಆಘಾತಕ್ಕೆ ಒಳಗಾಗಿದ್ದ ತಂಡಕ್ಕೆ ಆಸರೆಯಾದರು. ಇವರಿಗೆ ಅಭಿನವ್ ಮನೋಹರ್ 36, ಕೃಷ್ಣನ್ ಶ್ರೀಜಿತ್ 18, ತಾಹಾ 11 ಉತ್ತಮ ಸಾಥ್ ನೀಡಿದರು. ಉಳಿದಂತೆ ಶಿವಕುಮಾರ್ ರಕ್ಷಿತ್ 8, ಮನ್ವಂತ್ ಕುಮಾರ್ 6 ರನ್ ಗಳಿಸಿದರು. ಅಂತಿಮವಾಗಿ ಹುಬ್ಬಳ್ಳಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಿತು. ಮಂಗಳೂರು ಪರ ಕ್ರಾಂತಿಕುಮಾರ್ 3, ರೋನಿತ್ ಮೋರೆ 2, ಮ್ಯಾಕ್ನಿಲ್ ಹಾಗೂ ಶ್ರೀವತ್ಸ ಆಚಾರ್ಯ ತಲಾ ಒಂದೊಂದು ವಿಕೆಟ್ ಪಡೆದರು.



153 ರನ್‌ಗಳ ಗುರಿ ಬೆನ್ನತ್ತಿದ ಮಂಗಳೂರು ಡ್ರ್ಯಾಗನ್ಸ್ 18.3 ಓವರ್‌ಗಳಲ್ಲಿ 129 ರನ್‌ಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಲೋಚನ್ ಗೌಡ 19, ಬಿ.ಆರ್.ಶರತ್ 22, ತಿಪ್ಪಾ ರೆಡ್ಡಿ 21, ಮ್ಯಾಕ್ನಿಲ್ 35, ಸಚಿನ್ ಶಿಂಧೆ 10 ರನ್ ಗಳಿಸಿದರು. ಹುಬ್ಬಳ್ಳಿ ಪರ ಕೆ.ಸಿ.ಕಾರ್ಯಪ್ಪ ಹಾಗೂ ಯಶ್‌ರಾಜ್ ಪೂಂಜಾ ತಲಾ 3, ನಾಥನ್ ಡಿ ಮೆಲ್ಲೊ, ಶ್ರೀಶಾ ಆಚಾರ್ ತಲಾ 2 ವಿಕೆಟ್ ಕಬಳಿಸಿ ಹುಬ್ಬಳ್ಳಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೆ.ಸಿ.ಕಾರ್ಯಪ್ಪ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಒಬ್ಬ : ಪ್ರಾಣಿಗಳಿಗೆ ದೃಷ್ಟಿದೋಷ ಇರಲ್ಲ ಅಲ್ವಾ...!?

ಮತ್ತೊಬ್ಬ : ಇರಬೇಕು.. ನಾನಂತೂ ಇದುವರೆಗೆ ಯಾವ ಪ್ರಾಣಿಯೂ ಕನ್ನಡಕ ಹಾಕಿದ್ದ ನೋಡಿಯೇ ಇಲ್ಲ ನೋಡು...!?

ಮೈಸೂರು ಮಿತ್ರ

ಬುಧವಾರ, 20 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮುಗುಳ್ನಗೆ ಮತ್ತು ಮೌನ ಇವೆರಡೂ ಅತ್ಯಂತ ಪ್ರಭಾವಿ ಸಾಧನಗಳು. ಮುಗುಳ್ನಗೆ ಸಮಸ್ಯೆಗಳನ್ನು ಬಗೆಹರಿಸಿದರೆ, ಮೌನವು ಸಾಕಷ್ಟು ಸಮಸ್ಯೆಗಳಿಂದ ನಮ್ಮನ್ನು ದೂರವಿರಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರು ಕೊಳ್ಳೆ ಹೊಡೆದ ಮೇಲೆ ಊರ ಬಾಗಿಲು ಹಾಕಿದರಂತೆ!

ನಿಮ್ಮ ಪತ್ರಗಳು

ದಟ್ಟಗಳ್ಳಿ ನಂದಿ ವೃತ್ತದಲ್ಲಿ ಬೀದಿದೀಪದ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,



ಮೈಸೂರು ದಟ್ಟಗಳ್ಳಿಯ ನಂದಿ ವೃತ್ತದಿಂದ ಘಂಟೆ ಬಸಪ್ಪ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಬೀದಿದೀಪಗಳಿಲ್ಲದೆ ದಿನನಿತ್ಯ ಓಡಾಡುವವರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಎರಡು ರಸ್ತೆಗಳಿದ್ದು, ಮಧ್ಯೆ ದೊಡ್ಡಮೋರಿ ಹಾದು ಹೋಗಿದೆ. ಮೋರಿಯ ಎಡಭಾಗದ ಕದಂಬ ಬೇಕರಿಗೆ ಹೋಗುವ ರಸ್ತೆಗೆ ದೀಪದ ವ್ಯವಸ್ಥೆಯಿದ್ದು, ಬಲಭಾಗದ ಘಂಟೆ ಬಸಪ್ಪ ದೇವಸ್ಥಾನಕ್ಕೆ ಹೋಗುವ ರಸ್ತೆಗೆ ದೀಪಗಳಿಲ್ಲ. ಇದರಿಂದ ರಾತ್ರಿಯಾಗುತ್ತಿದ್ದಂತೆ ಇಡೀ ರಸ್ತೆಯನ್ನು ಕತ್ತಲೆ ಆವರಿಸುತ್ತದೆ. ಇದು ಕುಡುಕರು ಹಾಗೂ ಸರಗಳ್ಳರಿಗೆ ವರದಾನವಾಗಿದೆ. ಈ ರಸ್ತೆಯಲ್ಲಿ ಗಿಡಗಂಟಿಗಳು ಅಧಿಕವಾಗಿರುವುದರಿಂದ ಹಾವುಗಳು ಸೇರಿದಂತೆ ಇನ್ನಿತರೆ ವಿಷಜಂತುಗಳು ಆಗಾಗ್ಗೆ ರಸ್ತೆಗೆ ಬರುತ್ತಿವೆ. ಹೀಗಾಗಿ, ಇಲ್ಲಿನ ವಾಯುವಿಹಾರಿಗಳು, ಮಹಿಳೆಯರು, ಮಕ್ಕಳು ಭಯದಿಂದ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತು ರಸ್ತೆಗೆ ತ್ವರಿತವಾಗಿ ದೀಪದ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ, ಗಿಡಗಂಟಿಗಳನ್ನು ತೆರವುಗೊಳಿಸಿ. ಸಾರ್ವಜನಿಕರು ನಿರ್ಭೀತಿಯಿಂದ ಓಡಾಡಲು ಅನುವು ಮಾಡಿಕೊಡಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು

ಕನ್ನಡ ಪರ ಚಳುವಳಿಗೆ ಹೊಸ ದಿಕ್ಕು ತೋರಿದ ಸ.ರ.ಸುದರ್ಶನ

ಮಾನ್ಯರೆ,



ಕನ್ನಡ ಪರ ಹೋರಾಟಗಾರ, ಹಿರಿಯ ಗಾಂಧಿವಾದಿ ಹಾಗೂ ನಗರದ ನೃಪತುಂಗ ಶಾಲೆಯ ಸಂಸ್ಥಾಪಕರಲ್ಲೊಬ್ಬರಾದ ಸ.ರ.ಸುದರ್ಶನ ಹೃದಯಾಘಾತದಿಂದ ಮೊನ್ನೆ ನಿಧನರಾದರು. ಇದು ಅತ್ಯಂತ ನೋವಿನ ಸಂಗತಿ. ಗೋಕಾಕ್ ಚಳುವಳಿಯಿಂದ ಹಿಡಿದು, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆಯುವ ಚಳುವಳಿ ಸೇರಿದಂತೆ ಹಲವಾರು ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಸ.ರ.ಸುದರ್ಶನ, ಕನ್ನಡ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ತಮ್ಮ ಜೀವಿತ ಕಾಲದ ಕಡೆವರೆಗೂ ಮುಂದುವರೆದಿದ್ದರು.

ಗಡಿ ವಿವಾದ, ಭಾಷಾ ವಿವಾದ, ನದಿ ನೀರಿನ ಹಂಚಿಕೆಯ ವಿಷಯ, ಮುಂತಾದ ಹತ್ತು ಹಲವು ವಿಚಾರಗಳ ಬಗ್ಗೆ ತಮ್ಮದೇ ಆದ ನಿಲುವು ಹೊಂದಿದ್ದ ಸುದರ್ಶನ, ಅವುಗಳಿಗೆ ಕಂಟಕ ಬಂದಾಗಲೆಲ್ಲಾ ತಮ್ಮ ಇತರ ಸಮಾನಮನಸ್ಕರೊಂದಿಗೆ ಚಳುವಳಿಗೆ ಧುಮುಕುತ್ತಿದ್ದರು. ಮೈಸೂರು ವಿಶ್ವ ವಿದ್ಯಾನಿಲಯದ ಪ್ರಸಾರಾಂಗದಲ್ಲಿ ಇಂಗ್ಲಿಷ್ ಕನ್ನಡ ನಿಘಂಟಿನ ಸಹಾಯಕ ಸಂಪಾದಕರಾಗಿ ಮೊದಲ ಬಾರಿ ನೇಮಕಗೊಂಡು ಸುಮಾರು 14 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ನಂತರ ಗೌರವ ಸಂಪಾದಕರಾಗಿ 25,000 ಪದಗಳಿರುವ ಸಂಕ್ಷಿಪ್ತ ಇಂಗ್ಲಿಷ್– ಕನ್ನಡ ನಿಘಂಟನ್ನು ಸಿದ್ಧಪಡಿಸಿದ್ದರು.

ನಗರದ ಚಾರಿತ್ರಿಕ ಮಹಾರಾಣಿ ಮಾದರಿ ಶಾಲೆಯನ್ನು ಉಳಿಸಿಕೊಳ್ಳಲು ಇತರ ಹೋರಾಟಗಾರರ ಜೊತೆ ದಶಕಗಳಿಗಿಂತ ಹೆಚ್ಚು ಕಾಲ ಹೋರಾಟ ನಡೆಸಿದ್ದರು. ನೋಡಲು ಕೃಶಕಾಯರಂತೆ ಕಂಡು ಬಂದರೂ, ಅವರಲ್ಲಿ ತುಂಬಿ ತುಳುಕುತ್ತಿದ್ದ ಭಾಷಾಭಿಮಾನ ಮತ್ತು ಆತ್ಮ ಸ್ಥೈರ್ಯ ಅಚ್ಚರಿಗೊಳಿಸು ವಂತಹುದು. ಅವರ ಅಭೀಷ್ಟದಂತೆ ಅವರ ದೇಹವನ್ನು ಆಸ್ಪತ್ರೆಗೆ ದಾನವಾಗಿ ನೀಡಿರುವುದು ಸಹ ಇಲ್ಲಿ ಉಲ್ಲೇಖಾರ್ಹ. ಅವರ ಆತ್ಮಕ್ಕೆ ಶಾಂತಿ ಕೋರೋಣ.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮೀಸಲಾತಿ ಕಲ್ಪಿಸಿದ ಕೀರ್ತಿ ಮೈಸೂರು ಅರಸ ನಾಲ್ವಡಿಯವರದು

ಮಾನ್ಯರೆ,

ಗುಂಡ್ಲುಪೇಟೆ ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಅಭಿಮಾನಿಗಳು ಆಯೋಜಿಸಿದ್ದ ತಮ್ಮ 75ನೇ ವರ್ಷದ ಹುಟ್ಟುಹಬ್ಬದ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಶೋಷಿತರು ಹಾಗೂ ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ದೇಶದಲ್ಲಿ ಸಂವಿಧಾನಕ್ಕಿಂತಲೂ ಮೊದಲು ಮೀಸಲಾತಿ ಕಲ್ಪಿಸಿದವರು ಮೈಸೂರು ಅರಸರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಎಂದು ಹೇಳಿರುವುದು ಶ್ಲಾಘನೀಯ. ಮೈಸೂರಿನ ಮಹಾರಾಜರುಗಳ ನಿಲುವು ಯಾವಾಗಲೂ ಸಾಮಾಜಿಕ ನ್ಯಾಯದ ಪರವಾಗಿತ್ತು. 1927ರ ಮಿಲ್ಲರ್ ಆಯೋಗದ ಶಿಫಾರಸಿನಂತೆ ಬ್ರಾಹ್ಮಣೇತರರಿಗೆ ಶೇ. 75 ರಷ್ಟು ಮೀಸಲಾತಿ ನೀಡಿ ಹೊಸ ಶಕೆಗೆ ನಾಂದಿಹಾಡಿದವರು ಮೈಸೂರು ಅರಸರು. ಆದ್ದರಿಂದ ನಾವು ಯದುವಂಶಸ್ಥ ರಾಜರ ಕುಟುಂಬವನ್ನು ಗೌರವಿಸುತ್ತೇವೆ ಎಂದು ಹೇಳಿರುವುದು ಸ್ವಾಗತಾರ್ಹ. ಸರಳ ಸಜ್ಜನಿಕೆಯ ರಾಜಕಾರಣಿ ಡಾ. ಜಿ. ಪರಮೇಶ್ವರ್ ಅವರ ಸಾಧನೆ ಬಹಳ ದೊಡ್ಡದು. ಬಂಡೀಪುರ ಅರಣ್ಯದೊಳಗಿನ ಹೆದ್ದಾರಿಗಳಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ನಮ್ಮ ವಿರೋಧವಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಹೇಳಿರುವುದು ಮೆಚ್ಚುವಂತದ್ದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1914 ರಲ್ಲಿ ವಿದ್ಯೆ ಪಡೆಯುವುದು ಸಾರ್ವಜನಿಕರ ಹಕ್ಕು ಎಂದು ರಾಜಾಜ್ಞೆ ಹೊರಡಿಸಿದ್ದುದರ ವಿರುದ್ಧ ಕೆಲವರು ಪ್ರತಿಭಟನೆ ನಡೆಸಿದ್ದುದ್ದು ಇತಿಹಾಸ. ದಲಿತ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನರಸಿಂಹರಾಜ ಕಂಠೀರವ ಶಾಲೆ ಮತ್ತು ಹಾಸ್ಟೆಲ್ ತೆರೆದಿದ್ದುದ್ದರಿಂದಲೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಸರ್ಕಾರಿ ಸೇವೆಗೆ ಸೇರಲು ಸಾಧ್ಯವಾಗಿದೆ ಎಂದು ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ. ರಾಜು ಅವರು ಹೇಳಿರುವುದು ಗಮನಾರ್ಹ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಅಡಗೂರು ಹೆಚ್.ವಿಶ್ವನಾಥ್

ಸಾಹಿತಿ–ರಾಜಕಾರಣಿ

ಮೊ: 96639 96390

ಹಳ್ಳಿ ಹಕ್ಕಿ ಹಾಡು



ಅರಸರಿಗೆ ಅರಸರೇ ಸಾಟಿ...

ಹತ್ತಿರ ಹತ್ತಿರ 8 ವರ್ಷಗಳ ಕಾಲ ಕರ್ನಾಟಕ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದು, ಅಭಿವೃದ್ಧಿಯಲ್ಲಿ ಭಾಷ್ಯ ಬರೆದು ಇಂದು ಜನಮಾನಸದಲ್ಲಿ ಹಸಿರಾಗಿ ರುವ ದೇವರಾಜ ಅರಸರ ನೆನಪನ್ನು ಅಕ್ಷರಗಳಲ್ಲಿ ಕಟ್ಟಿಕೊಡುವ ಒಂದು ಪ್ರಾಮಾಣಿಕ ಪ್ರಯತ್ನ ನನ್ನದು.

ಹುಣಸೂರು ಎಂದರೆ ದೇವರಾಜ ಅರಸರು. ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ ಪದವೀಧರರಾಗಿ, ನಂತರ ರಾಜಾಶ್ರಯದ ಪ್ರತಿನಿಧಿ ಸಭೆಯ ಸದಸ್ಯರಾಗಿ ನಂತರ ಜನತಂತ್ರ ವ್ಯವಸ್ಥೆಯ ಜನಾನುರಾಗಿ ನಾಯಕನಾಗಿ ಸೋಲರಿಯದ ಸರದಾರನಾಗಿ ನನ್ನಂತಹ ಹಲವಾರು ಜನ ಯುವನಾಯಕರನ್ನು ರಾಜಕೀಯವಾಗಿ ಬೆಳೆಸಿದ ಕೀರ್ತಿ ಪುರುಷರು ನಮ್ಮ ಅರಸರು.

1970ರ ದಶಕದಲ್ಲಿ ಕಾಂಗ್ರೆಸ್, ಇಂದಿರಾ ಕಾಂಗ್ರೆಸ್ ಹಾಗೂ ಸಂಸ್ಥಾ ಕಾಂಗ್ರೆಸ್ ಆಗಿ ಹೋಳಾಯಿತು. ಇಂದಿರಾ ಕಾಂಗ್ರೆಸ್ಸಿನ ನಾಯಕಿ ಶ್ರೀಮತಿ ಇಂದಿರಾ ಗಾಂಧಿಯವರು. ಸಂಸ್ಥಾ ಕಾಂಗ್ರೆಸ್ಸಿನ ರಾಷ್ಟ್ರಾಧ್ಯಕ್ಷರು ಕರ್ನಾಟಕದ ಎಸ್. ನಿಜಲಿಂಗಪ್ಪನವರು.

ಶ್ರೀಮತಿ ಇಂದಿರಾ ಗಾಂಧಿಯವರ ಹೊಸ ರಾಜಕೀಯ ಪಟ್ಟು ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್ಸಿನ ಸಾರಥ್ಯವನ್ನು ಸ್ವಾತಂತ್ರ್ಯ ಹೋರಾಟಗಾರ ಗುಲ್ಬರ್ಗಾ ಜಿಲ್ಲೆಯ ಕೊಲ್ಲೂರು ಮಲ್ಲಪ್ಪನವರಿಗೆ ವಹಿಸಲು ಇಂದಿರಾರವರು ಮುಂದಾದಾಗ, ಮಲ್ಲಪ್ಪನವರು ಬೇಡ ಎಂದು ಹೇಳಿ, ಆ ಸ್ಥಾನಕ್ಕೆ ಡಿ. ದೇವರಾಜ ಅರಸರನ್ನು ಹೆಸರಿಸುತ್ತಾರೆ.

ಇಂದು ದೇವರಾಜ ಅರಸರ ಜನ್ಮ ದಿನಾಚರಣೆ

ಹುಣಸೂರಿನ ಅರಸರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಸಂಚಾಲಕರಾಗಿ ಪಕ್ಷ ಸಂಘಟನೆಯನ್ನು ಆರಂಭಿಸಿದರು. 1971ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರೊಂದನ್ನು ಬಿಟ್ಟು ಮಿಕ್ಕೆಲ್ಲಾ ಸ್ಥಾನಗಳನ್ನು ಅರಸರ ನೇತೃತ್ವದಲ್ಲಿ ಕಾಂಗ್ರೆಸ್ ಗೆಲ್ಲುತ್ತದೆ. ಮುಂದೆ 1972ರಲ್ಲಿ ಕರ್ನಾಟಕದ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕ ಸ್ಥಾನಗಳನ್ನು ಪಡೆದು, ಅರಸರು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿ ಸ್ಥಾಪಿತರಾದರು.

ಅರಸರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಎಲ್ಲರ ಪ್ರೀತಿ–ವಿಶ್ವಾಸದೊಡನೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಆರಂಭಿಸಿದರು. ರಾಜ್ಯದ ಜನ, ಓಟಿನ ಮೂಲಕ ತಮ್ಮ ಸೇವೆ ಮಾಡಲಿ ಎಂದು ನನಗೆ ರಾಜ್ಯದ ಆಡಳಿತ ನಿರ್ವಹಿಸಲು ಅವಕಾಶ ಮಾಡಿಕೊಟ್ಟಿದ್ದಾರೆಯೇ ಹೊರತು ಬರೀ ಅಧಿಕಾರ ಮಾಡುವುದಕ್ಕಲ್ಲ ಎಂಬ ಮಾತನ್ನು ಅಂದು ಅರಸರು ಆಡುತ್ತಾರೆ. ರಾಜ ಪ್ರಭುತ್ವದಲ್ಲಿ ಮೈಸೂರು ಮಹಾರಾಜರು ಪ್ರಾರಂಭಿಸಿದ ಹಲವಾರು ಜನ ಕಲ್ಯಾಣ ಕಾರ್ಯಕ್ರಮ ಗಳನ್ನು ಪ್ರಜಾಪ್ರಭುತ್ವದ ನಾಯಕರಾಗಿ ಅರಸರು ಮುಂದುವರಿಸುತ್ತಾರೆ.

ಕರ್ನಾಟಕದ ಏಕೀಕರಣದ ಮುಂದುವರೆದ ಭಾಗವಾಗಿ 'ಮೈಸೂರು ರಾಜ್ಯ' ಹೆಸರನ್ನು ತೆಗೆದು 'ಕರ್ನಾಟಕ' ಎಂದು ನಾಮಕರಣ ಮಾಡುತ್ತಾರೆ. ಅದೊಂದು ಐತಿಹಾಸಿಕ ತೀರ್ಮಾನ ಅಂದು ಮುಕ್ಕೋಟಿ ಕನ್ನಡಿಗರು ಕರ್ನಾಟಕ ನಾಮಕರಣವನ್ನು ಅತ್ಯಂತ ಉತ್ಸಾಹ, ಸಂತೋಷದಿಂದ ಸ್ವಾಗತಿಸಿದರು.

ಜನರ ಬವಣೆಗಳನ್ನು ಆಲಿಸಿ, ಅವುಗಳ ನಿವಾರಣೆಗೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದ ಅವರ ಅಂತರಂಗ ಯಾವುದೇ ಜನನಾಯಕರಲ್ಲಿ ನಾನಂತೂ ಇದುವರೆಗೆ ಕಂಡಿಲ್ಲ–ಕೇಳಿಲ್ಲ. ಒಂದು ಸಾರಿ ಅವರು ರಸ್ತೆಯಲ್ಲಿ ಕಾರಿನಲ್ಲಿ ಹೋಗುತ್ತಿರಬೇಕಾದರೆ ಬಹಳಷ್ಟು ಜನ ಹೆಣ್ಣು ಮಕ್ಕಳು ಸಾಲಾಗಿ ಗಿಡ–ಗಂಟಿಯ ಪುಳ್ಳೆಗಳನ್ನು ಹೊತ್ತು ಸಾಲಾಗಿ ಹೋಗುತ್ತಿರುತ್ತಾರೆ. ಅರಸರು, ತಮ್ಮ ಕಾರನ್ನು ನಿಲ್ಲಿಸಿ, ಹೊರೆ ಹೊತ್ತು ಹೋಗುತ್ತಿದ್ದ ಹೆಣ್ಣು ಮಕ್ಕಳನ್ನು ಕೇಳುತ್ತಾರೆ; 'ಈ ಹೊರೆಯ ಎಲ್ಲಿಗೆ ಹೊಯ್ಯುತ್ತಿದ್ದೀರಾ'! ಎಂದು. ಅದಕ್ಕವರು ಉತ್ತರಿಸುತ್ತಾರೆ; ರಾತ್ರಿ ಕತ್ತಲಲ್ಲಿ ಬೆಳಕು ಕಾಣಲು ಮತ್ತು ಅಡುಗೆ ಮಾಡಿಕೊಳ್ಳಲು! ಇದನ್ನು ಕೇಳಿದ ಬಳಿಕ ಅರಸರು ಬೆಂಗಳೂರಿಗೆ ವಾಪಸ್ಸಾದ ಕೂಡಲೇ ಅಧಿಕಾರಿಗಳ ಸಭೆ ಕರೆದು ಅಂತಹ ಬಡ ಕುಟುಂಬಗಳಿಗಾಗಿಯೇ ಒಂದು ಬಲ್ಬ್‌ನ 'ಭಾಗ್ಯಜ್ಯೋತಿ' ಕಾರ್ಯಕ್ರಮ ರೂಪಿಸುತ್ತಾರೆ. ಇದರಿಂದ ಬಡವನ ಮನೆ ಬೆಳಗಿ, ಆ ಮನೆಯ ಮಕ್ಕಳ ವಿದ್ಯಾಭ್ಯಾಸಕ್ಕೂ ಅನುಕೂಲವಾಯಿತು.

> “ ಅರಸರು ಬಹಳ ಮಂದಿಯನ್ನ ಜನ ನಾಯಕರನ್ನಾಗಿ ಬೆಳೆಸಿದರು. ಅವರಲ್ಲಿ ಕೆಲವರು ಮುಖ್ಯಮಂತ್ರಿಗಳು ಸಹ ಆಗಿ ಹೋದರು. ಆದರೆ ಅವರ್‍ಯಾರು ಅರಸರ ಹೆಸರನ್ನು ನೆನೆಯುವುದಿಲ್ಲ. ಕೆಲವು ಸ್ನೇಹಿತರು ಪ್ರಸ್ತುತ ಮುಖ್ಯಮಂತ್ರಿಗಳನ್ನು ಅರಸರಿಗೆ ಹೋಲಿಸುತ್ತಾರೆ. ಸದಾ ಬಡವರ ಬದುಕಿನ ಬಗೆಗೆ ತುಡಿಯುತ್ತಿದ್ದ, ಸಮ–ಸಮಾಜದ ನಿರ್ಮಾಣಕ್ಕಾಗಿ ಹಲವಾರು ಕಾರ್ಯಕ್ರಮಗಳ ರೂವಾರಿ ಅರಸರೆಲ್ಲಿ...? ಐದು ಕೆ.ಜಿ. ಅಕ್ಕಿಯ ಅನ್ನಭಾಗ್ಯದ ಹೆಸರಲ್ಲಿ ಅನ್ನ ರಾಮಯ್ಯ ಎಂದು ಕೂಗಿಸಿಕೊಳ್ಳುವ ಸಿದ್ದರಾಮಯ್ಯನೆಲ್ಲಿ...? ಅರಸರಿಗೆ ಅರಸರು ಸಾಟಿಯೇ ಹೊರತು ಹೋಲಿಕೆ ಮಾಡುವುದು ಸಮಂಜಸವಲ್ಲ.


ಅರಸರು ಇಂತಹ ಹಲವಾರು ಕಾರ್ಯಕ್ರಮಗಳನ್ನು ನಾಡಿನ ಅತ್ಯಂತ ಬಡ ಕುಟುಂಬಗಳಿಗೆ ನೀಡುವ ಮೂಲಕ ಸಮಾನತೆಯನ್ನ ಸಾರುತ್ತಾರೆ. ಇಂದಿರಾ ಗಾಂಧಿಯವರು ದೇಶದಲ್ಲಿ ತಂದಂತಹ ತುರ್ತು ಪರಿಸ್ಥಿತಿ (Emergency-1975-June) ಅಸ್ತ್ರವನ್ನು ಅರಸರು, ಯಾವುದೇ ರಾಜಕೀಯ ವೈರಿಗಳ ವಿರುದ್ಧ ಪ್ರಯೋಗಿಸದೆ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಬಳಸಿದ್ದು ಜನತಂತ್ರ ವ್ಯವಸ್ಥೆಯ, ಜನಾದೇಶ ಪಡೆದ ಸರಕಾರದ ಉತ್ತಮ ನಡವಳಿಕೆಗಳನ್ನು ಸಾದರಪಡಿಸುತ್ತದೆ.

ಭೂ ಸುಧಾರಣಾ ಕಾಯಿದೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತಂದು ಸುಮಾರು 21 ಲಕ್ಷ ಹೆಕ್ಟೇರ್ ಭೂಮಿಯನ್ನು ಗೇಣಿದಾರ ಬಡ ರೈತರ ಕುಟುಂಬಗಳಿಗೆ ಹಂಚುವುದರ ಮೂಲಕ ಭೂಮಿಯನ್ನ ಉತ್ತು–ಬಿತ್ತಿ, ತಲತಲಾಂತರದವರೆಗೆ ಚೆನ್ನಾಗಿ ಬಾಳಿ ಎನ್ನುತ್ತಾರೆ. ಆದರೆ, ಈಗಿನ ನಮ್ಮ ರಾಜ್ಯ ಸರ್ಕಾರ 10 ಕೆಜಿ ಅಕ್ಕಿ ಕೊಟ್ಟು ಅನ್ನಭಾಗ್ಯದ ಮೂಲಕ ಬಡವನ ಹಸಿವನ್ನು ನೀಗಿಸುತ್ತಿರುವುದಾಗಿ ಬೀಗುತ್ತಿದೆ. ಆದರೆ, ಅವರ ಭವಿಷ್ಯಕ್ಕೆ ಏನು ಆಧಾರ? ಹೀಗೆ ಕೊಡುತ್ತಿರುವ ಅಕ್ಕಿಯಲ್ಲೂ ಐದು ಕೆ.ಜಿ. ಕೇಂದ್ರದ ಮೋದಿಯವರ ಕಾರ್ಯಕ್ರಮ. ಇದನ್ನು ಮಾತ್ರ ಹೇಳುವುದಿಲ್ಲ ನಮ್ಮ ಸರ್ಕಾರ.

ಜೀತ ವಿಮೋಚನೆಯಂತಹ ಅಮಾನವೀಯ ಪದ್ಧತಿ ನಿಷೇಧ, ಸಾಲ ವಿಮೋಚನೆ ಎಂಬ ಸಾಲದ ಸುಳಿಯಲ್ಲಿ ಸಿಲುಕಿ ನಲುಗುತ್ತಿದ್ದ ಕುಟುಂಬಗಳ ಮುಕ್ತಿ ಮಾರ್ಗ, ಬಡವರಿಗೆ ಉಚಿತ ನಿವೇಶನ, ಮನೆ ಮನೆಗೊಂದು ದೀಪ, ಹಿಂದುಳಿದ ಅಲ್ಪಸಂಖ್ಯಾತ, ಹರಿಜನ–ಗಿರಿಜನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲಕಾರಿಯಾಗಿ ಉಚಿತ ವಿದ್ಯಾನಿಲಯಗಳು ಪ್ರತಿ ಜಿಲ್ಲೆ, ತಾಲೂಕು, ಹೋಬಳಿ ಕೇಂದ್ರಗಳಲ್ಲಿ ಪ್ರಾರಂಭವಾಗಿ ಲಕ್ಷಾಂತರ ವಿದ್ಯಾರ್ಥಿಗಳ ಬಾಳಲ್ಲಿ ಶಿಕ್ಷಣದ ಬೆಳಕು ಚೆಲ್ಲಿದರು ನಮ್ಮ ಅರಸರು.

ಬಹಳ ಪ್ರಮುಖವಾಗಿ ಹಿಂದುಳಿದ ವರ್ಗಗಳ ಹಾವನೂರ್ ಆಯೋಗ ರಚನೆ, ತ್ವರಿತವಾಗಿ ಅದರ ಮಂಡನೆ ಮಂಡನೆ, ಎಷ್ಟೋ ರಾಜಕೀಯ ಪಕ್ಷಗಳ ಮುಖಂಡರು ಭಾರೀ ವಿರೋಧ ಮಾಡಿದರೂ ಅದನ್ನು ಅನುಷ್ಠಾನ ಮಾಡಿದ್ದು, ಕರ್ನಾಟಕದ ರಾಜಕಾರಣದ ಒಂದು ಮಹಾ ಮೈಲಿಗಲ್ಲಲ್ಲದೆ ಮತ್ತೇನು! ಹಾವನೂರ್ ಆಯೋಗದಿಂದ ಬಹಳಷ್ಟು ಮನೆಗಳಿಗೆ ಅಳಿಯಂದಿರುಗಳಾಗಿ ಅಸಿಸ್ಟೆಂಟ್ ಕಮಿಷನರ್‌ಗಳು, ತಹಸೀಲ್ದಾರ್‌ಗಳು, ಡಿವೈಎಸ್‌ಪಿಗಳು ಬರುವುದರ ಜೊತೆಗೆ ಮನೆಯ ಮಕ್ಕಳೂ ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆಯುವಂತಾಯಿತು. ಆದರೆ ಪ್ರಸ್ತುತ ಸರ್ಕಾರ 260 ಕೋಟಿ ರೂಪಾಯಿ ಖರ್ಚು ಮಾಡಿ, ವರದಿ ತಯಾರು ಮಾಡಿಸಿದ ಜಾತಿವಾರು ಜನಗಣತಿ ವರದಿಯನ್ನು 10 ವರ್ಷಗಳಾದರೂ ಸ್ವೀಕರಿಸದೇ, ಕೊನೆಗೆ ಸ್ವೀಕರಿಸಿಯೂ ಲಾಬಿಗೆ ಮುಖ್ಯಮಂತ್ರಿ ಮಣಿದು ಮೂಲೆ ಸೇರಿತು.

ಮುಖ್ಯಮಂತ್ರಿಗಳ ಅತ್ಯಾಪ್ತ ಸಲಹೆಗಾರ ಅಮೀನ್ ಮಟ್ಟು ಎಂಬುವವರು ಇತ್ತೀಚೆಗೆ ಡಿ.ದೇವರಾಜ ಅರಸರ ಬಗ್ಗೆ ಮಾತಾಡುತ್ತಾ, ದೇವರಾಜ ಅರಸರು ಮುಖ್ಯಮಂತ್ರಿ ಸಿದ್ದರಾಮಯ್ಯನಂತಹ ಮಾಸ್ ಲೀಡರ್ ಆಗಿರಲಿಲ್ಲ ಎಂದರು. ಮುಖ್ಯಮಂತ್ರಿಗಳ ಆಸ್ಥಾನದಲ್ಲಿ ಇಂತಹ ಸಲಹೆಗಾರರು ಬಹಳ ಮಂದಿ ಇದ್ದಾರೆ. ಇಂದು ಕರ್ನಾಟಕದಲ್ಲಿ ಆಗಿ ಹೋದ ಅದೆಷ್ಟೋ ಮುಖ್ಯಮಂತ್ರಿಗಳನ್ನು ಜನಸಾಮಾನ್ಯರು ಮರೆತರೂ, ಅರಸರನ್ನು ಸದಾ ಅವರ ಹೃದಯ ಸಿಂಹಾಸನದಲ್ಲಿ ಹಸಿರಾಗಿಸಿಕೊಂಡಿದ್ದಾರೆ.



ಡಿ. ದೇವರಾಜ ಅರಸು

ಅರಸರು ಬಹಳ ಮಂದಿಯನ್ನ ಜನನಾಯಕರುಗಳನ್ನಾಗಿ ಬೆಳೆಸಿದರು. ಅವರಲ್ಲಿ ಕೆಲವರು ಮುಖ್ಯಮಂತ್ರಿಗಳು ಸಹ ಆಗಿ ಹೋದರು. ಆದರೆ ಅವರ್‍ಯಾರು ಅರಸರ ಹೆಸರನ್ನು ನೆನೆಯುವುದಿಲ್ಲ. ಕೆಲವು ಸ್ನೇಹಿತರು ಪ್ರಸ್ತುತ ಮುಖ್ಯಮಂತ್ರಿಗಳನ್ನು ಅರಸರಿಗೆ ಹೋಲಿಸುತ್ತಾರೆ. ಸದಾ ಬಡವರ ಬದುಕಿನ ಬಗೆಗೆ ತುಡಿಯುತ್ತಿದ್ದ, ಸಮ–ಸಮಾಜದ ನಿರ್ಮಾಣಕ್ಕಾಗಿ ಹಲವಾರು ಕಾರ್ಯಕ್ರಮಗಳ ರೂವಾರಿ ಅರಸರೆಲ್ಲಿ...? ಐದು ಕೆ.ಜಿ. ಅಕ್ಕಿಯ ಅನ್ನಭಾಗ್ಯದ ಹೆಸರಲ್ಲಿ ಅನ್ನ ರಾಮಯ್ಯ ಎಂದು ಕೂಗಿಸಿಕೊಳ್ಳುವ ಸಿದ್ದರಾಮಯ್ಯನೆಲ್ಲಿ...? ಅರಸರಿಗೆ ಅರಸರು ಸಾಟಿಯೇ ಹೊರತು ಯಾರಿಗೂ ಹೋಲಿಕೆ ಮಾಡುವುದು ಸಮಂಜಸವಲ್ಲ.

ದೇಶದಲ್ಲಿ ನೂರಾರು ರಾಜ–ಮಹಾರಾಜರುಗಳಿದ್ದರೂ ಜನ ಕಲ್ಯಾಣದಲ್ಲಿ ಮೈಸೂರಿನ ಯದು ವಂಶದ ಅರಸರಿಗೆ ಸಾಟಿಯಾದವರು ಯಾರೂ ಇಲ್ಲ. ನಾವು ತಿನ್ನುತ್ತಿರುವ ಅನ್ನ, ಅಕ್ಷರ, ಆರೋಗ್ಯ, ಕೃಷಿ, ಉದ್ಯೋಗ ಮುಂತಾಗಿ ಎಲ್ಲವೂ ಮಹಾರಾಜರು ಕೊಟ್ಟಿರುವ ಕೊಡುಗೆಗಳು. ಆದರೆ, ಪಾಪ... ನಮ್ಮ ಮುಖ್ಯಮಂತ್ರಿಗಳ ಕಂದ! ಶಾಸಕ, 'ನಮ್ಮಪ್ಪ ಮಹಾರಾಜರನ್ನು ಮೀರಿಸಿ ನಾಡನ್ನು ಅಭಿವೃದ್ಧಿ ಮಾಡಿದ್ದಾರೆ' ಎಂದು ಬಹಿರಂಗವಾಗಿ ಘೋಷಿಸಿ ನಗೆಪಾಟಲಿಗೀಡಾಗಿದ್ದಾರೆ. ಇಲ್ಲ... ಇಲ್ಲ... ಮಹಾರಾಜರಿಗಿಂತ ಜಾಸ್ತಿ ಕೆಲಸ ಮಾಡವ್ರೆ ನಮ್ಮ ಸಿಎಮ್ಮು! ಅಂತ ಮೈಸೂರು ಜಿಲ್ಲೆಯ ಶಾಸಕರು ವರ್ಗಾವಣೆ ಅರ್ಜಿಗಳ ಹಿಡಿದು ಸಿಎಂ ಮುಂದೆ ಕೂಗುತ್ತಿದ್ದಾರೆ. ಇದು ಎಂತಹ ವಿಪರ್ಯಾಸ ಅಲ್ಲವೆ?

1980ರ ಜನವರಿ ಮೊದಲ ವಾರದಲ್ಲಿ ಲೋಕಸಭಾ ಚುನಾವಣೆ ನಡೆದು ಇಂದಿರಾಗಾಂಧಿಯವರು ಮತ್ತೆ ಪ್ರಧಾನಿಗಳಾಗುತ್ತಾರೆ. ಸಂಸತ್ ಚುನಾವಣೆಯಲ್ಲಿ ಅರಸರ ಕಾಂಗ್ರೆಸ್ ಪಕ್ಷ ಎಲ್ಲಾ ಸ್ಥಾನಗಳನ್ನು ಕಳೆದುಕೊಂಡು ಹೀನಾಯವಾಗಿ ಸೋಲುತ್ತದೆ. ಫಲಿತಾಂಶ ಬರುತ್ತಿದ್ದ ಹಾಗೆಯೇ ಅರಸರೊಂದಿಗೆ ಇದ್ದ ಕೆಲವು ಶಾಸಕರು ಕಾಂಗ್ರೆಸ್ ಪಕ್ಷದ ನಾಯಕ ಆರ್. ಗುಂಡೂರಾಯರ ಪಾಳಯವನ್ನು ಸೇರುತ್ತಾರೆ. ಅರಸರ ಹಡಗಲ್ಲಿ ದೊಡ್ಡ ಬಿರುಕುಂಟಾಯಿತು. ಅರಸರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ. ಅರಸರಿಗೆ ರಾಜ್ಯ ವಿಧಾನಸಭೆಗೆ ಮಧ್ಯಂತರ ಚುನಾವಣೆ ಆಗಬಾರದು ಎಂಬ ಯೋಚನೆ. ಒಂದು ವೇಳೆ ಚುನಾವಣೆಗೆ ಹೋದರೆ ತಾವು ಸೋತು, ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ. ಬಹಳ ಜನ ಯುವ ಶಾಸಕರ ರಾಜಕೀಯ ಭವಿಷ್ಯ ಮೊಟಕಾಗುತ್ತದೆ ಎಂಬ ಆತಂಕ ಅರಸರಿಗೆ.

ಆ ಬಳಿಕ ಬಾಲಬ್ರೂಯಿಯಲ್ಲಿ ನಡೆದ ಶಾಸಕರ, ಪಕ್ಷದ ಮುಖಂಡರ ಸಭೆಯಲ್ಲಿ ಅರಸರು ಶಾಸಕರನ್ನು ಸಂತೈಸುತ್ತಾ ಹೇಳುತ್ತಾರೆ, **'ನಿಮ್ಮೆಲ್ಲರ ಭವಿಷ್ಯಕ್ಕೆ ಮಂಜು ಕವಿಯಬಾರದು. ನಾನು ಮುಳುಗುತ್ತಿರುವ ಹಡಗು. ನಾನು ಈಗ ಯಾರಿಗೂ ಆಶ್ರಯ ಕೊಡಲಾರೆ. ನಿಮಗೆ ಎಲ್ಲಿ ಬೆಳಕು ಕಾಣುತ್ತದೋ ಅಲ್ಲಿಗೆ ತಕ್ಷಣ ರವಾನೆಯಾಗಿ ಬಿಡಿ... ಹೋಗಿ, ನಿಮಗೆ ಒಳ್ಳೆಯದಾಗಲಿ'** ಎಂದು ಶಾಸಕರಿಗೆ ಅರಸರು ವಿದಾಯ ಹೇಳಿದರು. ಅರಸರ ಮೇರು ವ್ಯಕ್ತಿತ್ವದೆದುರು ನಾವು ಮೂಕರಾದೆವು.

ನಾವೆಲ್ಲಾ ಸ್ನೇಹಿತರು ಹೊಸ ದಿಗಂತದ ಅನ್ವೇಷಣೆಯಲ್ಲಿ ಗುಂಡೂರಾಯರ ಟೆಂಟ್ ಸೇರಿದೆವು. ನಮಗಿಂತ ಮುಂಚೆಯೇ ಅರಸರ ಅರಮನೆಯಿಂದ ಗುಂಡೂರಾಯರ ಮನೆಗೆ ರಾತ್ರೋರಾತ್ರಿ ಓಡಿ ಹೋಗಿದ್ದ ಚನ್ನರಾಯಪಟ್ಟಣದ ಎಚ್.ಸಿ.ಶ್ರೀಕಂಠಯ್ಯ ಮತ್ತಿತರ ಮಹತ್ವಾಕಾಂಕ್ಷಿ ಮುಖಂಡರಿಗೆ ಮಹಾಮಂಗಳಾರತಿಯಾಗಿ, ಆರ್.ಗುಂಡೂರಾಯರು ರಾಜ್ಯದ ಮುಖ್ಯಮಂತ್ರಿಯಾಗಿ ಇಂದಿರಾಗಾಂಧಿಯವರ ಆಶೀರ್ವಾದದಿಂದ ಗದ್ದುಗೆಯೇರಿದರು.

ಇಂತಹ ರಾಜಕೀಯ ಸಂದಿಗ್ಧ ಪರಿಸ್ಥಿತಿಯಲ್ಲಿ ವಿಧಾನಸಭೆಗೆ ಮಧ್ಯಂತರ ಚುನಾವಣೆಯಾಗಿಯುವ ಶಾಸಕರ ಭವಿಷ್ಯ ಮಸುಕಾಗಬಾರದೆಂಬ ಅರಸರ ಕಾಳಜಿ ಫಲಿಸಿತು. ಗುಂಡೂರಾಯರ ಸರ್ಕಾರದಲ್ಲಿ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಅರಸರು ಆಸೀನರಾದರು. ಅಂದು ಅರಸರು ಅಂತಹ ಗಟ್ಟಿಯಾದ ರಾಜಕೀಯ ನಿರ್ಧಾರ ತೆಗೆದುಕೊಳ್ಳದೇ ಇದ್ದರೆ ನಾವೆಲ್ಲ ಮಾಜಿ ಶಾಸಕರಾಗುತ್ತಿದ್ದೆವು. ಕೇವಲ ಒಂದು ವರ್ಷದಲ್ಲಿ ನಮ್ಮ ರಾಜಕೀಯ ಭವಿಷ್ಯ ಕತ್ತಲಾಗುತ್ತಿತ್ತು.

ಮುಖ್ಯಮಂತ್ರಿ ಆಗಿ ಗುಂಡೂರಾಯರು ತಮ್ಮದೇ ಆದ ಶೈಲಿಯಲ್ಲಿ ಆಡಳಿತ ನಡೆಸಲು ಪ್ರಾರಂಭಿಸಿದರು. ಕನ್ನಡ ಭಾಷೆಯ ಜೊತೆಗೆ ಹಿಂದಿ, ತಮಿಳು, ತುಳು, ಮಲಯಾಳಂ, ಇಂಗ್ಲಿಷ್ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಿದ್ದ ರಾಯರು, ಆಕರ್ಷಕ ವ್ಯಕ್ತಿಯಾಗಿದ್ದರು. ಸರ್ಕಾರದ ಅಧಿಕಾರಿಗಳ ವರ್ಗಾವಣೆಯಲ್ಲಿ ಕಟ್ಟುನಿಟ್ಟಾದ ಕ್ರಮಗಳೊಂದಿಗೆ ಆಡಳಿತದಲ್ಲಿ ಬಿಗಿ ತಂದರು. ಒಂದು ಬಾರಿ ವರ್ಗಾವಣೆ ಆದರೆ ಎರಡು ವರ್ಷಗಳ ತನಕ ಮಾರ್ಪಾಡಿನ ಮಾತೇ ಇಲ್ಲ. ಈಗಿನ ಸರ್ಕಾರದ್ದು, ವಾಕರಿಕೆ ತರಿಸುವ ವರ್ಗಾವಣೆ, ಅತಿಯಾದ ಭ್ರಷ್ಟಾಚಾರ ಹೇಸಿಗೆ ತರಿಸುತ್ತಿದೆ. ಸ್ವತಃ ಪ್ರಧಾನಿ ಇಂದಿರಾ ಗಾಂಧಿಯವರು ವಿಧಾನಸೌಧಕ್ಕೆ ಬಂದು ಗುಂಡೂರಾಯರ ಸರ್ಕಾರದ ನಡವಳಿಕೆಗಳನ್ನು ಪರಾಮರ್ಶಿಸಿ, ಬೆನ್ನು ತಟ್ಟಿ ಹೋಗಿದ್ದರು.

ಮಹಾ ಸಾಹಸಿ, ಯಶಸ್ವಿ ಆಡಳಿತಗಾರರೂ ಆಗಿದ್ದ ಗುಂಡೂರಾಯರನ್ನು ಅವರ ವೈಯಕ್ತಿಕ ಬದುಕು, ಬೇಡದ ಸ್ನೇಹಗಳು, ವಿಲಾಸೀ ಜೀವನ, ಹೆಲಿಕಾಪ್ಟರ್ ಹಾರಾಟ, ದುಂದುವೆಚ್ಚ, ಹದ್ದು ಮೀರಿದ ಮಾತುಗಳು ಜನರಲ್ಲಿ ಹೇಸಿಗೆ ತರಿಸಿತು. ಕೊಡಗಿನ ಆಪ್ತ ಗೆಳೆಯ ಎಫ್. ಎಂ. ಖಾನ್ ಮತ್ತು ಗುಂಡೂರಾಯರ ಜೋಡಿ ರಾಜ್ಯ ಸರ್ಕಾರ ಅಧಿಕಾರ ಮತ್ತು ಕಾಂಗ್ರೆಸ್ ಪಕ್ಷವನ್ನು ತಮ್ಮ ಮೋಜಿಗಾಗಿ ಅಡವಿಟ್ಟಿದ್ದು ಕ್ಷಮಿಸಲಾರದ ವಿಷಯವಾಯಿತು. 1983ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋತು ಜೊತೆಗೆ ಮುಖ್ಯಮಂತ್ರಿ ಗುಂಡೂರಾಯರೂ ಕೊಡಗಿನಲ್ಲಿ ಸೋತು, ಮುಖಭಂಗ ಅನುಭವಿಸಿದರು.

ಬಿಗಿ ಆಡಳಿತದ ಜೊತೆಗೆ ನಾಡಿನ ಜನತೆ ರಾಜಕಾರಣಿಗಳಿಂದ ಗಾಂಭೀರ್ಯ ಹಾಗೂ ಸನ್ನಡತೆಯನ್ನು ಅಪೇಕ್ಷಿಸುತ್ತದೆ ಎನ್ನುವುದಕ್ಕೆ ಗುಂಡೂರಾಯರ ಸೋಲು ಜ್ವಲಂತ ಸಾಕ್ಷಿಯಾಗಿ ಇತಿಹಾಸದಲ್ಲಿ ಉಳಿಯಿತು. ರೈತ ಚಳುವಳಿ, ಗೋಕಾಕ್ ಕನ್ನಡ ಭಾಷಾ ಚಳುವಳಿ ಕರ್ನಾಟಕದ ಕಾಂಗ್ರೆಸ್ಸಿನ ಆಡಳಿತದ ಕಪ್ಪು ಚುಕ್ಕೆಯಾಗಿ ಉಳಿದು ಹೋಯಿತು.

ಪ್ರಸ್ತುತದ ರಾಜಕಾರಣ, ರಾಜಕಾರಣಿಗಳ ನಡವಳಿಕೆಗಳು, ಸರ್ಕಾರಗಳ ಮತ್ತದರ ನಾಯಕರ ಹುಂಬತನ, ಜನ ವಿರೋಧಿತನ ಮುಂತಾದ ಕಲುಷಿತ ರಾಜಕೀಯ ಪರಿಸ್ಥಿತಿಯ ನಡುವೆ ಅರಸರನ್ನು ಪದೇ ಪದೆ ನೆನೆಯುವಂತಾಗುತ್ತದೆ.

ಸವಲತ್ತು ಕಲ್ಪಿಸಿದರೂ ನಿರೀಕ್ಷಿತ ಮಟ್ಟದಲ್ಲಿ ಬುಡಕಟ್ಟು ಜನ ಅಭಿವೃದ್ಧಿಯಾಗಿಲ್ಲ

ಜಿಪಂ ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ವಿಷಾದ

ಮೈಸೂರು, ಆ.19(ಎಂಟಿವೈ)– ಬುಡಕಟ್ಟು ಜನರಿಗೆ ಸರ್ಕಾರದ ವತಿಯಿಂದ ನೀಡುತ್ತಿರುವ ಸವಲತ್ತುಗಳು ಸದುಪಯೋಗವಾಗದ ಹಿನ್ನೆಲೆಯಲ್ಲಿ ಬುಡಕಟ್ಟು ಜನರು ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿಲ್ಲ ಎಂದು ಜಿ.ಪಂ. ಮುಖ್ಯ ಯೋಜನಾಧಿಕಾರಿ ಕೆ.ಬಿ. ಪ್ರಭುಸ್ವಾಮಿ ವಿಷಾದಿಸಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಆದಿ ಕರ್ಮಯೋಗಿ ಅಭಿಯಾನದಡಿ ತಾಲೂಕು ಮಟ್ಟದ ಮಾಸ್ಟರ್ ತರಬೇತಿದಾರರಿಗೆ ಹಮ್ಮಿಕೊಂಡಿದ್ದ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಭಿವೃದ್ಧಿ ಎಂದರೆ ಕೇವಲ ಅಂಕಿ ಅಂಶಗಳಲ್ಲ. ಬಜೆಟ್‌ನ ಗಾತ್ರ ಹೆಚ್ಚಾದಂತೆ ಅಭಿವೃದ್ಧಿಯೂ ಆಗಬೇಕು. ಅನುದಾನ ಮುಖ್ಯವಲ್ಲ. ನಮ್ಮ ನಡವಳಿಕೆ, ಹೊಂದಾಣಿಕೆ ಮುಖ್ಯ. ಎಲ್ಲಾ ಇಲಾಖೆ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಬುಡಕಟ್ಟು ಜನರ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ಜಿ.ಪಂ. ಮುಖ್ಯ ಯೋಜನಾಧಿಕಾರಿ ಕೆ.ಬಿ. ಪ್ರಭುಸ್ವಾಮಿ ಉದ್ಘಾಟಿಸಿದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಮಾತನಾಡಿ, ಆಯಾ ಇಲಾಖೆಗಳಲ್ಲಿ ಬುಡಕಟ್ಟು ಸಮುದಾಯದ ಏಳಿಗೆಗೆ ಏನೇನು ಅನುಕೂಲ ಮಾಡಿಕೊಡಬಹುದು ಎಂದು ಅವಲೋಕಿಸಬೇಕು. ಟಿಎಸ್‌ಪಿ ಯೋಜನೆಯಲ್ಲಿರುವ ಕಾರ್ಯಕ್ರಮಗಳ ಸೌಲಭ್ಯವನ್ನು ಬುಡಕಟ್ಟು ಸಮುದಾಯದ ಜನರಿಗೆ ತಲುಪಿಸಿ ಅವರ ಏಳಿಗೆಗೆ ಶ್ರಮಿಸುವುದರಲ್ಲಿ ಎಲ್ಲಾ ಇಲಾಖೆಗಳ ಪಾತ್ರ ಬಹಳ ಮುಖ್ಯ ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಎಂ.ಕೆ.ಮಲ್ಲೇಶ್ ಮಾತನಾಡಿ, ಈ ಕಾರ್ಯಾಗಾರದಲ್ಲಿ ತರಬೇತಿ ಪಡೆಯಲು ಬಂದಿರುವ ಅಧಿಕಾರಿಗಳು ಮುಂದಿನ ದಿನದಲ್ಲಿ 64 ಹಾಡಿಗಳಲ್ಲಿ ತರಬೇತಿ ನೀಡಬೇಕಾಗುತ್ತದೆ. ಬುಡಕಟ್ಟು ಜನರಿಗೆ ಕೊಡುಗೆ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಗ್ರಾಮೀಣ ಅಭಿವೃದ್ಧಿ ಇಲಾಖೆ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಕೇಂದ್ರ ಬುಡಕಟ್ಟು ಸಂಸ್ಥೆಯ ಸಂಶೋಧನಾಧಿಕಾರಿ ಸುನುಮಿ ಚಾಂಗ್ಮಿ, ಅರುಣ್‌ಪ್ರಭು, ಜಿ.ಆರ್. ಮಹೇಶ್, ಪದ್ಮಾವತಿ ಬೆಲ್ಲಾಳ ಚಂದ್ರಶೇಖರ ಅಕ್ಕಮಹಾದೇವಿ, ರಘುನಾಥ್, ಮಹೇಂದ್ರ, ಅಭಿಷೇಕ್, ಲೆಕ್ಕಾಧಿಕಾರಿ ಬಿ.ಆರ್.ಭವ್ಯಾ, ಕೋಮಲಾ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ



ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಮೈಸೂರು, ಆ. 19– ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾ ಕೇಂದ್ರ ಮತ್ತು ಆರ್.ಕೆ.ವಿ.ಕೆ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಏರ್ ಕಮಾಂಡರ್ ಕೃಷ್ಣ ಅಯ್ಯಂಗಾರ್ ರವಿ ಧ್ವಜಾರೋಹಣ ನೆರವೇರಿಸಿದರು.

ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ ಮಾತನಾಡಿದರು. 2024–25ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಮತ್ತು ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾ ಸಂಘದ ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು, ಖಜಾಂಚಿ ಹೆಚ್.ಜಿ. ರಮೇಶ್, ಪ್ರಾಂಶುಪಾಲರಾದ ಸಿ.ಶಿವಪ್ಪ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ.ಹೆಗಡೆ, ಶ್ರೀ ಪ್ರಣಮ್ಯ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಸವಿತಾ ವಿ.ಪಿ. ಹಾಗೂ ಸೇವಾ ಸಂಘದ ಸದಸ್ಯರು ಉಪಸ್ಥಿತರಿದ್ದರು.

ತಪೋವನ ಸೋಲೇಸ್ ಅಪಾರ್ಟ್‌ಮೆಂಟ್‌ನಲ್ಲಿ 79ನೇ ಸ್ವಾತಂತ್ರ್ಯ ದಿನ



ಮೈಸೂರಿನ ತಪೋವನ ಸೋಲೇಸ್ ಅಪಾರ್ಟ್‌ಮೆಂಟ್‌ನಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಅಪಾರ್ಟ್‌ಮೆಂಟ್ ನಿವಾಸಿಯೂ ಆದ ನಿವೃತ್ತ ತಹಶೀಲ್ದಾರ್ ಎಸ್. ತಿಮ್ಮಯ್ಯ (ಎಡದಿಂದ 2ನೇಯವರು) ಧ್ವಜಾರೋಹಣ ನೆರವೇರಿಸಿದರು.

ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ಆಗ್ರಹಿಸಿ ಮೈಸೂರು ಡಿಸಿ ಕಚೇರಿ ಬಳಿ ಪ್ರತಿಭಟನೆ



ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.19(ಜಿಎ)–ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ಮಂಗಳವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಪ್ರಸಕ್ತ ಸಾಲಿಗೆ ಕೇಂದ್ರ ಸರ್ಕಾರ ಟನ್ ಕಬ್ಬಿಗೆ 3550 ರೂ. ನಿಗದಿ ಮಾಡಿದೆ. 2025–2026ನೇ ಸಾಲಿಗೆ ಕಬ್ಬಿನ ಎಫ್ಆರ್‌ಪಿ ದರಕ್ಕೆ ಹೆಚ್ಚುವರಿಯಾಗಿ ರಾಜ್ಯ ಸಲಹಾ ಬೆಲೆ ಎಸ್ಎಪಿ ದರ ಏರಿಕೆ ಮಾಡಿ ಟನ್‌ಗೆ 4500 ರೂ ಕೊಡಿಸಬೇಕು. ಬಣ್ಣಾರಿ ಸಕ್ಕರೆ ಕಾರ್ಖಾನೆಯಿಂದ ಕಳೆದ ವರ್ಷದ ಉಪ ಉತ್ಪನ್ನಗಳ ಲಾಭ ಹಂಚಿಕೆ ಮಾಡಿಸಿಕೊಡಿಸಬೇಕು. ಎಫ್ಆರ್‌ಪಿ ದರ ಪುನರ್ ಪರಿಶೀಲನೆ ಮಾಡಿ ಸಿಎಸಿಪಿ ವರದಿಯಂತೆ ಪ್ರತಿ ಟನ್ ಕಬ್ಬಿಗೆ 4,500 ರೂ ನಿಗದಿಪಡಿಸಬೇಕು. 2023–2024ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಟನ್‌ಗೆ 150 ರೂ. ನಿಗದಿಪಡಿಸಿದ್ದು, ಕಾರ್ಖಾನೆಗಳು ಇನ್ನೂ ನೀಡಿಲ್ಲ. ಅದಕ್ಕೆ ಬಡ್ಡಿ ಸೇರಿಸಿ ತಕ್ಷಣವೇ ಬಾಕಿ ಹಣ ಕೊಡಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕಬ್ಬಿನ ಎಫ್ಆರ್‌ಪಿ ದರ ರೈತನ ಹೊಲದಲ್ಲಿನ ದರ ಎಂದು ಬದಲಾಗಬೇಕು. ಬಣ್ಣಾರಿ ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ಇಳುವರಿ ಮೋಸ ತಪ್ಪಿಸಲು ಇಳುವರಿ ಮಿತಿ ಕನಿಷ್ಠ ಶೇ.9ಕ್ಕೆ ನಿಗದಿ ಆಗಬೇಕು. ಕಬ್ಬಿನ ತೂಕದಲ್ಲಿ ಮೋಸ ತಪ್ಪಿಸಲು ಕಾರ್ಖಾನೆಗಳ ಮುಂದೆ ಸರ್ಕಾರದಿಂದ ತೂಕದ ಯಂತ್ರ ಸ್ಥಾಪಿಸಬೇಕು. ಜಿಲ್ಲೆಯಲ್ಲಿ ಭತ್ತದ ಬೆಳೆ ಹೆಚ್ಚು ನಾಟಿ ಮಾಡಿದ್ದು, ಯೂರಿಯಾ ರಸಗೊಬ್ಬರದ ಅವಶ್ಯಕತೆ ಹೆಚ್ಚಿದೆ. ಹೀಗಾಗಿ ರೈತರಿಗೆ ಸಮಸ್ಯೆಯಾಗದಂತೆ ಮುಕ್ತವಾಗಿ ಸಿಗಲು ಅಗತ್ಯ ಕ್ರಮ ಕೈಗೊಳ್ಳಬೇಕು. ಮೈಸೂರು ತಾಲೂಕಿನ ಕಡಕೊಳ ಗ್ರಾಮದಿಂದ ವಾಜಮಂಗಲಕ್ಕೆ ಹೈ ಟೆನ್ಷನ್ ವೈರ್ ಹಾದು ಹೋಗುತ್ತಿದ್ದು ಇದರಿಂದ ರೈತರು ಜಮೀನು ಕಳೆದುಕೊಳ್ಳುತ್ತಿದ್ದಾರೆ. ಬಹುತೇಕ ರೈತರು ತುಂಡು ಭೂಮಿ ಹೊಂದಿದ್ದು ಜೀವನಕ್ಕೆ ಇದೇ ಆಧಾರವಾಗಿದೆ. ಎಲ್ಲರೂ ಸಣ್ಣ, ಅತಿ ಸಣ್ಣ ರೈತರಿದ್ದು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಅಂತಹ ರೈತರಿಗೆ ಪರ್ಯಾಯವಾಗಿ ಭೂಮಿ ನೀಡಬೇಕು ಅಥವಾ ಶಾಶ್ವತ ನ್ಯಾಯಯುತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಉಪಾಧ್ಯಕ್ಷ ಮಾರ್ಬಳ್ಳಿ ನೀಲಕಂಠಪ್ಪ ಲಕ್ಷ್ಮೀಪುರ ವೆಂಕಟೇಶ್, ವರಕೋಡು ನಾಗೇಶ್, ನಂಜುಂಡಸ್ವಾಮಿ, ನಾಗೇಶ್, ಸೋಮಶೇಖರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮರಿಮಲ್ಲಪ್ಪ ವಿದ್ಯಾಸಂಸ್ಥೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಮರಿಮಲ್ಲಪ್ಪನವರ ವಿದ್ಯಾಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯ ದಿನವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಮೈಸೂರು, ಆ. 19– ಮೈಸೂರಿನ ಮರಿಮಲ್ಲಪ್ಪನವರ ವಿದ್ಯಾಸಂಸ್ಥೆಯಲ್ಲಿ 79ನೇ ಸ್ವಾತಂತ್ರ್ಯ ದಿನವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್. ಪಂಚಾಕ್ಷರಸ್ವಾಮಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ ಮಹನೀಯರನ್ನು ನೆನಪು ಮಾಡಿಕೊಳ್ಳುವ ದಿನವಿದು. ಅವರೊಂದಿಗೆ ಲಕ್ಷಾಂತರ ಮಂದಿ ಎಲೆಮರೆಕಾಯಿಯಂತೆ ದುಡಿದು ತಮ್ಮ ತ್ಯಾಗದಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ ಎಂದರು.

ಹಿಂದೆ ಓದಲು ಹಲವಾರು ತೊಂದರೆಗಳಿದ್ದವು. ಈಗ ಮೊಬೈಲ್, ಟಿವಿಯಿಂದ ದೂರ ಉಳಿದು ಓದಬೇಕು. ಕೇವಲ ವೈದ್ಯಕೀಯ, ಎಂಜಿನಿಯರಿಂಗ್ ಮಾತ್ರವಲ್ಲದೇ ಬೇರೆ ಬೇರೆ ವಿಷಯಗಳನ್ನು ಓದಬೇಕು. ನಮ್ಮ ವಿದ್ಯಾರ್ಥಿಗಳ ಬುದ್ಧಿಮತ್ತೆ ಅತ್ಯುತ್ತಮವಾಗಿದೆ. ದೇಶ–ವಿದೇಶಗಳಲ್ಲಿ ಕಂಪನಿಗಳನ್ನು ಆರಂಭಿಸಿ, ಬೇರೆಯವರಿಗೆ ಉದ್ಯೋಗ ಕೊಡುವ ರೀತಿಯಲ್ಲಿ ಬೆಳೆಯಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸ್ವಾತಂತ್ರ್ಯ ಸ್ವೇಚ್ಛಾಚಾರವಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು ಎಂದರು.

ಆಡಳಿತ ಮಂಡಳಿ ಸದಸ್ಯ ನಾಗರಾಜು, ಶೈಕ್ಷಣಿಕ ಅಧಿಕಾರಿ ಮಂಗಳಾ ಮುದ್ದುಮಾದಪ್ಪ, ಸಹಾಯಕ ಆಡಳಿತ ಅಧಿಕಾರಿ ಪ್ರಸಾದ್, ಸಂಸ್ಥೆಯ ವಿವಿಧ ಶಾಲಾ–ಕಾಲೇಜುಗಳ ಮುಖ್ಯಸ್ಥೆ ವಿಜಯ ಲಕ್ಷ್ಮಿ, ನೇತ್ರಾವತಿ, ಅನಿಲ್, ರಾಜೇಶ್ವರಿ, ಮಮತಾ, ಎಚ್.ಎಸ್.ಮಹೇಶ್, ಶಂಭುಲಿಂಗಪ್ಪ, ಜೆನ್ನಿಫರ್ ರಾಜು, ಅನ್ನಪೂರ್ಣ ಇದ್ದರು.

ಸಹ ಶಿಕ್ಷಕ ಜಿ.ಸಿದ್ದೇಶ್ವರ ಪ್ರಸಾದ್ ಸ್ವಾಗತಿಸಿದರು. ಸಹ ಶಿಕ್ಷಕ ಜಿ.ಸಿ.ಮಧುಸೂದನ ವಂದಿಸಿದರು. ಸಹ ಶಿಕ್ಷಕಿ ಯಶೋದಾ ನಿರೂಪಿಸಿದರು. ಸಹ ಶಿಕ್ಷಕ ಬಿ.ಪಿ.ರಮೇಶ್‌ರಾಜು ಅತಿಥಿಗಳನ್ನು ಪರಿಚಯಿಸಿದರು. ಪ್ರೌಢಶಾಲಾ ವಿದ್ಯಾರ್ಥಿನಿಯರಾದ ದೀಕ್ಷಾ, ಸಾನ್ವಿ, ಪ್ರಾರ್ಥನಾ ಮತ್ತು ತಂಡದವರು ಪ್ರಾರ್ಥಿಸಿದರು.

ಪ್ರೌಢಶಾಲಾ ವಿದ್ಯಾರ್ಥಿನಿಯರು ಭರತನಾಟ್ಯ, ಕಿಂಡರ್ ಗಾರ್ಟನ್, ಪದವಿ ಪೂರ್ವ, ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು ವಿದ್ಯಾರ್ಥಿಗಳು ಸಮೂಹ ನೃತ್ಯ ಪ್ರದರ್ಶಿಸಿದರು. ಸಂಜೆ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದೇಶಭಕ್ತಿಗೀತೆ ಹಾಡಿ, ರಂಜಿಸಿದರು.

ಇದಕ್ಕೂ ಮೊದಲು ಎನ್‌ಸಿಸಿ ಕೆಡೆಟ್‌ಗಳು, ಸ್ಕೌಟ್& ಗೈಡ್ಸ್, ಬ್ಯಾಂಡ್‌ಸೆಟ್ ತಂಡಗಳಿಂದ ಆಕರ್ಷಕ ಪಥಸಂಚಲನ ನಡೆಯಿತು.

ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಆಡಳಿತ ಮಂಡಳಿ ಸದಸ್ಯ ಶಿವಲಿಂಗಯ್ಯ, ಸಂಸ್ಥೆಯ ಗೌರವ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಡಾ.ಪಿ.ದೀಪು, ಮಹದೇವಸ್ವಾಮಿ, ಸುರೇಶ್, ಅಧ್ಯಾಪಕರು, ಅಧ್ಯಾಪಕೇತರರು, ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಿದ್ಧಾರ್ಥ ಬಡಾವಣೆಯಲ್ಲಿ ಸ್ವಾತಂತ್ರ್ಯೋತ್ಸವ



ಜೈ ಶ್ರೀರಾಮ ಉದ್ಯಾನವನ ಅಭಿವೃದ್ಧಿ ಸಮಿತಿ ವತಿಯಿಂದ ಮೈಸೂರಿನ ಸಿದ್ಧಾರ್ಥ ಬಡಾವಣೆಯ ಜೈ ಶ್ರೀರಾಮ ಉದ್ಯಾನವನದಲ್ಲಿ ಸ್ವಾತಂತ್ರ್ಯೋತ್ಸವ ದಿನ ಆಚರಿಸಲಾಯಿತು. ಸಮಿತಿ ಅಧ್ಯಕ್ಷ ಎಂ.ಎಸ್.ಪ್ರಕಾಶ್ ಧ್ವಜಾರೋಹಣ ನೆರವೇರಿಸಿದರು. ನಿವೃತ್ತ ಎಇಇ, ಅಂಕಣಕಾರ ಮಿರ್ಲೆ ಚಂದ್ರಶೇಖರ್, ಉಪಾಧ್ಯಕ್ಷ ಪುಟ್ಟಮಾದಪ್ಪ, ಕಾರ್ಯದರ್ಶಿ ಪ್ರಸನ್ನಕುಮಾರ, ಖಜಾಂಚಿ ರಾಮು, ಸಮಿತಿ ಸದಸ್ಯರು ಹಾಜರಿದ್ದರು.

ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ



ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಭಾರತೀಯ ಸೇನೆಯ ನಿವೃತ್ತ ಸುಬೇದಾರ್ ಮೇಜರ್ ಶ್ರೀಧರ್ ಧ್ವಜಾರೋಹಣ ನೆರವೇರಿಸಿದರು. ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಎನ್.ಪಿ.ಸತೀಶ್, ಅಧ್ಯಕ್ಷತೆ ವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಕ್ಕಿ ಚೌಕದಲ್ಲಿ ಶ್ರೀ ಶನೇಶ್ವರಸ್ವಾಮಿ ರಥಕ್ಕೆ ವಿಶೇಷ ಪೂಜೆ



ಮೈಸೂರು, ಆ. 19– ಕೊನೆ ಶ್ರಾವಣ ಶನಿವಾರದ ಅಂಗವಾಗಿ ಮೈಸೂರಿನ ಸಯ್ಯಾಜಿರಾವ್ ರಸ್ತೆ, ಅಕ್ಕಿ ಚೌಕದಲ್ಲಿನ ಶ್ರೀ ಶನೇಶ್ವರಸ್ವಾಮಿ ರಥಕ್ಕೆ ವಿಶೇಷ ಪೂಜೆ ನಡೆಯಿತು. ಸಾವಿರಾರು ಭಕ್ತಾದಿಗಳು ರಥಕ್ಕೆ ವಿಶೇಷ ಪೂಜೆ ಸಲ್ಲಿಸಿದರು. ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ಮಾಡಲಾಯಿತು. ಇದೇ ವೇಳೆ 'ರಾಜಾ ವಿಕ್ರಮ' ಪೌರಾಣಿಕ ನಾಟಕ ಏರ್ಪಡಿಸಲಾಗಿತ್ತು. ಭಾನುವಾರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ರಥದ ಅರ್ಚಕ ಚಂದ್ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರಕೋಡು ಗ್ರಾಮದ ಕಲ್ಯಾಣಿ ಸ್ವಚ್ಛಗೊಳಿಸುವ ಮೂಲಕ ವಿಶ್ವ ಛಾಯಾಗ್ರಾಹಕ ದಿನ ಆಚರಣೆ



ಮೈಸೂರು ಫೋಟೋ ಗ್ರಾಫರ್ಸ್ ಕ್ಲಬ್‌ನಿಂದ ವರಕೋಡು ಕಲ್ಯಾಣಿ ಸ್ವಚ್ಛಗೊಳಿಸಿ ವಿಶ್ವ ಛಾಯಾಗ್ರಾಹಕ ದಿನ ಆಚರಿಸಲಾಯಿತು.

ಮೈಸೂರು, ಆ.19(ಜಿಎ)–ಮೈಸೂರು ಫೋಟೋಗ್ರಾಫರ್ಸ್ (ಎಂಪಿಸಿ) ಕ್ಲಬ್ ವತಿಯಿಂದ ವರುಣ ಹೋಬಳಿಯ ವರಕೋಡು ಗ್ರಾಮದ ಕಲ್ಯಾಣಿ ಸ್ವಚ್ಛಗೊಳಿಸುವ ಮೂಲಕ ವಿಭಿನ್ನವಾಗಿ ವಿಶ್ವ ಛಾಯಾಗ್ರಾಹಕ ದಿನವನ್ನು ಆಚರಿಸಲಾಯಿತು.

ಮೈಸೂರು ಫೋಟೋ ಗ್ರಾಫರ್ಸ್ (ಎಂಪಿಸಿ) ಕ್ಲಬ್‌ನ ನೂರಾರು ಸದಸ್ಯರು ಸೇರಿ ಕಲ್ಯಾಣಿಯ ಸುತ್ತಮುತ್ತಲಿನ ಪ್ಲಾಸ್ಟಿಕ್, ಘನ ತ್ಯಾಜ್ಯಗಳು, ಗಿಡಗಂಟಿಗಳನ್ನು ವಿಲೇವಾರಿ ಮಾಡಿ ಅರ್ಥಪೂರ್ಣವಾಗಿ ಛಾಯಾಗ್ರಾಹಕರ ದಿನ ಆಚರಿಸಿದರು. ಕ್ಲಬ್ ಅಧ್ಯಕ್ಷ ಮನುಕುಮಾರ್ ಮಾತನಾಡಿ, ಛಾಯಾಗ್ರಾಹಕರು ತಮ್ಮ ವೃತ್ತಿಯ ಮೂಲಕ ಸುಂದರ ಕ್ಷಣಗಳನ್ನು ಸೆರೆ ಹಿಡಿಯಲು ಉತ್ತಮ ಪರಿಸರ ಮುಖ್ಯ. ಹೀಗಾಗಿ ಸುತ್ತಮುತ್ತಲಿನ ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ. ಅದರಲ್ಲಿಯೂ ಇತಿಹಾಸ ಪ್ರಸಿದ್ಧ ವರಕೋಡು ಕಲ್ಯಾಣಿ ಮಹತ್ವ ಪಡೆದಿದ್ದು, ಇದನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದರು.

ಅಭಿಯಾನದಲ್ಲಿ ಉಪಾಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಶರತ್ ಕುಮಾರ್, ಖಜಾಂಚಿ ಸಿ.ಎಂ.ಪ್ರತಾಪ್, ಕಲಾವಿದ ಸುರೇಶ್, ಗ್ರಾಮದ ಮುಖಂಡರಾದ ಮಹೇಶ್, ರವಿ ಮತ್ತಿತರರಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಪುರೋಹಿತರ ಪರಿಷತ್ ಅಧ್ಯಕ್ಷರಾಗಿ ವೇದಬ್ರಹ್ಮ ಮೈ ಕುಮಾರ್ ಮರು ನೇಮಕ



ಅಮೃತೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಮೈ ಕುಮಾರ್ ಅವರನ್ನು 2025–2030ರ ಅಖಿಲ ಕರ್ನಾಟಕ ಬ್ರಾಹ್ಮಣ ಪುರೋಹಿತರ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷರಾಗಿ 2ನೇ ಬಾರಿ ನೇಮಕಗೊಳಿಸಿ, ಅಭಿನಂದಿಸಲಾಯಿತು.

ಮೈಸೂರು,ಆ.19–ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರು ಹಾಗೂ ಧಾರ್ಮಿಕ ಮುಖಂಡರಾದ ವೇದಬ್ರಹ್ಮ ಮೈ ಕುಮಾರ್ ಅವರನ್ನು 2025–2030ರ ಅಖಿಲ ಕರ್ನಾಟಕ ಬ್ರಾಹ್ಮಣ ಪುರೋಹಿತರ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷರಾಗಿ ಎರಡನೇ ಬಾರಿ ನೇಮಕಗೊಳಿಸಿದ ಅಖಿಲ ಕರ್ನಾಟಕ ಬ್ರಾಹ್ಮಣ ಪುರೋಹಿತರ ಪರಿಷತ್ ರಾಜ್ಯಾಧ್ಯಕ್ಷ ಮಂಜುನಾಥ್ ಶಾಸ್ತ್ರಿ, ನೇಮಕಾತಿ ಪತ್ರ ನೀಡಿ ಶುಭಕೋರಿದರು.

ನಂತರ ಮಾತನಾಡಿದ ಮೈ ಕುಮಾರ್, ನನ್ನನ್ನು ಎರಡನೇ ಬಾರಿ ಜಿಲ್ಲಾಧ್ಯಕ್ಷರನ್ನಾಗಿ ಜವಾಬ್ದಾರಿ ನೀಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ರಘುನಾಥ್ ಹಾಗೂ ರಾಜ್ಯಾಧ್ಯಕ್ಷ ಮಂಜುನಾಥ್ ಶಾಸ್ತ್ರಿ ಅವರಿಗೆ ವಿಶೇಷ ಧನ್ಯವಾದಗಳು. ಸನಾತನ ವೈದಿಕ ಧರ್ಮ ಹಾಗೂ ಪೌರೋಹಿತ್ಯದ ಉಳಿವಿಗಾಗಿ ವಿಪ್ರ ಸಮಾಜದ ಯುವಕರು ವೇದ ಉಪನಿಷತ್‌ಗಳನ್ನು ಅಧ್ಯಯನ ಮಾಡಬೇಕು. ಇದರಿಂದ ಯಾವುದೇ ತೊಂದರೆಯಿಲ್ಲ. ಈ ಕ್ಷೇತ್ರದಲ್ಲಿರುವ ಯುವಕರು ಸಂಘಟಿತರಾಗಿ ಮುಖ್ಯವಾಹಿನಿಗೆ ಬರಬೇಕು ಎಂದು ಕರೆ ನೀಡಿದರು. ವೇದಾಭ್ಯಾಸ ಪೌರೋಹಿತ್ಯ ಕಲಿತ ಯುವಕರಿಗೆ ವಿದೇಶದಲ್ಲಿ ಭಾರಿ ಬೇಡಿಕೆ ಇದೆ. ರಾಜ ಮಹಾರಾಜರ ಕಾಲದಿಂದಲೂ ಬ್ರಾಹ್ಮಣ ಪಂಡಿತರ ಮಾರ್ಗದರ್ಶನ ಮಹತ್ವದ್ದಾಗಿತ್ತು. ಇಂದಿನ ಸ್ಪರ್ಧಾತ್ಮಕ ತಂತ್ರಜ್ಞಾನ ಯುಗದಲ್ಲಿ ಬ್ರಾಹ್ಮಣರಿಗೆ ಉನ್ನತ ಸ್ಥಾನವಿದೆ. ಅದು ನಮ್ಮ ಪೂರ್ವಜರ ಪುಣ್ಯದ ಫಲವೇ ಸರಿ ಎಂದರು.

ವೈದಿಕ ಧರ್ಮದಲ್ಲಿ ವೈಜ್ಞಾನಿಕ ಸಂದೇಶ, ಪರಿಸರ ಸಂರಕ್ಷಣೆ, ಪ್ರಾಣಿ ಪಕ್ಷಿಗಳ ಪೋಷಣೆ ಸೇರಿದಂತೆ ಧಾರ್ಮಿಕತೆಯ ಇತಿಹಾಸ ಉಲ್ಲೇಖವಾಗಿದ್ದು. ಪೌರೋಹಿತ್ಯವನ್ನು ಪರಿಪಾಲಿಸಿದರೆ ಕುಟುಂಬಗಳ ಅನ್ಯೋನ್ಯತೆ ನೆಮ್ಮದಿ ಸ್ಥಿರ ಆರೋಗ್ಯ ಸೇರಿದಂತೆ ಇತರ ಮಾನಸಿಕ ನೆಮ್ಮದಿ ಪ್ರಾಪ್ತವಾಗುತ್ತದೆ ಎಂದು ತಿಳಿಸಿದರು.

ರಾಜ್ಯದ ಪ್ರತಿ ಗ್ರಾಮದಲ್ಲೂ ಬ್ರಾಹ್ಮಣ ಕುಟುಂಬಗಳ ಸಂಘಟಿತರಾಗಿ ಬ್ರಾಹ್ಮಣ ಸಂಘ ಸಂಸ್ಥೆ ಮಾರ್ಗದರ್ಶನದಲ್ಲಿ ತಮ್ಮ ಬದುಕು ಕಟ್ಟಿಕೊಳ್ಳಬೇಕು ಇದರಿಂದ ಬ್ರಾಹ್ಮಣ ಕುಟುಂಬ ರಕ್ಷಣೆ ಸಹಬಾಳ್ವೆಗೆ ಸಹಕಾರಿಯಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ಮೈ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರವಿಚಂದ್ರ, ನವೀನ್, ರಾಕೇಶ್, ಕಾಂತಿಲಾಲ್ ಜೈನ್, ಸಂಗಮೇಶ್, ಕಿರಣ್ ಹಾಗೂ ಇನ್ನಿತರರು ಶುಭ ಕೋರಿದರು.

ಮಣಿಕಾ ವಿಶ್ವಕರ್ಮ ಮಿಸ್ ಯೂನಿವರ್ಸ್ ಇಂಡಿಯಾ 2025



ಜೈಪುರ: ರಾಜಸ್ಥಾನದ ಮಣಿಕಾ ವಿಶ್ವಕರ್ಮ 2025ರ ಮಿಸ್ ಯೂನಿವರ್ಸ್ ಇಂಡಿಯಾ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಮುಂದಿನ ನವೆಂಬರ್ 21ರಂದು ಥೈಲ್ಯಾಂಡ್‌ನಲ್ಲಿ ನಡೆಯಲಿರುವ 74ನೇ ಮಿಸ್ ಯೂನಿವರ್ಸ್ ಸ್ಪರ್ಧೆಯಲ್ಲಿ ಭಾರತ ದೇಶವನ್ನು ಪ್ರತಿನಿಧಿಸುವ ಅವಕಾಶವನ್ನು ಗಿಟ್ಟಿಸಿಕೊಂಡಿದ್ದಾರೆ.

ಶ್ರೀ ಗಂಗಾನಗರದ ಮಣಿಕಾ ಈ ಗೆಲುವನ್ನು ರಾಜಸ್ಥಾನ ಮತ್ತು ರಾಷ್ಟ್ರಕ್ಕೆ ಹೆಮ್ಮೆಯ ಕ್ಷಣ ಎಂದು ಬಣ್ಣಿಸಿದ್ದಾರೆ. ಈ ಸಾಧನೆಯು ಸಣ್ಣ ಪಟ್ಟಣಗಳಿಂದಲೂ ಕನಸುಗಳು ಮೂಡಿ ಎತ್ತರಕ್ಕೆ ಹಾರಬಲ್ಲದು ಎಂಬುದನ್ನು ಸಾಬೀತುಪಡಿಸುತ್ತದೆ ಎಂದು ತಮ್ಮ ಗೆಲುವಿನ ನಂತರ ಸುದ್ದಿಗಾರರಿಗೆ ಹೇಳಿದರು.

ತಮ್ಮ ಪಯಣದ ಅನುಭವ ಹಂಚಿಕೊಂಡ ಮಣಿಕಾ, ಬ್ಯೂಟಿ ಪೇಜೆಂಟ್ ಸಿದ್ಧತೆಗೆ ದೆಹಲಿಗೆ ತೆರಳುವ ಮೊದಲು ತಮ್ಮ ತವರು ಗಂಗಾನಗರದಿಂದ ಆರಂಭಿಸಿದ್ದನ್ನು ಹೇಳಿಕೊಂಡರು. ನಾವು ನಮ್ಮಲ್ಲಿ ಆತ್ಮವಿಶ್ವಾಸ ಮತ್ತು ಧೈರ್ಯವನ್ನು ತುಂಬಬೇಕು. ನನ್ನ ಯಶಸ್ಸಿನಲ್ಲಿ ಪ್ರತಿಯೊಬ್ಬರೂ ದೊಡ್ಡ ಪಾತ್ರವನ್ನು ಹೊಂದಿದ್ದಾರೆ. ನನ್ನನ್ನು ಬೆಂಬಲಿಸಿದ ಮತ್ತು ನನ್ನನ್ನು ಇದಕ್ಕೆ ಸಮರ್ಥರನ್ನಾಗಿ ಮಾಡಿದ ಎಲ್ಲರಿಗೂ ನಾನು ಧನ್ಯವಾದ ಹೇಳುತ್ತೇನೆ. ಸ್ಪರ್ಧೆಯು ಕೇವಲ ಒಂದು ವೇದಿಕೆಯಲ್ಲ, ಪಾತ್ರವನ್ನು ನಿರ್ಮಿಸುವ ಜಗತ್ತು ಎಂದು ಹೇಳಿದರು.

ಅಂತಿಮ ಸ್ಪರ್ಧೆಯಲ್ಲಿ, ತಾನ್ಯಾ ಶರ್ಮಾ ಮೊದಲ ರನ್ನರ್ ಅಪ್ ಆಗಿ ಹೊರಹೊಮ್ಮಿದರು. ಮಿಸ್ ಯೂನಿವರ್ಸ್ ಇಂಡಿಯಾದ ಮಾಲೀಕ ನಿಖಿಲ್ ಆನಂದ್, ನಟಿ ಮತ್ತು ಮಿಸ್ ಯೂನಿವರ್ಸ್ ಇಂಡಿಯಾ 2015 ಊರ್ವಶಿ ರೌಟೇಲಾ ಮತ್ತು ನಿರ್ದೇಶಕಿ ಫರ್ಹಾದ್ ಸಂಜಿ ತೀರ್ಪುಗಾರರ ಸಮಿತಿಯಲ್ಲಿದ್ದರು.

ಕರ್ನಾಟಕ ಪ್ರಾಚೀನ ದೇವಾಲಯಗಳು ಕುರಿತ ಛಾಯಾಚಿತ್ರ ಪ್ರದರ್ಶನ

ಮೈಸೂರು, ಆ.19(ಜಿಎ)–ವಿಶ್ವ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಮೈಸೂರಿನ ಕಲಾಮಂದಿರದ ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ವಾರ್ತಾ ಇಲಾಖೆ ನಿವೃತ್ತ ಅಧಿಕಾರಿ ಟಿ. ಕೆಂಪಣ್ಣ ಅವರು ಏರ್ಪಡಿಸಿರುವ 'ಕರ್ನಾಟಕ ಪ್ರಾಚೀನ ದೇವಾಲಯಗಳು' ಕುರಿತ ಛಾಯಾಚಿತ್ರ ಪ್ರದರ್ಶನವನ್ನು, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸಂಪತ್ ಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಟಿ.ಕೆಂಪಣ್ಣ ಅವರ ಛಾಯಾಚಿತ್ರಗಳನ್ನು ಮೂರು ದಶಕಗಳಿಂದ ಗಮನಿಸುತ್ತಾ ಬಂದಿದ್ದೇನೆ. ಅವರ ಹಳ್ಳಿಯ ಜೀವನ ಕುರಿತ ಚಿತ್ರಗಳು ಅದ್ಭುತ. ಚಿತ್ರಗಳನ್ನು ಗಮನಿಸಿದಾಗ ಮಣ್ಣಿನ ವಾಸನೆ, ಜನಜೀವನ ಕಂಡು ಬರುತ್ತದೆ. ಈ ರೀತಿಯ ಚಿತ್ರಗಳನ್ನು ತೆಗೆಯುವುದು ಕಷ್ಟದ ಕೆಲಸ. ಇದಕ್ಕೆ ಬದ್ಧತೆ ಬೇಕು ಎಂದರು.

ಕಲೆ ಮತ್ತು ಛಾಯಾಚಿತ್ರ ಪರಸ್ಪರ ಅಂತರ್ಗತವಾದವು. ಕಲಾವಿದರು ಮತ್ತು ಛಾಯಾಚಿತ್ರಕಾರರಿಗೆ ಬೆಳಕು ಮುಖ್ಯ. ಹಾಗೇ ಕಲೆ ಸೃಜನಾತ್ಮಕವಾದುದು. ಛಾಯಾಚಿತ್ರ ಆ ಕ್ಷಣಕ್ಕೆ ಕ್ಲಿಕ್ಕಿಸುವಂಥದ್ದು. ಕಲಾವಿದರಿಗೆ ಕ್ಯಾನ್ವಾಸ್, ಛಾಯಾಗ್ರಾಹಕರಿಗೆ ಕ್ಯಾಮರಾ ಮುಖ್ಯ ಎಂದು ತಿಳಿಸಿದರು.



ವಿಶ್ವ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಮೈಸೂರಿನ ಕಲಾಮಂದಿರದ ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ಮಂಗಳವಾರ ವಾರ್ತಾ ಇಲಾಖೆ ನಿವೃತ್ತ ಅಧಿಕಾರಿ ಟಿ.ಕೆಂಪಣ್ಣ ಅವರು ಏರ್ಪಡಿಸಿರುವ 'ಕರ್ನಾಟಕ ಪ್ರಾಚೀನ ದೇವಾಲಯಗಳು' ಕುರಿತ ಛಾಯಾಚಿತ್ರ ಪ್ರದರ್ಶನವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸಂಪತ್ ಕುಮಾರ್ ಉದ್ಘಾಟಿಸಿ, ವೀಕ್ಷಿಸಿದರು.

ಕೆಂಪಣ್ಣ ಅವರು ಈಗ ಏರ್ಪಡಿಸಿರುವ ಪ್ರಾಚೀನ ದೇವಾಲಯಗಳ ಛಾಯಾಚಿತ್ರಗಳು ನಮ್ಮ ಇತಿಹಾಸ, ಸಂಸ್ಕೃತಿ, ಸಂಪ್ರದಾಯವನ್ನು ಪ್ರತಿಬಿಂಬಿಸುತ್ತವೆ. ಈಗ ಕದಂಬರು, ಚಾಲುಕ್ಯರು, ಹೊಯ್ಸಳರು ಇಲ್ಲ. ಆದರೆ ಅವರ ಕಾಲದ ದೇವಸ್ಥಾನಗಳಿವೆ. ಸ್ವಾತಂತ್ರ್ಯ ನಂತರ ನಾವು ಆ ಕಾಲದ ರೀತಿಯ ದೇವಾಲಯಗಳನ್ನು ನಿರ್ಮಿಸಲಾಗಿಲ್ಲ. ಆ ರೀತಿಯ ಶಿಲ್ಪಕಾರರು ಇಲ್ಲ. ಈಗ ಕೃತಕ ಬುದ್ಧಿಮತ್ತೆ (ಎಐ) ಬಂದಿದ್ದರೂ ಅದಕ್ಕೆ ನಿರ್ದೇಶನ ನೀಡುವುದು ಮನುಷ್ಯರೇ. ಹೀಗಾಗಿ ಎಐನಿಂದ ಕಲೆಗೆ ತೊಂದರೆಯಾಗದು ಎಂದರು. ವಿಶ್ವ ಪತ್ರಿಕಾ ಛಾಯಾಗ್ರಾಹಕರ ದಿನಾಚರಣೆ ಅಂಗವಾಗಿ ಹಿರಿಯ ಛಾಯಾಗ್ರಾಹಕರಾದ ಎಸ್.ರಾಮಪ್ರಸಾದ್, ಎಸ್.ಎಂ.ಜಂಬುಕೇಶ್ವರ, ಪ್ರಗತಿ ಗೋಪಾಲಕೃಷ್ಣ, ಜಗದೀಶ್ ಅವರನ್ನು ಸನ್ಮಾನಿಸಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿದ್ದರು. ಮೈಸೂರು ಪಾಲಿಮರ್ಸ್ ಸಿಇಒ ಜಿ.ರಾಜಗೋಪಾಲಯ್ಯ, ವೆಂಕಟರಾಮ್ ಕುಪ್ಪಾ, ಸಿರಿಗಂಧ ಶ್ರೀನಿವಾಸಮೂರ್ತಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 20 ಆಗಸ್ಟ್ 2025

ಉತ್ಪಾದನಾ ಅಭಿವೃದ್ಧಿ ಸೂಚ್ಯಂಕದಲ್ಲಿ
ಸ್ಥಾನ ಕುಸಿತಕ್ಕೆ ರೈತರ ಪ್ರಮಾದವೇ ಕಾರಣ



ಭಾರತೀನಗರದಲ್ಲಿ ನಡೆದ ಚಿಕ್ಕರಸಿನಕೆರೆ ಹೋಬಳಿ ವ್ಯಾಪ್ತಿಯ ರೈತರಿಗಾಗಿ ಕಬ್ಬು ಮತ್ತು ಭತ್ತ ಬೆಳೆಯುವ ಇಳುವರಿ ಹೆಚ್ಚಿಸುವ ಸರಳ ಬೇಸಾಯ ಕ್ರಮಗಳನ್ನು ಅನುಸರಿಸುವ ಬಗ್ಗೆ ಮಾಹಿತಿ ಕಾರ್ಯಕ್ರಮವನ್ನು ಜಂಟಿ ಕೃಷಿ ನಿರ್ದೇಶಕ ವಿ.ಎಸ್.ಅಶೋಕ್ ಉದ್ಘಾಟಿಸಿದರು

ಜಂಟಿ ಕೃಷಿ ನಿರ್ದೇಶಕ ವಿ.ಎಸ್.ಅಶೋಕ್

ಭಾರತೀನಗರ, ಆ.19– ಆಹಾರ ಬೆಳೆ ಉತ್ಪಾದನೆ ಅಭಿವೃದ್ಧಿ ಸೂಚ್ಯಂಕದಲ್ಲಿ ಮಂಡ್ಯ ಜಿಲ್ಲೆಯ ಸ್ಥಾನ ಕುಸಿತ ಕಂಡಿದ್ದು, ಇದಕ್ಕೆ ಇಂದು ರೈತರು ಎಸಗುತ್ತಿರುವ ಪ್ರಮಾದವೇ ಕಾರಣ ಎಂದು ಮಂಡ್ಯ ಜಿಲ್ಲೆ ಜಂಟಿ ಕೃಷಿ ನಿರ್ದೇಶಕ ವಿ.ಎಸ್. ಅಶೋಕ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚಿಕ್ಕರಸಿನಕೆರೆ ಹೋಬಳಿ ವ್ಯಾಪ್ತಿಯ ರೈತರಿಗಾಗಿ ಕಬ್ಬು ಮತ್ತು ಭತ್ತ ಬೆಳೆಯುವ ಇಳುವರಿ ಹೆಚ್ಚಿಸುವ ಸರಳ ಬೇಸಾಯ ಕ್ರಮಗಳನ್ನು ಅನುಸರಿಸುವ ಬಗ್ಗೆ ಮಾಹಿತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಣ್ಣಿಗೆ 16 ವಿಧದ ಪೋಷಕಾಂಶಗಳ ಅಗತ್ಯತೆಯಿದೆ. ಇವುಗಳಲ್ಲಿ ಗಾಳಿ, ಬೆಳಕು, ನೀರು ನೈಸರ್ಗಿಕವಾಗಿ ದೊರೆತರೆ ಇನ್ನುಳಿದವುಗಳನ್ನು ರೈತರು ಪೂರೈಸಬೇಕು. ಸಾರಜನಕ ಕೂಡ ಗಾಳಿಯಲ್ಲಿದ್ದು ಅದನ್ನು ಬೆಳೆಗಳು ತನ್ನಷ್ಟಕ್ಕೆ ತಾನೇ ಹೀರಿಕೊಳ್ಳುತ್ತವೆ. ಆದರೂ ರೈತರು ಯೂರಿಯಾವನ್ನು ಹೆಚ್ಚು ಮಣ್ಣಿಗೆ ಸೇರಿಸುವ ಮೂಲಕ ಮನುಷ್ಯ ನಿಗೆ ಕಾಯಿಲೆಗಳು ಬರುವಂತೆ ಮಾಡುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಯೂರಿಯಾ ಅಂಶ ಮಣ್ಣಿನಲ್ಲಿ ಯಥೇಚ್ಛವಾಗಿದೆ : ಮಂಡ್ಯ ವಿಸಿ ಫಾರಂ ಕೃಷಿ ವಿಜ್ಞಾನಿ ಸನತ್‌ಕುಮಾರ್ ಮಾತನಾಡಿ, ಮಣ್ಣಿನಲ್ಲಿ ಮುಂದಿನ ಮೂರು ವರ್ಷಗಳಿಗಾಗುವಷ್ಟು ಯೂರಿಯಾ ಅಂಶವಿದ್ದು, ಯೂರಿಯಾ ಬಳಕೆ ಪ್ರಮಾಣ ಕಡಿಮೆ ಮಾಡಬೇಕಿದೆ. ಯೂರಿಯಾ ಬಳಸಿದಲ್ಲಿ ಮಣ್ಣಿನ ಆರೋಗ್ಯ ಹದಗೆಡುತ್ತದೆ ಎಂದು ಎಚ್ಚರಿಕೆ ನೀಡಿದರು.

ಕೃಷಿ ಅಧಿಕಾರಿಗಳಿಗೆ ಅಥವಾ ತಮ್ಮ ಮೊಬೈಲ್ ಸಂಖ್ಯೆಗೆ ರೋಗ ಅಥವಾ ಕೀಟ ಬಾಧೆಗೆ ತುತ್ತಾಗಿರುವ ಬೆಳೆಯ ಚಿತ್ರ ಕಳುಹಿಸಿದಲ್ಲಿ ಸಮಸ್ಯೆ ಪರಿಹಾರಕ್ಕೆ ಅಗತ್ಯವಿರುವ ರಾಸಾಯನಿಕ ಸಿಂಪರಣೆ, ರಸಗೊಬ್ಬರಗಳ ಬಳಕೆ ಕುರಿತು ಮಾಹಿತಿ ನೀಡಲಾಗುತ್ತದೆ. ಅಧಿಕಾರಿಗಳ ಶಿಫಾರಸ್ಸಿನಂತೆ ರಾಸಾಯನಿಕಗಳನ್ನು, ರಸಗೊಬ್ಬರಗಳನ್ನು ಬಳಸಿದಲ್ಲಿ ಬೆಳೆಗಳೂ ಕೂಡ ಆರೋಗ್ಯವಾಗಿರುವುದಲ್ಲದೆ, ಉತ್ತಮ ಇಳುವರಿ ಪಡೆಯಬಹುದು ಎಂದು ತಿಳಿಸಿದರು.

ವೇದಿಕೆಯಲ್ಲಿ ಗ್ರಾಪಂ ಅಧ್ಯಕ್ಷೆ ಸೌಭಾಗ್ಯ, ಸದಸ್ಯ ಪುಟ್ಟರಾಮು, ಉಪ ಕೃಷಿನಿರ್ದೇಶಕ ಮುನೇಗೌಡ, ಸಹಾಯಕ ಕೃಷಿ ನಿರ್ದೇಶಕಿ ಎಚ್.ಜಿ.ಪ್ರತಿಭಾ, ರೇಷ್ಮೆ ಸಹಾಯಕ ನಿರ್ದೇಶಕ ಸುರೇಶ್, ಪಶು ವೈದ್ಯಾಧಿಕಾರಿ ಆಯುಷ್ ಕುಮಾರ್‌ಸಿಂಗ್, ಎಡಿಎ ಶ್ರೀಹರ್ಷ, ಕೃಷಿ ಅಧಿಕಾರಿಗಳಾದ ಬಿ.ಭವಾನಿ, ಕೆ.ಎನ್.ಕರುಣ, ಎಟಿಎಂ ಕುಸುಮಾ, ಆಶಾ ಫೌಂಡೇಶನ್ನ ಕವಿತಾ ಕುರುಗಂಟಿ, ಕೃಷಿ ಪರಿಕರ ಮಾರಾಟಗಾರ ಸುನಿಲ್, ವೆಂಕಟೇಶ್, ಸತೀಶ್ ಡಿ.ಎಲ್.ಗೌಡ, ಕೃಷ್ಣ, ಎಸ್.ಆರ್.ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಗೌರಿ–ಗಣೇಶ, ಈದ್ ಮಿಲಾದ್ ಹಬ್ಬಗಳನ್ನು ಸೌಹಾರ್ದತೆಯಿಂದ ಆಚರಿಸಿ



ಶಾಂತಿ ಸಭೆಯನ್ನುದ್ದೇಶಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು.

ನಾಗಮಂಗಲ, ಆ.19– ಗೌರಿ ಗಣೇಶ ಹಾಗೂ ಈದ್ ಮಿಲಾದ್ ಹಬ್ಬಗಳನ್ನು ಯಾವುದೇ ರೀತಿಯ ಘಟನೆಗಳಿಗೆ ಅವಕಾಶ ನೀಡದಂತೆ ಶಾಂತಿಯುತವಾಗಿ ಸೌಹಾರ್ದತೆಯಿಂದ ಆಚರಿಸಬೇಕೆಂದು ಹಿಂದೂ ಹಾಗೂ ಮುಸ್ಲಿಂ ಮುಖಂಡರಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮನವಿ ಮಾಡಿದರು.

ಪಟ್ಟಣದ ಟಿ.ಬಿ ಬಡಾವಣೆಯಲ್ಲಿ ಮಂಗಳವಾರ ನಡೆದ ಪಟ್ಟಣ ವ್ಯಾಪ್ತಿಯ ಹಿಂದೂ ಹಾಗೂ ಮುಸ್ಲಿಂ ಮುಖಂಡರ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಇದೇ ಆ.27 ರಂದು ಗೌರಿ–ಗಣೇಶ ಹಬ್ಬ ಹಾಗೂ ಸೆ. 5 ರಂದು ಈದ್ ಮಿಲಾದ್ ಹಬ್ಬವಿದ್ದು, ಈ ಸಂಬಂಧ ಹೊರಡಿಸಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಪ್ರತಿಷ್ಠಾಪಿಸುವರು ತಾಲೂಕು ಕಚೇರಿಯಲ್ಲಿ ತೆರೆದಿರುವ ಏಕ ಗವಾಕ್ಷಿ ಕೇಂದ್ರದಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಅನುಮತಿ ಪಡೆಯುವ ಸಂದರ್ಭ ಗಣಪತಿ ಪ್ರತಿಷ್ಠಾಪಿಸುವ ದಿನಾಂಕ, ಅವಧಿ, ವಿಸರ್ಜನೆ ಮಾಡುವ ದಿನಾಂಕ ಹಾಗೂ ಸ್ಥಳ ಮೆರವಣಿಗೆ ರೂಟ್ ಮ್ಯಾಪ್‌ಗಳನ್ನು ನಮೂದಿಸಬೇಕು ಇದರಿಂದ ಪೊಲೀಸ್ ಬಂದೋಬಸ್ತ್ ಹಾಗೂ ಅಗತ್ಯ ಇರುವ ಕಡೆ ಸಿಸಿಟಿವಿ ಅಳವಡಿಕೆ ಮತ್ತು ಚೆಸ್ಕಾಂ, ಅಗ್ನಿಶಾಮಕ ದಳ ಇಲಾಖೆಯಿಂದ ಅಗತ್ಯ ಸಿದ್ಧತೆ ಒಟ್ಟಾಗಿ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಉಪ್ಪಾರಹಳ್ಳಿ, ಸುಭಾಷ್ ನಗರ, ಬಸವೇಶ್ವರ ನಗರದಲ್ಲಿರುವ (ಮಂಟಿ) ಗಣಪತಿಯನ್ನು ಟಿಬಿ ಬಡಾವಣೆಯಲ್ಲಿರುವ ಕೊಳದಲ್ಲಿ ವಿಸರ್ಜನೆ ಮಾಡಬೇಕು ಪಟ್ಟಣದ ಎ.ಕೆ ಕಾಲೋನಿ, ಎ.ಡಿ ಕಾಲೋನಿ, ಕೆ. ಮಲ್ಲೇನಹಳ್ಳಿ, ಎಲ್ಲಮ್ಮ ದೇವಸ್ಥಾನ ಮುಂಭಾಗ ಇರುವ ಗಣಪತಿ ಸೇರಿದಂತೆ ಹಬ್ಬದಿಂದ 9ನೇ ದಿನ ಸಾಮೂಹಿಕ ಗಣಪತಿಯೊಂದಿಗೆ ಪಟ್ಟಣದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಹೊರಟು ನಂತರ ಹಂಪೆ ಅರಸನ ಕೊಳದಲ್ಲಿ ವಿಸರ್ಜನೆ ಮಾಡಲು ಸೂಚಿಸಿದರು.

ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್ ಮಾತನಾಡಿದರು.

ಸಭೆಯಲ್ಲಿ ಅಪಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ತಿಮ್ಮಯ್ಯ, ನಾಗಮಂಗಲ ತಹಸಿಲ್ದಾರ್ ಆದರ್ಶ ಜಿ, ಡಿವೈಎಸ್‌ಪಿ ಚಲುವರಾಜು, ಸಿಪಿಐ ನಿರಂಜನ್, ನಾಗಮಂಗಲ ಸಬ್ ಇನ್ಸ್‌ಪೆಕ್ಟರ್ ಶಿವಕುಮಾರ್, ಬೆಳ್ಳೂರು ಪಿಎಸ್‌ಐ ರವಿಕುಮಾರ್, ಬಿಂಡಿಗನ ವಿಲೆ ಪಿಎಸ್‌ಐ ಮಾರುತಿ, ನಾಗಮಂಗಲ ರೂರಲ್ ಪಿಎಸ್‌ಐ ರಾಜೇಂದ್ರ, ಹಿಂದೂ, ಮುಸ್ಲಿಂ ಮುಖಂಡರು ಉಪಸ್ಥಿತರಿದ್ದರು.

ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಸಂಘಟನೆ ಸಾಧ್ಯ



ಕೆಪಿಸಿಸಿ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಸೌಮ್ಯರೆಡ್ಡಿ ನೂತನ ಜಿಲ್ಲಾಧ್ಯಕ್ಷೆ ಶುಭದಾಯಿನಿರವರಿಗೆ ಪಕ್ಷದ ಬಾವುಟ ನೀಡುವುದರ ಮೂಲಕ ಅಧಿಕಾರ ವಹಿಸಿದರು

ಮಂಡ್ಯ, ಆ.19– ಎಲ್ಲರೂ ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಸಂಘಟನೆ ಮಾಡಲು ಸಾಧ್ಯ ಎಂದು ಕೆಪಿಸಿಸಿ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಸೌಮ್ಯ ರೆಡ್ಡಿ ತಿಳಿಸಿದರು.

ಮಂಡ್ಯ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ನೂತನ ಮಹಿಳಾಧ್ಯಕ್ಷೆ ಎಚ್.ಬಿ. ಶುಭದಾಯಿನಿ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಇದ್ದ ಅವಧಿಯಲ್ಲಿ ಯಾವುದೇ ಕೆಲಸ ಮಾಡಲಾಗದೆ ತುಂಬಾ ಸಮಸ್ಯೆಯಾಗಿತ್ತು. ಅಧಿಕಾರವಿಲ್ಲದೆ ಪಕ್ಷವನ್ನೂ ಸಂಘಟಿಸಲಾಗಲಿಲ್ಲ. ನಮ್ಮ ಪಕ್ಷಕ್ಕೆ ಎಲ್ಲ ಮಹಿಳೆಯರೇ ಹೆಚ್ಚಿನ ಶಕ್ತಿ ತುಂಬಿದ್ದರಿಂದಾಗಿ ರಾಜ್ಯದಲ್ಲಿ 135 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು ಪಕ್ಷವನ್ನು ಮುಂದೆಯೂ ಅಧಿಕಾರದಲ್ಲಿರುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳೀಗೌಡ ಮಾತನಾಡಿ, ಮಹಿಳೆಯರಿಗೆ ಅಧಿಕಾರ ನೀಡಿದ ಏಕೈಕ ಪಕ್ಷ ವೆಂದರೆ ಅದು ಕಾಂಗ್ರೆಸ್ ಮಾತ್ರ ಇಂದಿರಾಗಾಂಧಿಯಂಥ ಮಹಿಳೆಯನ್ನು ಪ್ರಧಾನಿ ಮಾಡಿದ ಪಕ್ಷ ನಮ್ಮದೆಂದರು. ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ವೇದಿಕೆ ಯಲ್ಲಿ ಶಾಸಕ ಪಿ.ರವಿಕುಮಾರ್ ಗಣಿಗ, ಮುಖಂಡರಾದ ಎಂ.ಎಸ್. ಚಿದಂಬರ್, ಅಂಜನಾ ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.

ಟಿಎಪಿಸಿಎಂಎಸ್‌ಗೆ ಯತೀಶ್ ಅಧ್ಯಕ್ಷ



ಟಿಎಪಿಸಿಎಂಎಸ್ ನೂತನ ಅಧ್ಯಕ್ಷ ಯತೀಶ್‌ರನ್ನು ಸದಸ್ಯರು ಅಭಿನಂದಿಸಿದರು.

ನಾಗಮಂಗಲ, ಆ.19–ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ ಯತೀಶ್ ಆರ್. ಈಡಿಗ ಅವಿರೋಧ ಆಯ್ಕೆಯಾಗಿದ್ದಾರೆ.

ಪ್ರಭಾರ ಅಧ್ಯಕ್ಷರಾಗಿದ್ದ ಗೀತಾ ಗೋವಿಂದರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಮಂಗಳವಾರ ಚುನಾವಣೆಯಲ್ಲಿ ಸಚಿವ ಎನ್. ಚೆಲುವರಾಯಸ್ವಾಮಿಯವರ ಬೆಂಬಲಿತ ಯತೀಶ್ ಆರ್. ಈಡಿಗರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರ ಆಯ್ಕೆಯನ್ನು ಚುನಾವಣಾಧಿಕಾರಿ ಆನಂದ ನಾಯಕ್ ಪ್ರಕಟಿಸಿದರು. ತಾಲೂಕಿನ ರೈತರ ಅಭಿವೃದ್ಧಿಗಾಗಿ ದುಡಿದ ಹಿರಿಯ ಸಹಕಾರಿ ಮಾದಪ್ಪ ಗೌಡರು ಸ್ಥಾಪಿಸಿರುವ ಈ ಸಂಸ್ಥೆಗೆ ಯಾವುದೇ ಚ್ಯುತಿ ಬಾರದ ರೀತಿಯಲ್ಲಿ ಹಾಗೂ ಸಂಘದಲ್ಲಿ ಸಿಗಬಹುದಾದ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಸದಸ್ಯತ್ವ ಹೊಂದಿರುವ ರೈತರಿಗೆ ತಲುಪಿಸುವ ಜೊತೆಗೆ ಸಂಸ್ಥೆಯ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಆಶ್ವಾಸನೆ ನೀಡಿದರು

ಪ್ರಭಾರ ಅಧ್ಯಕ್ಷ ಗೀತಾ ಗೋವಿಂದ, ಮಾಜಿ ಅಧ್ಯಕ್ಷ ತಿಮ್ಮಪ್ಪ, ಚಿಕ್ಕಮ್ಮ, ಹಾಲ್ತಿ ಗಿರೀಶ್, ಅಲ್ಪಹಳ್ಳಿ ಕೃಷ್ಣೇಗೌಡ, ನಿರ್ದೇಶಕ ದಿನೇಶ್, ಗೀತಾ ಪೂಜಾರಿ, ರಾಚಯ್ಯ, ಹೊಣಕೆರೆ ಬಸವರಾಜು, ಕುಮಾರ್, ರಾಮಚಂದ್ರ ಅಭಿನಂದಿಸಿದರು.

ಮಕ್ಕಳಿಗೆ ಪೋಷಕರು ಸಂಸ್ಕಾರ ಕಲಿಸಬೇಕು



ಕೆಪಿಎಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಜರುಗಿದ ಪುಸ್ತಕ ಮಸ್ತಕದ ಬೆಳವಣಿಗೆಗೆ ಸಹಕಾರಿ ಕಾರ್ಯಕ್ರಮವನ್ನು ಎಲ್.ಎನ್. ಚಂದ್ರೇಗೌಡ ಉದ್ಘಾಟಿಸಿದರು.

ಕಿಕ್ಕೇರಿ, ಆ.19– ಮಕ್ಕಳಿಗೆ ಹಿರಿಯರಲ್ಲಿನ ಗೌರವ, ಕಿರಿಯರ ಮೇಲಿನ ಪ್ರೀತಿ ಮರೆಯಾಗುತ್ತಿದ್ದು ಸಂಸ್ಕಾರಕ್ಕೆ ಒತ್ತು ನೀಡಲು ಪೋಷಕರು ಮುಂದಾಗಬೇಕೆಂದು ಸಮಾಜ ಸೇವಾಕರ್ತ ಎಲ್. ಎನ್. ಚಂದ್ರೇಗೌಡ ಹೇಳಿದರು.

ಪಟ್ಟಣದ ಕೆಪಿಎಸ್ ಕನ್ನಡ ಮಾಧ್ಯಮ ಪ್ರೌಢಶಾಲಾ ವಿಭಾಗದಲ್ಲಿ ಏರ್ಪಡಿಸಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಗಳಿಗಾಗಿ 'ಪುಸ್ತಕ ಮಸ್ತಕದ ಬೆಳವಣಿಗೆಗೆ ಸಹಕಾರಿ' ಕಾರ್ಯಕ್ರಮದಲ್ಲಿ ಮಾತನಾಡುತ್ತ, ಮಕ್ಕಳಿಗೆ ಅಂಕ ಕಡಿಮೆಯಾದರೂ ಚಿಂತೆ ಪಡದಿರಿ, ಸಂಸ್ಕಾರ ಶಿಕ್ಷಣ ಮೊದಲು ಕಲಿಸಿ. ಮಕ್ಕಳಲ್ಲಿ ಸನ್ನಡತೆ ಮಾಯವಾಗಿದೆ. ಸಮುದಾಯ ಹಾಳಾಗುವ ಹಂತ ತಲುಪುವಂತಾಗಿದೆ. ಮಕ್ಕಳಿಗೆ ವಿನಯತೆ, ಶಿಸ್ತು, ಸಮಯಪ್ರಜ್ಞೆ ಮೊದಲು ಕಲಿಸಿ ಎಂದರು. ಪೋಷಕರಲ್ಲಿ ಖಾಸಗಿ ಶಾಲೆ ವ್ಯಾಮೋಹ, ಇಂಗ್ಲೀಷ್ ಮಾಧ್ಯಮ ಭೂತ ಕಾಡುತ್ತಿದೆ. ಸರ್ಕಾರಿ ಕನ್ನಡ ಶಾಲೆ ಒಂದೊಂದಾಗಿ ಮುಚ್ಚುವಂತಾಗಿದೆ. ಸರ್ಕಾರಿ ಶಾಲೆ ಉಳಿದರೆ ಮಾತ್ರ ಬಡ ಮಕ್ಕಳ ಭವಿಷ್ಯ ಉತ್ತಮವಾಗಲಿದೆ. ಕನ್ನಡ ಶಾಲೆ ಮುಚ್ಚಿದರೆ ಬಡಮಕ್ಕಳಿಗೆ ಮಾಡುವ ಘೋರ ಅನ್ಯಾಯ ಎಂದರು.

ಕೋವಿಡ್ ವೇಳೆ ಬಂದ ಮೊಬೈಲ್ ಇಂದು ಮಕ್ಕಳಿಗೆ ಮನರಂಜನೆಗಾಗಿ ಮೀಸಲಾಗಿದೆ. ಮಕ್ಕಳಿಗೆ ಬೇಕಿರುವುದು ಪುಸ್ತಕ, ಓದು. ಎಸ್ಸೆಸ್ಸೆಲ್ಸಿ ತಮ್ಮ ಭವಿಷ್ಯದ ತಿರುವಿನ ಘಟ್ಟ ಎಂಬುದನ್ನು ಮರೆಯದಿರಿ. ಪುಸ್ತಕ ದೂರ ಸರಿದು ಮಕ್ಕಳ ಕೈಯಲ್ಲಿ ಮೊಬೈಲ್ ಸಿಕ್ಕಿ ಭವಿಷ್ಯ ನಲುಗುವಂತಾಗಿರುವುದನ್ನು ತಪ್ಪಿಸಲು ಎಚ್ಚರಿಕೆ ವಹಿಸಬೇಕು ಎಂದರು.

ಮುಖ್ಯ ಶಿಕ್ಷಕಿ ಬಿ.ಕೆ. ಮಮತಾ, ಸಮಾಜ ಸೇವಾಕರ್ತ ಅಯ್ಯನಕೊಪ್ಪಲು ರವಿಕುಮಾರ್, ಶಿಕ್ಷಕ ಎಸ್.ಆರ್. ಸುರೇಶ್, ಎಸ್. ವಿಷಕಂಠ, ದೀಪ ಕುಮಾರಿ, ಚೈತ್ರ, ಪುಷ್ಪಲತಾ, ಭಾಗ್ಯ ಇದ್ದರು.

ಒಂದನೇ ಪುಟದಿಂದ

ಒಳಮೀಸಲಾತಿಗೆ ಸಂಪುಟ ಅಸ್ತು

ಅನುಷ್ಠಾನ ಸಂಬಂಧ ಯಾವುದೇ ನಿರ್ಧಾರ ಕೈಗೊಂಡಿರಲಿಲ್ಲ. ವರದಿ ಅಧ್ಯಯನಕ್ಕೆ ಒಂದು ವಾರ ಕಾಲಾವಕಾಶ ನೀಡಿ, ವಿಶೇಷ ಸಚಿವ ಸಂಪುಟದಲ್ಲಿ ಚರ್ಚಿಸಿ, ಅಂತಿಮ ನಿರ್ಣಯಕ್ಕೆ ಬರಲು ತೀರ್ಮಾನಿಸಲಾಗಿತ್ತು. ಅಂತೆಯೇ ಇಂದು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಹಂಚಿಕೆ ಸಂಬಂಧ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ನ್ಯಾ.ನಾಗಮೋಹನ್ ದಾಸ್ ವರದಿಯಲ್ಲಿ ಎಡಗೈ ಸಮುದಾಯಕ್ಕೆ ಶೇ.6, ಬಲಗೈ ಸಮುದಾಯಕ್ಕೆ ಶೇ.5 ಸೇರಿದಂತೆ ಹಲವು ಗುಂಪುಗಳಾಗಿ ವರ್ಗೀಕರಿಸಿ ಮೀಸಲಾತಿ ಹಂಚಿಕೆ ಮಾಡಲಾಗಿತ್ತು ಎಂದು ತಿಳಿದು ಬಂದಿದ್ದು, ಇಂದಿನ ವಿಶೇಷ ಸಚಿವ ಸಂಪುಟದಲ್ಲಿ ಎಡಗೈ ಹಾಗೂ ಬಲಗೈ ಸಮುದಾಯಗಳಿಗೆ ಸಮ ಪ್ರಮಾಣದ ಮೀಸಲಾತಿ ಹಂಚಿಕೆ ಮಾಡಿರುವುದು ಗಮನಾರ್ಹವಾಗಿದೆ ವಿಶೇಷ ಸಚಿವ ಸಂಪುಟ ಸಭೆಗೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಎಡಗೈ, ಬಲಗೈ ಹಾಗೂ ಇನ್ನಿತರ ಸಮುದಾಯಗಳ ಸಚಿವರೊಂದಿಗೆ ಎರಡು ಸುತ್ತಿನ ಮಾತುಕತೆ ನಡೆಸಿದ್ದರು. ಈ ಕಾರಣಕ್ಕೆ ವಿಶೇಷ ಸಚಿವ ಸಂಪುಟದ ಸಭೆಯನ್ನೂ ಕೆಲ ಗಂಟೆಗಳ ಕಾಲ ಮುಂದೂಡಲಾಗಿತ್ತು. ನ್ಯಾ.ನಾಗಮೋಹನ್‌ದಾಸ್ ವರದಿ ಅನುಷ್ಠಾನಕ್ಕೆ ಸಹಕಾರ ನೀಡಲು ಎಲ್ಲಾ ಸಮುದಾಯದ ನಾಯಕರೂ ಒಪ್ಪಿದ್ದರಿಂದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ವರದಿ ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ.

ಶೇ.8ರಷ್ಟು ಮೀಸಲಾತಿ ನೀಡಬೇಕಿತ್ತು, ಹೋರಾಟ ಮುಂದುವರೆಸುತ್ತೇವೆ...



ಜನಸಂಖ್ಯೆ ಹಾಗೂ ಹಿಂದುಳಿದಿರುವಿಕೆ ಪರಿಗಣಿಸಿ ಮಾದಿಗ ಸಮುದಾಯಕ್ಕೆ ಶೇ.8ರಷ್ಟು ಮೀಸಲಾತಿ ಕಲ್ಪಿಸಬೇಕಿತ್ತು. ನಿರ್ದಿಷ್ಟ ಮೀಸಲಾತಿ ಲಭಿಸಿದ ಕಾರಣ ಮಾದಿಗ ಸಮುದಾಯದ ಎಲ್ಲಾ ಹೋರಾಟಗಾರರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಕಾಂಗ್ರೆಸ್ ಸರ್ಕಾರವು ಮಾದಿಗ ಸಮುದಾಯದ ಜನಸಂಖ್ಯೆ ಹಾಗೂ ಹಿಂದುಳಿದಿರುವಿಕೆ ಆಧಾರದಲ್ಲಿ ಮೀಸಲಾತಿ ಕಲ್ಪಿಸಿಲ್ಲ. ಇದನ್ನು ಖಂಡಿಸುತ್ತೇನೆ. ಹಾಗಾಗಿ ಮುಂದಿನ ದಿನಗಳಲ್ಲಿ ಮಾದಿಗ ಸಮುದಾಯದ ವಿರೋಧಿ ಧೋರಣೆ ತೋರಿದ ಕಾಂಗ್ರೆಸ್ ವಿರುದ್ಧ ಹೋರಾಟ ರೂಪಿಸುತ್ತೇವೆ.

-ಎಸ್.ಅರುಣ್‌ಕುಮಾರ್, ಹಿರಿಯ ವಕೀಲರು ಹಾಗೂ ಅಧ್ಯಕ್ಷರು, ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ.

ಜಟಿಲವಾಗಿದ್ದ ವರದಿ ಅನುಷ್ಠಾನ: ಸುಪ್ರೀಂಕೋರ್ಟ್ ತೀರ್ಪಿನ ನಂತರ ಎಡಗೈ ಸಮುದಾಯದ ನಿರಂತರ ಹೋರಾಟಕ್ಕೆ ಮಣಿದ ರಾಜ್ಯ ಸರ್ಕಾರ, ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ನ್ಯಾ.ನಾಗಮೋಹನ್‌ದಾಸ್ ಏಕಸದಸ್ಯ ಆಯೋಗ ರಚಿಸಿತ್ತು. ನ್ಯಾ.ನಾಗಮೋಹನ್ ದಾಸ್ ಅವರು ಪ್ರಾಥಮಿಕವಾಗಿ ಜಾಗೃತಿ ಮೂಡಿಸಿದ ನಂತರ ಸಮೀಕ್ಷೆ ಆರಂಭಿಸಿದ್ದರು. ಸಮೀಕ್ಷೆ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ಆರೋಪದ ನಡುವೆಯೂ ಹಲವು ಬಾರಿ ಗಡುವು ವಿಸ್ತರಿಸಿ, ಪರಿಶಿಷ್ಟ ಜಾತಿಯವರಿಗೆ ತಮ್ಮ ಸಮುದಾಯ ಘೋಷಿಸಿಕೊಳ್ಳಲು ಅನುವು ಮಾಡಿಕೊಡಲಾಗಿತ್ತು. ಅಂತಿಮವಾಗಿ 1,766 ಪುಟಗಳ ಸಮೀಕ್ಷಾ ವರದಿಯನ್ನು ನ್ಯಾ.ನಾಗಮೋಹನ್‌ದಾಸ್ ಅವರು ಆ.4ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ್ದರು. ಆ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿದ ನಂತರ ಮತ್ತೊಂದು ರೀತಿಯ ಸಮಸ್ಯೆ ನಿರ್ಮಾಣವಾಗಿತ್ತು. ಬಲಗೈ ಸಮುದಾಯದ ಬಹುತೇಕ ಮುಖಂಡರು ನ್ಯಾ.ನಾಗಮೋಹನ್‌ದಾಸ್ ವರದಿ ಅವೈಜ್ಞಾನಿಕವಾಗಿದೆ ಎಂದು ಅನುಷ್ಠಾನಕ್ಕೆ ವಿರೋಧ ವ್ಯಕ್ತಪಡಿಸಿದರೆ, ವರದಿಯನ್ನು ಯಥಾವತ್ತಾಗಿ ಜಾರಿಗೆ ತರಬೇಕೆಂದು ಒತ್ತಾಯಿಸಿದ್ದವು. ಈ ನಡುವೆ ಎಲ್ಲಾ ಸಮುದಾಯಗಳ ಪ್ರಮುಖ ಮುಖಂಡರು ಗೃಹಸಚಿವ ಡಾ.ಜಿ.ಪರಮೇಶ್ವರ್ ನೇತೃತ್ವದಲ್ಲಿ ಸಭೆ ನಡೆಸಿ, ಗೊಂದಲವಾಗದಂತೆ ಮೀಸಲಾತಿ ಹಂಚಿಕೆ ಮಾಡಿಕೊಳ್ಳೋಣ ಎಂದು ನಿರ್ಧರಿಸಿದ್ದರು. ಆದರೂ ಜಟಿಲವಾಗುತ್ತಿದ್ದ ಸಮಸ್ಯೆ ಇದೀಗ ಇತ್ಯರ್ಥವಾದಂತಿದೆ.

ಮೊಬೈಲ್ ಸಂಖ್ಯೆ ಲಿಂಕ್ ಕಡ್ಡಾಯ

ಎಂದು ತಿಳಿಸಿದರು. ಸಾರ್ವಜನಿಕರು ತಮ್ಮ ಮೊಬೈಲ್ ಸಂಖ್ಯೆಯನ್ನು ಲಿಂಕ್ ಅಥವಾ ನವೀಕರಿಸಲು ಸಹಾಯ ಮಾಡಲೆಂದು ಆರ್ ಟಿಒ ಕಚೇರಿಯಲ್ಲಿ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ ಎಂದು ಹೇಳಿದರು. ಮೊಬೈಲ್ ಸಂಖ್ಯೆಯನ್ನು ಲಿಂಕ್ ಅಥವಾ ನವೀಕರಣ ಮಾಡುವ ವೇಳೆ ಅವರ ಮೊಬೈಲ್‌ನಲ್ಲಿ ಬರುವ ಒಟಿಪಿ (ಒನ್ ಟೈಮ್ ಪಾಸ್ ವರ್ಡ್) ಅಗತ್ಯವಾಗಿ ಬೇಕಾಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ಸಾರಿಗೆ ರಾಷ್ಟ್ರೀಯ ನೋಂದಣಿ ಮೂಲಕ ಸಾರಿಗೆ ಇಲಾಖೆಯ ನಿಖರ ಮಾಹಿತಿ ಮತ್ತು ಹಲವು ವಿವರಗಳನ್ನು ಸಕಾಲಕ್ಕೆ ತಲುಪಿಸಲು ಡಿಎಲ್ ಮತ್ತು ಆರ್‌ಸಿಗೆ ಮೊಬೈಲ್ ಸಂಖ್ಯೆ ಲಿಂಕ್ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಹಿನ್ನೆಲೆ ಪ್ರತಿಯೊಬ್ಬ ವಾಹನ ಚಾಲಕ ಮತ್ತು ಮಾಲೀಕ ಡಿಎಲ್ ಮತ್ತು ಆರ್‌ಸಿಗೆ ತಮ್ಮ ಮೊಬೈಲ್ ಸಂಖ್ಯೆಯನ್ನು ನೋಂದಣಿ ಮಾಡಿಕೊಳ್ಳುವುದು ಅತ್ಯವಶ್ಯ ಎಂದು ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಅಭಿಪ್ರಾಯಪಟ್ಟಿದೆ. ತಪ್ಪು ಮಾಡಿದಾಗ ದಂಡ ಪಾವತಿಯಿಂದ ತಪ್ಪಿಸಿಕೊಳ್ಳಲು ಮೊಬೈಲ್ ಫೋನ್ ಸಂಖ್ಯೆ ಹಾಗೂ ವಿಳಾಸಗಳನ್ನು ಬದಲಾವಣೆ ಮಾಡಿಕೊಳ್ಳುವ ವಾಹನ ಚಾಲಕರು ಹಾಗೂ ಮಾಲೀಕರ ಧೋರಣೆ ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸಾರಿಗೆ ಇಲಾಖೆ ಈ ಕ್ರಮ ಕೈಗೊಂಡಿದೆ.

ವಾಹನ ಕಳ್ಳತನವಾದ ಸಂದರ್ಭದಲ್ಲಿ ಮೊಬೈಲ್ ಸಂಖ್ಯೆಗೆ ಒಟಿಪಿ ಖಚಿತಪಡಿಸಿಕೊಳ್ಳಲಾಗುತ್ತದೆ. ಇದರಿಂದ ವಾಹನ ಕಳ್ಳತನ ಹಾಗೂ ಮೋಸದಿಂದ ವಾಹನ ಮಾಲೀಕತ್ವ ವರ್ಗಾವಣೆಯನ್ನು ತಡೆಗಟ್ಟಬಹುದು ಎಂದು ಸಾರಿಗೆ ಇಲಾಖೆ ಚಿಂತನೆ ಮಾಡಿ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿದೆ.

ಸಸಿಕಾಂತ್ ಸೆಂಥಿಲ್ ಕೈವಾಡ!

ಈ ಸಂಪೂರ್ಣ ಪ್ರಕರಣದ ಹಿಂದಿನ ಮಾಸ್ಟರ್ ಮೈಂಡ್ ಆತನೇ ಎಂದು ಗಂಭೀರ ಆರೋಪ ಮಾಡಿದ್ದಾರೆ. ದಕ್ಷಿಣ ಕನ್ನಡದ ಇಬ್ಬರು ವ್ಯಕ್ತಿಗಳೊಂದಿಗೆ ಸಸಿಕಾಂತ್ ಸೆಂಥಿಲ್ ಸೇರಿ ಧರ್ಮಸ್ಥಳಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಕಾರ್ಯಸೂಚಿಗಳನ್ನು ಸಿದ್ಧಪಡಿಸಿದ್ದಾರೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ಈ ಪ್ರಕರಣದಲ್ಲಿ ಆಸಕ್ತಿ ಇರಲಿಲ್ಲವಾದರೂ, ಹೈಕಮಾಂಡ್ ಮೇಲೆ ಒತ್ತಡ ತಂದು ಎಸ್‌ಐಟಿ ತನಿಖೆ ಮಾಡಿಸಲಾಗಿದೆ. ಎಡಪಂಥೀಯ ನಿಲುವುಗಳನ್ನು ಹೊಂದಿರುವ ಸಸಿಕಾಂತ್ ಸೆಂಥಿಲ್ ಅವರನ್ನು ತನಿಖೆಗೆ ಒಳಪಡಿಸಬೇಕು ಎಂದು ಜನಾರ್ದನ ರೆಡ್ಡಿ ಆಗ್ರಹಿಸಿದ್ದಾರೆ. ಈ ಪ್ರಕರಣದ ಬಗ್ಗೆ ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು, ಇಲ್ಲವೇ ಸಿಬಿಐ ತನಿಖೆ ನಡೆಸುವ ಅಗತ್ಯವಿದೆ ಎಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಿಲ್ಲಿಸದಿದ್ದರೆ ಕಠಿಣ ಕ್ರಮ

ಭಾವನೆಗಳನ್ನು ಕೆರಳಿಸುವವರು ಈ ಕೂಡಲೇ ಅದನ್ನು ನಿಲ್ಲಿಸಬೇಕು. ಈ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಮುಂದುವರೆದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸೂಚನೆ ನೀಡಿದರು. ಧರ್ಮಸ್ಥಳ ಗ್ರಾಮದಲ್ಲಿ ಯೂಟ್ಯೂಬ್ ಚಾನೆಲ್‌ಗಳ 2 ಗುಂಪು ಗಳು ಕಿತ್ತಾಡಿಕೊಂಡಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಕ್ರಮ ಕೈಗೊಳ್ಳ ಲಾಗಿದೆ. ಇದೇ ರೀತಿಯ ಘಟನೆಗಳು ಮತ್ತೆ ಮರುಕಳಿಸದಂತೆ ನೋಡಿಕೊಳ್ಳ ಲಾಗುವುದು ಎಂದು ತಿಳಿಸಿದರು. ಯೂಟ್ಯೂಬ್ ಸೇರಿ ಸಾಮಾಜಿಕ ಜಾಲ ತಾಣಗಳಿಗೆ ಕಡಿವಾಣ ಹಾಕದಿದ್ದರೆ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ ಎಂದರು.

ಸುಳ್ಳು ಪ್ರಚಾರಕ್ಕೆ ನಾವು ಎಂದಿಗೂ ವಿಚಲಿತರಾಗಲ್ಲ

ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿತ್ತು. ಈ ಬಾಲಕಿಯ ನ್ಯಾಯಕ್ಕಾಗಿ ಈಗಲೂ ಪ್ರತಿಭಟನೆಗಳು ನಡೆಯುತ್ತಿವೆ.ಜೊತೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪದ ವಿಷಯಗಳನ್ನು ಬಿಂಬಿಸುವ ರೀತಿ ನೈತಿಕವಾಗಿ ತಪ್ಪು ಎಂದು ಪ್ರತಿಪಾದಿಸಿದರು.

ರಾಜ್ಯ ಸರ್ಕಾರ ಎಸ್ ಐಟಿ ರಚಿಸಿರುವುದು ಒಳ್ಳೆಯದು ಮತ್ತು ಸತ್ಯ ಒಮ್ಮೆ ಹೊರಬರಬೇಕು. ಆರೋಪ ಕೇಳಿಬಂದಾಗ ತನಿಖೆ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಅವು ಹಾಗೆಯೇ ಉಳಿಯುತ್ತವೆ ಎಂದಿದ್ದಾರೆ. ಈ ತನಿಖೆ ಬೇಗನೆ ಮುಕ್ತಾಯಗೊಳ್ಳಬೇಕು ಮತ್ತು ಸಮಸ್ಯೆಯನ್ನು ಪರಿಹರಿಸಬೇಕೆಂದು ನಾವು ಬಯಸುತ್ತೇವೆ. ನಾವು ಎಲ್ಲದಕ್ಕೂ ಮುಕ್ತರಾಗಿದ್ದೇವೆ. ಎಸ್‌ಐಟಿ ಸಂಪೂರ್ಣವಾಗಿ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದು ಹೇಳಿದರು.

ಸುಳ್ಳು ಪ್ರಚಾರಕ್ಕೆ ವಿಚಲಿತರಾಗಲ್ಲ: ಧರ್ಮಸ್ಥಳ ಮತ್ತು ಅದರ ಟ್ರಸ್ಟ್ ಅನ್ನು ಗುರಿಯಾಗಿಸಿಕೊಂಡು 14 ವರ್ಷಗಳಿಗೂ ಹೆಚ್ಚು ಕಾಲದಿಂದ ಸಂಘಟಿತ ಅಭಿಯಾನ ನಡೆಸಲಾಗುತ್ತಿದೆ. ನಾವು ಮಾಡುತ್ತಿರುವ ಒಳ್ಳೆಯ ಕೆಲಸಗಳನ್ನು ಸಹಿಸಿಕೊಳ್ಳಲಾಗದ ಕೆಲವು ಶಕ್ತಿಗಳು ಸುಳ್ಳು ಪ್ರಚಾರ ನಡೆಸುತ್ತಿವೆ. ಆದರೆ ನಾವು ವಿಚಲಿತರಾಗುವುದಿಲ್ಲ ಎಂದರು.

ಕಾನೂನು ಪ್ರಕಾರವೇ ಶವ ಸಂಸ್ಕಾರ: ಧರ್ಮಸ್ಥಳದಲ್ಲಿ ಶವಗಳನ್ನು ಸಮಾಧಿ ಮಾಡಿರುವುದಾಗಿ ಮುಖವಾಡ ಧರಿಸಿದ ವ್ಯಕ್ತಿಯೊಬ್ಬ ಹೇಳಿಕೊಳ್ಳುವ ಇತ್ತೀಚಿನ ವಿಡಿಯೋಗಳನ್ನು ಉಲ್ಲೇಖಿಸಿದ ಅವರು, ಇದು ಅಸಾಧ್ಯ. ಧರ್ಮಸ್ಥಳದಲ್ಲಿ ಯಾರಾದರೂ ಸತ್ತರೆ ಅವರಿಗೆ ಮೋಕ್ಷ ಸಿಗುತ್ತದೆ ಎಂಬ ಜನಪ್ರಿಯ ನಂಬಿಕೆ ಇದೆ. ಸಾವು ಸಂಭವಿಸಿದಾಗಲೆಲ್ಲಾ ನಾವು ಪಂಚಾಯತ್‌ಗೆ ತಿಳಿಸುತ್ತಿದ್ದೆವು ಮತ್ತು ಅವರು ಕಾನೂನು ಪ್ರಕಾರವೇ ಶವವನ್ನು ಹೂಳುತ್ತಾರೆ ಎಂದರು.

ಸಾಮಾಜಿಕ ಮಾಧ್ಯಮವು ಯುವ ಮನಸ್ಸುಗಳನ್ನು ಕಲುಷಿತಗೊಳಿಸಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು ಈ ಪ್ರಕರಣವನ್ನು ಬಿಂಬಿಸಿದ ರೀತಿ ನಮಗೆ ಆಘಾತ ಮತ್ತು ಆಶ್ಚರ್ಯವನ್ನುಂಟು ಮಾಡಿದೆ. ಸಾಮಾಜಿಕ ಮಾಧ್ಯಮವು ಅತ್ಯಂತ ಶಕ್ತಿಶಾಲಿ ಮಾಧ್ಯಮವಾಗಿದೆ ಮತ್ತು ನಮ್ಮ ಅನೇಕ ಹಿತೈಷಿಗಳು ನಮ್ಮ ಒಳ್ಳೆಯ ಕೆಲಸವನ್ನು ಪ್ರಚಾರ ಮಾಡಲು ನಾವು ಸಾಮಾಜಿಕ ಮಾಧ್ಯಮವನ್ನು ಬಳಸಿಲ್ಲ ಎಂದು ಹೇಳುತ್ತಾರೆ. ನಾವು ವಿವಿಧ ಸಾಮಾಜಿಕ ಕಾರ್ಯಗಳ ಮೂಲಕ ಎಲ್ಲಾ ಹಳ್ಳಿಗಳನ್ನು ಮತ್ತು 55 ಲಕ್ಷ ಕುಟುಂಬಗಳನ್ನು ತಲುಪಿದ್ದೇವೆ ಎಂದರು.

ಸಿಬಿಐ ತನಿಖೆಗೆ ಸಹಕಾರ: ಸೌಜನ್ಯ ಕೊಲೆ ಪ್ರಕರಣದಲ್ಲಿ ನ್ಯಾಯಕ್ಕಾಗಿ ಮತ್ತೆ ಕೇಳಿಬಂದ ಕೂಗಿಗೆ ಪ್ರತಿಕ್ರಿಯಿಸಿದ ಹೆಗ್ಗಡೆ, ಅಂತಹ ಘಟನೆ ನಡೆದಿದೆ ಎಂದು ನಮಗೆ ತಿಳಿದಾಗ ನಾವು ಅದೇ ದಿನ ಸರ್ಕಾರಕ್ಕೆ ಮಾಹಿತಿ ನೀಡಿದ್ದೇವೆ. ಆದರೆ ನಮ್ಮ ಕುಟುಂಬದ ವಿರುದ್ಧದ ಆರೋಪಗಳು ಆಧಾರರಹಿತ. ನಮ್ಮ ಕುಟುಂಬ ಸದಸ್ಯರು ಶಿಕ್ಷಣಕ್ಕಾಗಿ ವಿದೇಶದಲ್ಲಿ ಇದ್ದರು ಮತ್ತು ಈ ಸಂಬಂಧ ನಾವು ದಾಖಲೆಗಳನ್ನು ಸಲ್ಲಿಸಿದ್ದೇವೆ ಎಂದು ಹೇಳಿದರು.

ಟ್ರಸ್ಟ್‌ನ ಒಡೆತನ: ಆಸ್ತಿ ದುರುಪಯೋಗದ ಆರೋಪಗಳನ್ನು ತಳ್ಳಿಹಾಕಿದ ಹೆಗ್ಗಡೆ, ನಮ್ಮ ಆಸ್ತಿ ಎಂಬುದೇ ಇಲ್ಲ. ಕುಟುಂಬವು ಬಹಳ ಕಡಿಮೆ ಆಸ್ತಿಯನ್ನು ಹೊಂದಿದೆ ಮತ್ತು ಎಲ್ಲಾ ಆಸ್ತಿಗಳು ದಾಖಲೆಗಳೊಂದಿಗೆ ಟ್ರಸ್ಟ್‌ನ ಒಡೆತನದಲ್ಲಿವೆ ಎಂದರು.

ಆಸ್ತಿಗಳ ಸ್ವಾಧೀನಕ್ಕೆ ದಾಖಲೆ ಪುರಾವೆಗಳಿವೆ. ಧರ್ಮಾಧಿಕಾರಿ(ದೇವಾಲಯದ ಪಾಲಕ) ಪ್ರಕಾರ ಟ್ರಸ್ಟ್ ಅನ್ನು ಕುಟುಂಬ ಸದಸ್ಯರು ಪಾರದರ್ಶಕ ರೀತಿಯಲ್ಲಿ ನಿರ್ವಹಿಸುತ್ತಿದ್ದಾರೆ. ನಾವು ನಾಲ್ವರು ಸಹೋದರರು. ಒಬ್ಬ ಸಹೋದರ ಬೆಂಗಳೂರಿನಲ್ಲಿ ಶಿಕ್ಷಣವನ್ನು ನೋಡಿಕೊಳ್ಳುತ್ತಾರೆ, ಇನ್ನೊಬ್ಬ ಸಹೋದರ ಸಾಮಾಜಿಕ ಕಾರ್ಯದ ಜೊತೆಗೆ ಇಲ್ಲಿ ದೇವಾಲಯವನ್ನು ನೋಡಿಕೊಳ್ಳುತ್ತಾರೆ ಮತ್ತು ನನಗೆ ಒಬ್ಬ ಸಹೋದರಿ ಇದ್ದಾಳೆ, ಅವರ ಪತಿ ಧಾರವಾಡದ ಎಸ್‌ಡಿಎಂ ವಿಶ್ವವಿದ್ಯಾಲಯದ ಕುಲಪತಿ. ಎಲ್ಲಾ ಶಿಕ್ಷಣ ಸಂಸ್ಥೆಗಳು ಟ್ರಸ್ಟ್ ಹೆಸರಿನಲ್ಲಿವೆ ಎಂದು ಅವರು ಹೇಳಿದರು.

ಡಿಕೆಶಿಗೆ ಹೇಳಿಕೆಗೆ ಸ್ವಾಗತ: ಜೈನ ಕುಟುಂಬವೊಂದು ಹಿಂದೂ ದೇವಾಲಯವನ್ನು ನಿರ್ವಹಿಸುತ್ತಿದೆ ಎಂಬ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಹೆಗ್ಗಡೆ, ಈ ಆರೋಪದಲ್ಲಿ ಸತ್ಯವಿದೆ ಎಂದು ನಾನು ಭಾವಿಸುವುದಿಲ್ಲ. ಎಲ್ಲಾ ಆಚರಣೆಗಳನ್ನು ಅನುಸರಿಸುವುದರಿಂದ ಜೈನರು ನಡೆಸುವ ಹಲವು ದೇವಾಲಯಗಳಿವೆ ಎಂದು ಅವರು ತಿಳಿಸಿದರು.

ಧರ್ಮಸ್ಥಳದ ವಿರುದ್ಧ ಪಿತೂರಿಯ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಯನ್ನು ಹೆಗ್ಗಡೆ ಅವರು ಸ್ವಾಗತಿಸಿ ಇನ್ನು ಧರ್ಮಸ್ಥಳದ ಮೇಲಿನ ನಂಬಿಕೆಗೆ ಯಾವುದೇ ಧಕ್ಕೆಯಾಗುವುದಿಲ್ಲ ಎಂದು ಪುನರುಚ್ಚರಿಸಿದರು. ನಾವು ಪೂಜೆ, ಆಚರಣೆಗಳನ್ನು ಎಂದಿನಂತೆ ನಡೆಸುತ್ತೇವೆ ಮತ್ತು ಜನಸಂದಣಿ ಅಥವಾ ಪದ್ಧತಿಗಳಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಅವರು ಹೇಳಿದರು.

ಒಳ ಮೀಸಲಾತಿ ಹಂಚಿಕೆ ವಿವರ

ಚಮಡಿಯಾ, ಚಮರ್, ಚಂಬರ, ಚಮಗಾರ, ಹರಳಯ್ಯ, ಹರಳಿ, ಖಾಲ್ಪ, ಮಚಿಗಾರ, ಮೋಚಿಗಾರ, ಮಾದರ, ಮಾದಿಗ, ಮೋಚಿ, ಮುಚ್ಚಿ, ತೆಲುಗು ಮೋಚಿ, ಕಾಮತಿ ಮೋಚಿ, ರಾಣಿಗಾರ್, ರೋಹಿದಾಸ್, ರೋಹಿತ್, ಸಮ್ಗರ್, ಹಕ್ಕಳಯ್ಯ, ಧೋರ್ಕ, ಹಕ್ಕಳಯ್ಯ, ಧೋರ್ಕಾ ಹಲಸ್ವರ, ಹಸ್ಲ, ಕಡಯ್ಯನ್, ಕೆಪ್ಮರಿಸ್, ಕೊಲುಪುಲ್ವಂಡಿಯು, ಕುಟುಂಬನ್, ಮಾದಿಗ, ಮಾವಿಲನ್, ಮೊಗೇರ್, ಪಂಚಮ, ಪನ್ನಿಯಾಂಡಿ, ಪರಯ್ಯನ್, ಪರಯ, ಸಮಗಾರ, ಸಾಂಬನ್

ದಲಿತ ಬಲಗೈ ಜಾತಿಗಳು: ಅಣಮುಕ್, ಅರೆ ಮಾಳ, ಅರವ ಮಾಳ, ಬಲಗೈ, ಛಲವಾದಿ, ಚಲವಾದಿ, ಚನ್ನಯ್ಯ, ಪಲ್ಲನ್, ಹೊಲಯ, ಹೊಲೆಯ, ಹೊಲೆಯ, ಮಹ್ಯವಂಶಿ, ಧೇಡ್, ವಂಕರ್, ಮಾರು ವಂಕರ್, ಮಾಳ, ಮಲ ಹಣ್ಣಾಯಿ, ಮಾಳ ಜಂಗಮ, ಮಾಳ ಮಾಸ್ತಿ, ಮಲ ಮಾರಾಟ, ನೆಟ್ಕಣಿ, ಮಹಾರ್, ತರಲ್, ಧೇಳು, ದೇಗುಲ ಮೇಗುಂದ,ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ.

ಇತರೆ ಜಾತಿಗಳು: ಬಕುಡ; ಬಂಜಾರ, ಲಂಬಾಣಿ, ಲಂಬಾಡ, ಲಂಬಾಡಿ, ಲಮಾಣಿ, ಸುಗಾಲಿ, ಸುಕಾಲಿ; ಭೋವಿ, ಓಡ್, ಒಡ್ಡೆ, ವಡ್ಡರ, ವಡ್ಡರ, ವಡ್ಡರ, ವಡ್ಡರ, ಕಲ್ಲುವಡ್ಡರ, ಬೋವಿ (ಬೆಸ್ತರಲ್ಲದ), ಮಣ್ಣು ವಡ್ಡರ; ಎಲ್ಲಮಾಳ್ವಾರ್, ಯೆಲ್ಲ ಮ್ಮಲವಾಂಡ್ಲು; ಕೊರಚ, ಕೊರಚಾರ್; ಕೊರಮ, ಕೊರವ, ಕೊರವರ; ಲಿಂಗಾಡರ್; ಮುಕ್ರಿ; ಮುಂಡಾಲ; ಪಂಬದ; ಸಪಾರಿ; ತಿರ್ಗರ್, ತಿರ್ಬಂದ ಇತರೆ.

ಎಲ್ಲರಿಗೂ ಸಮಾಧಾನವಾಗಿದೆ

ದಲಿತ ಸಮುದಾಯಕ್ಕೆ ಒಳ ಮೀಸಲಾತಿ ಹಂಚಿಕೆ ಸಂಬಂಧ ಎರಡೂವರೆ ಗಂಟೆ ಕಾಲ ವಿಶೇಷ ಸಚಿವ ಸಂಪುಟ ಸಭೆ ನಡೆಯಿತು. ಸಭೆಯಲ್ಲಿ ಕೈಗೊಂಡ ಇಂದಿನ ನಿರ್ಣಯವನ್ನ ಸಿಎಂ ಸಿದ್ದರಾಮಯ್ಯನವರು ಬುಧವಾರ ಸದನದಲ್ಲಿ ಹೇಳುತ್ತಾರೆ. ಎಲ್ಲರೂ ಸಂತೋಷ, ಸಮಾಧಾನದಿಂದ ಬಂದಿದ್ದೇವೆ. ಮುನಿಯಪ್ಪ, ಪರಮೇಶ್ವರ್, ಶಿವರಾಜ್ ತಂಗಡಗಿ ಸೇರಿದಂತೆ ಸಂಪುಟ ಸಭೆಯಲ್ಲಿದ್ದ ಎಲ್ಲರಿಗೂ ಸಮಾಧಾನವಾಗಿದೆ. ಸಿಎಂ ಸಿದ್ದರಾಮಯ್ಯನವರು ನಾಳೆ (ಬುಧವಾರ) ಸದನದಲ್ಲಿ ವಿಷಯ ತಿಳಿಸುತ್ತಾರೆ.

– ಕಾನೂನು ಸಚಿವ ಹೆಚ್.ಕೆ.ಪಾಟೀಲ್

ಸಿಎಂ ಐತಿಹಾಸಿಕ ನಿರ್ಧಾರ

ಸಂಪುಟ ಸಭೆಯಲ್ಲಿ ಎಲ್ಲರಿಗೂ ತೃಪ್ತಿಪಡುವ ನಿರ್ಧಾರ ಆಗಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮೂರು ಭಾಗಗಳಾಗಿ ಮಾಡಿ, ಎಡಗೈಗೆ ಶೇ.6, ಬಗ್ಗೈಗೆ ಶೇ.6 ಹಾಗೂ ಇತರೆ ಸಮುದಾಯಗಳಿಗೆ ಶೇ.5 ಮೀಸಲಾತಿ ಕೊಡಲಾಗಿದೆ.

–ಸಚಿವ ಶಿವರಾಜ್ ತಂಗಡಗಿ

101 ಸಮುದಾಯಕ್ಕೂ ಸಾಮಾಜಿಕ ನ್ಯಾಯ

ಎಲ್ಲರಿಗೂ ಒಳ್ಳೆಯದಾಗಲಿ. ಅಧಿವೇಶನದ ಸಂದರ್ಭದಲ್ಲಿ ನಾವು ಯಾವುದೇ ಪತ್ರಿಕಾ ಹೇಳಿಕೆಗಳನ್ನು ಕೊಡುವ ಹಾಗಿಲ್ಲ. ನಾಳೆ ಮುಖ್ಯಮಂತ್ರಿಗಳೇ ಈ ಬಗ್ಗೆ ಹೇಳಿಕೆ ನೀಡಲಿದ್ದಾರೆ. ಪರಿಶಿಷ್ಟ ಜಾತಿಯ ನೂರೊಂದು ಜಾತಿಗಳಿಗೂ ಸಾಮಾಜಿಕ ನ್ಯಾಯ ಸಿಕ್ಕಿದ್ದು, ಯಾವ ಜಾತಿಗೂ ಅನ್ಯಾಯವಾಗದ ರೀತಿಯಲ್ಲಿ ತೀರ್ಮಾನವಾಗಿದೆ.

–ಸಚಿವ ಕೆ.ಹೆಚ್.ಮುನಿಯಪ್ಪ


ಜೈಲು ಶಿಕ್ಷೆ ಫಿಕ್ಸ್!

ಜಾಹೀರಾತುಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ಹಣಕಾಸಿನ ವಹಿವಾಟು ಗಳನ್ನು ಸಹ ನಿಷೇಧಿಸುತ್ತದೆ. ಬ್ಯಾಂಕು ಗಳು ಮತ್ತು ಹಣಕಾಸು ಸಂಸ್ಥೆಗಳು ಆನ್‌ಲೈನ್ ಮನಿ ಗೇಮ್‌ಗಳಿಗೆ ಪಾವತಿಗಳನ್ನು ಸುಗಮ ಗೊಳಿಸುವುದನ್ನು ನಿರ್ಬಂಧಿಸಬಹುದು. ಆನ್‌ಲೈನ್ ಮನಿ ಗೇಮ್ ಅನ್ನು ಯಾವುದೇ ಆಟ – ಕೌಶಲ್ಯ ಅಥವಾ ಅವಕಾಶದ್ದಾಗಿರಲಿ – ಆಟಗಾರರು ಶುಲ್ಕ ಪಾವತಿಸುವ ಅಥವಾ ಭಾಗವಹಿಸಲು ಹಣವನ್ನು ಠೇವಣಿ ಮಾಡುವ ಅಗತ್ಯವಿದೆ ಎಂದು ವ್ಯಾಖ್ಯಾನಿಸುವ ಸಾಧ್ಯತೆಯಿದೆ. ಉಲ್ಲಂಘನೆಗಳಿಗೆ ಕಠಿಣ ದಂಡಗಳನ್ನು ಸಹ ಮಸೂದೆ ಪ್ರಸ್ತಾಪಿಸುತ್ತದೆ.

ಆನ್ಲೈನ್ ಗೇಮಿಂಗ್‌ಗೆ ಜೈಲು ಶಿಕ್ಷೆ: ಆನ್‌ಲೈನ್ ಮನಿ ಗೇಮ್‌ಗಳನ್ನು ನೀಡುವು ದರಿಂದ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಕೋಟಿಯವರೆಗೆ ದಂಡ ವಿಧಿಸಬಹುದು. ಆದರೆ ಅಂತಹ ಆಟಗಳನ್ನು ಜಾಹೀರಾತು ಮಾಡಿದರೆ ಎರಡು ವರ್ಷಗಳ ವರೆಗೆ ಜೈಲು ಶಿಕ್ಷೆ ಮತ್ತು 50 ಲಕ್ಷದವರೆಗೆ ದಂಡ ವಿಧಿಸಬಹುದು. ಆನ್‌ಲೈನ್ ಮನಿ ಗೇಮಿಂಗ್ ಪ್ಲಾಟ್‌ಫಾರ್ಮ್ ಗಳೊಂದಿಗಿನ ಹಣಕಾಸಿನ ವಹಿವಾಟುಗಳು ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು 1 ಕೋಟಿಯ ವರೆಗೆ ದಂಡ ವಿಧಿಸಬಹುದು.

ಆರ್. ಅಶ್ವತ್‌ರಾವ್ ಕದಂ ನಿಧನ

ಮೈಸೂರು, ಆ.20– ಮೈಸೂರು ಗಾಯತ್ರಿಪುರಂ ನಿವಾಸಿ ಆರ್. ಅಶ್ವತ್‌ರಾವ್ ಕದಂ (61) ಇಂದು ನಿಧನರಾದರು. ಇವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರು ಮಿತ್ರ ಬುಧವಾರ 20 ಆಗಸ್ಟ್ 2025

ನೈಪುಣ್ಯದಲ್ಲಿ ಸಂಭ್ರಮದ ಶ್ರೀಕೃಷ್ಣ ಜನ್ಮಾಷ್ಟಮಿ

ಕೃಷ್ಣನ ವೇಷಧಾರಿ ಚಿಣ್ಣರ ಆಕರ್ಷಕ ನೃತ್ಯ ಪ್ರದರ್ಶನ



ನೈಪುಣ್ಯ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮಕ್ಕಳು ನೃತ್ಯ ಪ್ರದರ್ಶಿಸಿದರು.



ಮೈಸೂರು, ಆ.19(ಎಂಕೆ)– ಪುಟಾಣಿ ಶ್ರೀ ಕೃಷ್ಣನ ಅವತಾರದಲ್ಲಿ ಕುಣಿದು ಕುಪ್ಪಳಿಸಿದ ಚಿಣ್ಣರು... ಬೆಣ್ಣೆ ತಿಂದು ಸಂಭ್ರಮಿಸಿದರು...!

ಮೈಸೂರು ಕನಕದಾಸನಗರದಲ್ಲಿರುವ ನೈಪುಣ್ಯ ಶಾಲೆ ಆವರಣದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಂಭ್ರಮ ಮನೆ ಮಾಡಿತ್ತು. ಬಾಲ ಕೃಷ್ಣ ಮತ್ತು ರಾಧೆಯ ಅವತಾರದಲ್ಲಿ ನೃತ್ಯ ಪ್ರದರ್ಶನ ನೀಡಿದ ಪುಟಾಣಿ ಮಕ್ಕಳು ಶ್ರೀ ಕೃಷ್ಣ ಬಾಲಲೀಲೆಗಳನ್ನು ಅನಾವರಣಗೊಳಿಸಿದರು.

ಮಕ್ಕಳೊಂದಿಗೆ ಪೋಷಕರು ಭಾಗವಹಿಸಿ ನೃತ್ಯ ಪ್ರದರ್ಶನ ನೀಡುವ ಮೂಲಕ ಬಹುಮಾನಗಳನ್ನು ಗೆದ್ದು ಸಂಭ್ರಮಿಸಿದರು. ಶ್ರೀ ಕೃಷ್ಣ ಕುರಿತಾದ ಹತ್ತಾರು ಜನಪ್ರಿಯ ಹಾಡುಗಳಿಗೆ ಹೆಜ್ಜೆ ಹಾಕಿದ ಮಕ್ಕಳು, ನೆರೆದಿದ್ದವರಿಂದ ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರೆ, ಮಕ್ಕಳೊಂದಿಗೆ ಮಕ್ಕಳಾದ ಪೋಷಕರು ಕುಣಿದು ಕುಪ್ಪಳಿಸಿದರು. ಈ ವೇಳೆ ಶಾಲೆಯ ಆಡಳಿತ ಮಂಡಳಿ ವತಿಯಿಂದ ವಿಜೇತರಿಗೆ ಆಕರ್ಷಕ ಬಹುಮಾನ ನೀಡಿ, ಅಭಿನಂದಿಸಲಾಯಿತು.

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಸಂತಸದ ಕೃಷ್ಣ ಜನ್ಮಾಷ್ಟಮಿ



ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಮೈಸೂರು,ಆ.19–ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಭಗವಾನ್ ಶ್ರೀ ಕೃಷ್ಣ ಹಾಗೂ ದಿವ್ಯ ತ್ರಯರಿಗೆ ಶ್ರೀರಾಮಕೃಷ್ಣ ಆಶ್ರಮದ ಸ್ವಾಮೀಜಿ ಸ್ವಾಮಿ ಸರ್ವಜಯಾನಂದ ಅವರು ದೀಪ ಬೆಳಗಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಶಿಕ್ಷಕರ ಮಾರ್ಗದರ್ಶನದಲ್ಲಿ ನರ್ಸರಿ ಮಕ್ಕಳು ಭಗವದ್ಗೀತೆ ಶ್ಲೋಕಗಳನ್ನು ಸುಮಧುರವಾಗಿ ಪಠಣ ಮಾಡಿದರು. ಶ್ರೀ ಕೃಷ್ಣನ ಕುರಿತಾದ ಸುಮಧುರವಾದ ಗೀತೆಯನ್ನು ಹಾಡಿದರು. ಅನಂತರ ಎಲ್ಲಾ ಮಕ್ಕಳು ಶ್ರೀಕೃಷ್ಣ ಲೀಲೆಯನ್ನು ಬಣ್ಣಿಸುವ ಹಾಡುಗಳಿಗೆ ನರ್ತಿಸಿದರು. ರಾಧಾ ಕೃಷ್ಣರ ವೇಷವನ್ನು ಧರಿಸಿದ ಮಕ್ಕಳು ತೂಗುವೆ ಕೃಷ್ಣ ತೂಗುವೆ ರಂಗನಾ ಹಾಡನ್ನು ಆಲಿಸುತ್ತಾ ಜೋ.... ಜೋ..... ಕೃಷ್ಣ ಎಂದು ಹೇಳುತ್ತಾ ತೊಟ್ಟಿಲ ತೂಗಿ ಸಂಭ್ರಮಿಸಿದರು.

ಹಾಗೆಯೇ ಪುಟಾಣಿಗಳು ತಮ್ಮ ಮುತ್ತಿನ ನುಡಿಯ ಮೂಲಕ ಜನ್ಮಾಷ್ಟಮಿಯ ವಿಶೇಷತೆಯನ್ನು ಕುರಿತು ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಸ್ವಾಮಿ ಸರ್ವಜಯಾನಂದ ಮಾತನಾಡಿ, ಭಗವಂತನ ನಾಮ ಸ್ಮರಣೆ ಹಾಗೂ ಸಂಕೀರ್ತನೆಗಳನ್ನು ಹಾಡುವುದರಿಂದ ನಮ್ಮ ಸಂಸಾರದ ಕಷ್ಟಗಳು ದೂರವಾಗುತ್ತವೆ. ಭಗವಂತನು ಧರ್ಮಕ್ಕೆ ನೆಲೆ ಸಿಗದಂತಾದಾಗ ಧರ್ಮದ ಉಳಿವಿಗಾಗಿ ನಾನಾ ಅವತಾರವನ್ನು ಎತ್ತುತ್ತಾನೆ. ಅವನ ಲೀಲೆಯನ್ನು ಎಷ್ಟು ಹೇಳಿದರು ಸಾಲದು ಎಂದು ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿರ್ವಾಹಕ ಅಧಿಕಾರಿ ಜಿ.ಚಂದ್ರಶೇಖರ್, ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ, ಸಂಘದ ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು, ಖಜಾಂಚಿ ಹೆಚ್.ಜಿ. ರಮೇಶ್ ಇತರರು ಉಪಸ್ಥಿತರಿದ್ದರು.

ಆ.30, ಮೈಸೂರಲ್ಲಿ ಉದ್ಯೋಗ ಮೇಳ

ಮೈಸೂರು, ಆ. 19–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉದ್ಯೋಗ ಘಟಕ ಹಾಗೂ ಆಂತರಿಕ ಗುಣಮಟ್ಟ ಆಶ್ವಾಸನಾ ಕೇಂದ್ರದ ವತಿಯಿಂದ ಕರಾಮುವಿವಿ ವಿದ್ಯಾರ್ಥಿಗಳು ಹಾಗೂ ಇತರೆ ವಿವಿಯ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ, ಡಿಪ್ಲೊಮಾ ಹಾಗೂ ಯಾವುದೇ ಸ್ನಾತಕ ಮತ್ತು ಸ್ನಾತಕೋತ್ತರ ಪಡೆದಿರುವ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡುವ ಸಲುವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಯೋಗದೊಂದಿಗೆ ಆ.30ರಂದು ವಿವಿ ಆವರಣದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಆಸಕ್ತರು ಶೈಕ್ಷಣಿಕ ದಾಖಲೆಗಳು, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಆಧಾರ್ ಕಾರ್ಡ್ ಮತ್ತು ಇನ್ನಿತರ ದಾಖಲೆಗಳನ್ನು ತರಬೇಕೆಂದು ಕರಾಮುವಿ ಕುಲಸಚಿವ ಪ್ರೊ.ನವೀನ್‌ಕುಮಾರ್ ತಿಳಿಸಿದ್ದಾರೆ.

ಯುವ ಸಮೂಹ ಹೊರತಾಗಿ ದೇಶಕ್ಕೆ ಭವಿಷ್ಯವೇ ಇಲ್ಲ

ಅಂತರರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ಒಕ್ಕೊರಲ ಅಭಿಮತ



ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಮಂಗಳವಾರ ಅಂತರರಾಷ್ಟ್ರೀಯ ಯುವ ದಿನ ಆಚರಿಸಲಾಯಿತು.

ಮೈಸೂರು, ಆ.19(ಎಂಕೆ)– ಯುವ ಶಕ್ತಿಯಿಂದ ಮಾತ್ರವೇ ದೇಶದ ಪ್ರಗತಿ ಸಾಧ್ಯ. ಸಮಾಜದ ಅಭಿವೃದ್ಧಿಯಲ್ಲಿ ಯುವ ಸಮೂಹ ಭಾಗಿಯಾಗದಿದ್ದರೆ, ದೇಶಕ್ಕೆ ಭವಿಷ್ಯವೇ ಇಲ್ಲವೆಂಬ ಸಂದೇಶ ಅಂತರರಾಷ್ಟ್ರೀಯ ಯುವ ದಿನಾಚರಣೆಯಲ್ಲಿ ವ್ಯಕ್ತವಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ (ಗ್ರಾಮ್), ಹ್ಯಾನ್ಸ್ ಸೀಡೆಲ್ ಫೌಂಡೇಶನ್ ಹಾಗೂ ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಯುವ ಕಾರ್ಯಕ್ರಮದಲ್ಲಿ ಭಾರತದ ಅಭಿವೃದ್ಧಿಗೆ ಯುವ ಸಂಪನ್ಮೂಲ ಅವಶ್ಯವೆಂಬುದನ್ನು ಮನವರಿಕೆ ಮಾಡಿಕೊಡಲಾಯಿತು.

ಕಾರ್ಯಕ್ರಮ ಉದ್ಘಾಟನೆ ಬಳಿಕ 'ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಅದಕ್ಕೂ ಮೀರಿದ ಸ್ಥಳೀಯ ಯುವ ಕಾರ್ಯ ಚಟುವಟಿಕೆ(local youth actions for the SDG(sustainable development goals)s and Beyond)ಕುರಿತು ನಡೆದ ಸಂವಾದದಲ್ಲಿ ದೇಶದ ಯುವ ಸಮೂಹ ಸಾಮಾಜಿಕವಾಗಿ ಭಾಗವಹಿಸುವಿಕೆ ಅತ್ಯಂತ ಅವಶ್ಯವಾಗಿದ್ದು, ಯುವ ಶಕ್ತಿಯಿಂದಲೇ ದೇಶದ ಪ್ರಗತಿ ಸಾಧ್ಯ ಎನ್ನಲಾಯಿತು.

ಯುವ ಉದ್ಯಮಿ ಹಾಗೂ ಸಂಕಲ್ಪ ಗ್ರೂಪ್ ನಿರ್ದೇಶಕ ನಿಖಿಲ್ ಜಗದೀಶ್ ಮಾತನಾಡಿ, ಭಾರತ ಒಂದು ಯುವ ಪೀಳಿಗೆಯ ಭರವಸೆ ದೇಶವಾಗಿದ್ದು, ಯುವ ಸಮೂಹವನ್ನು ವ್ಯವಸ್ಥಿತವಾಗಿ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಂಡು ಅಭಿವೃದ್ಧಿ ಹಾಗೂ ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಗ್ರಾಮ್ ಎಕ್ಸಿಕ್ಯೂಟಿವ್ ಡೈರೆಕ್ಟರ್ ಡಾ.ಬಸವರಾಜು ಆರ್.ಶ್ರೇಷ್ಠ ಮಾತನಾಡಿ, ಭಾರತಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಸ್ವಾಮಿ ವಿವೇಕಾನಂದರು, ನನಗೆ ನೂರು ಮಂದಿ ದೇಶಪ್ರೇಮಿ ಯುವಕರನ್ನು ಕೊಡಿ, ಭಾರತವನ್ನು ನವಭಾರತವನ್ನಾಗಿ ನಿರ್ಮಾಣ ಮಾಡುತ್ತೇನೆ ಎಂದಿದ್ದರು. ಅವರ ಮಾತಿನಿಂದಲೇ ಯುವ ಶಕ್ತಿಗೆ ಇರುವ ಮಹತ್ವ ಎಂತಹದ್ದು ಎಂಬುದು ತಿಳಿಯಲಿದೆ. ಹಾಗೆಯೇ ದೇಶದ ಸಂವಿಧಾನದಿಂದ ನಾವಿಂದು ಒಟ್ಟಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ ಎಂದರು.

ಸಮಾಜದ ಅಭಿವೃದ್ಧಿಯಲ್ಲಿ ದೇಶದ ಯುವಕ–ಯುವತಿಯರು ಭಾಗವಹಿಸದಿದ್ದರೆ, ಅಂತಹ ದೇಶಕ್ಕೆ ಭವಿಷ್ಯವೇ ಇರುವುದಿಲ್ಲ. ಉತ್ತರ ಕೊರಿಯಾ, ಚೀನಾದಂತಹ ಕೆಲ ದೇಶಗಳಲ್ಲಿ ಸೇನೆಯಲ್ಲಿ ಕಡ್ಡಾಯವಾಗಿ ಕೆಲಸ ಮಾಡಬೇಕೆನ್ನುವ ನಿಯಮವಿದೆ. ಆದರೆ, ಭಾರತದಲ್ಲಿ ಅಂತಹ ನಿಯಮ ಇಲ್ಲದಿದ್ದರೂ ಸ್ವತಃ ಆಸಕ್ತಿಯಿಂದ ಸೇನೆಗೆ ಸೇರಿದವರಿಂದ ಕೂಡಿರುವ ದೊಡ್ಡ ಸೇನೆ ಇರುವುದು ಸಮಾಜದಲ್ಲಿ ಭಾಗವಹಿಸುವಿಕೆಗೆ ಉದಾಹರಣೆಯಾಗಿದೆ. ಈ ದೇಶ ಹುಟ್ಟಿರುವುದೇ ಸಾಮಾಜಿಕವಾಗಿ ಭಾಗವಹಿಸುವಿಕೆಯಿಂದ ಎಂದು ತಿಳಿಸಿದರು.

ಪತ್ರಕರ್ತ ಕೀರ್ತಿ ಕೊಲ್ಲರ್ ಮಾತನಾಡಿ, ಭಾರತದ ಭವಿಷ್ಯವೇ ಯುವ ಸಮೂಹವಾಗಿದ್ದು, ತಮ್ಮ ಜವಾಬ್ದಾರಿಗಳನ್ನು ಅರಿತು ಮುನ್ನಡೆಯುವುದನ್ನು ಯುವಕ–ಯುವತಿಯರು ಕಲಿಯಬೇಕಿದೆ ಎಂದು ತಿಳಿಸಿದರೆ, ಹ್ಯಾನ್ಸ್ ಸೀಡೆಲ್ ಫೌಂಡೇಶನ್ ಹಣಕಾಸು ವಿಭಾಗದ ಮುಖ್ಯಸ್ಥರಾದ ಉಷಾ ಸುಬ್ರಹ್ಮಣಿ, ದೇಶದ ಅಭಿವೃದ್ಧಿಯಲ್ಲಿ ತೊಡಕಾಗಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ತಿಳಿಸಿದರು. ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಕ್ಷ ವಿಭಾಗದ ಮುಖ್ಯಸ್ಥ ಡಾ.ಚಂದ್ರಮೌಳಿ, ಲಕ್ಷ್ಮಿ, ಪವನ್ ಮತ್ತಿತರರು ಉಪಸ್ಥಿತರಿದ್ದರು.

ಯುವ ಸಮೂಹಕ್ಕೆ ಸೂಕ್ತ ವೇದಿಕೆಗಳಿಲ್ಲ...!

"ದೇಶದಲ್ಲಿರುವ ಯುವ ಸಮೂಹದ ಶೇ.27ರಷ್ಟು ಮಂದಿಗೆ ಮಾತ್ರವೇ ಉನ್ನತ ವಿದ್ಯಾಭ್ಯಾಸಕ್ಕೆ ಅವಕಾಶ ದೊರೆತಿದ್ದು, ಉಳಿದ ಶೇ.63ರಷ್ಟು ಮಂದಿಗೆ ನಾನಾ ಕಾರಣಗಳಿಂದ ಉನ್ನತ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ದೇಶದ ಶೇ.100ರಷ್ಟು ಯುವ ಸಮೂಹದಲ್ಲಿ ಸಾಮಾಜಿಕವಾಗಿ ಶೇ.0.4ರಷ್ಟು ಮಂದಿ ಹಾಗೂ ರಾಜಕೀಯವಾಗಿ ಶೇ.1ರಷ್ಟು ಮಂದಿ ಭಾಗವಹಿಸುತ್ತಿದ್ದಾರೆ. ಉಳಿದ ಯುವ ಸಮೂಹಕ್ಕೆ ಸೂಕ್ತ ವೇದಿಕೆಗಳೇ ಸಿಗುತ್ತಿಲ್ಲ. ಹಾಗಾಗಿ ಯುವ ಸಮೂಹಕ್ಕೆ ಅಗತ್ಯವಿರುವ ವೇದಿಕೆಗಳನ್ನು ಸೃಷ್ಟಿ ಮಾಡಬೇಕಿದೆ.

–ಡಾ.ಬಸವರಾಜು ಆರ್.ಶ್ರೇಷ್ಠ, ಗ್ರಾಮ್ ಎಕ್ಸಿಕ್ಯೂಟಿವ್ ಡೈರೆಕ್ಟರ್

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡರಿಂದ ಗುದ್ದಲಿ ಪೂಜೆ



ಚಾಮರಾಜ ಕ್ಷೇತ್ರದ ವಾರ್ಡ್ ನಂ.25 ತಿಲಕ್‌ನಗರ ವ್ಯಾಪ್ತಿಯ ಕೈಲಾಸಪುರಂನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅನುದಾನದಲ್ಲಿ ಅಂದಾಜು 3 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು. ಈ ಕಾಮಗಾರಿಯಲ್ಲಿ ಕೈಲಾಸಪುರಂನ ಅಡ್ಡರಸ್ತೆಗಳಿಗೆ–ಒಳಚರಂಡಿ, ಮಳೆ ನೀರು ಚರಂಡಿ ಹಾಗೂ ಸ್ಲಾಬ್ ಅಳವಡಿಕೆ, ನೀರಿನ ಪೈಪ್‌ಲೈನ್ ಅಳವಡಿಕೆ, ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಮಾಡಲಾಗುವುದು. ದೇವರಾಜ ಬ್ಲಾಕ್ ಅಧ್ಯಕ್ಷ ಯು.ಎಸ್. ರಮೇಶ್, ಮಾಜಿ ಮೇಯರ್ ಅನಂತು, ಪಾಲಿಕೆ ಮಾಜಿ ಸದಸ್ಯರಾದ ಸುನಂದಕುಮಾರ್, ನಂದಕುಮಾರ್, ಜನತಾ ಬಜಾರ್ ನಿರ್ದೇಶಕ ಎನ್.ಮಂಜುನಾಥ್, ಆಶ್ರಯ ಸಮಿತಿ ಸದಸ್ಯರಾದ ಅನಂತ ನಾರಾಯಣ, ಮೊಹಮ್ಮದ್ ಇಬ್ರಾಹಿಂ, ವಾರ್ಡ್ ಅಧ್ಯಕ್ಷ ರಾಜಗಣೇಶ್, ಮುಖಂಡರಾದ ಶಿವಶಂಕರ್, ಎನ್.ಕೃಷ್ಣ, ದುರ್ಗೇಶ್, ಮಂಜುನಾಥ್, ಡಿ.ರಾಜ ರಾಜೇಂದ್ರ, ಧನು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು, ಅಧಿಕಾರಿಗಳು ಭಾಗವಹಿಸಿದ್ದರು.

ಮೆಟ್ರಿಕ್ ಪೂರ್ವ, ನಂತರ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.19–2025–26ನೇ ಸಾಲಿನಲ್ಲಿ ತಿ.ನರಸೀಪುರ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಮಾಜ ಕಲ್ಯಾಣ ಇಲಾಖಾ ವೆಬ್‌ಸೈಟ್ www.sw.kar.nic.inನಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

2025–26ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ https://ssp.postmatric.karnataka.gov.in/CA/ ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

2025–26ನೇ ಸಾಲಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ https://sssp.postmatric.karnataka.gov.in/ssppre 1ರಿಂದ 8ನೇ ತರಗತಿ ಹಾಗೂ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. 2025–26ನೇ ಸಾಲಿಗೆ ಪ್ರೋತ್ಸಾಹ ಧನಕ್ಕಾಗಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಮೆಟ್ರಿಕ್ ನಂತರದ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ತಿ.ನರಸೀಪುರ ತಾಲೂಕಿನ ಕಚೇರಿ ದೂ.: 08227–260672, 9480843180 ಸಂಪರ್ಕಿಸಬಹುದು.

ವರುಣಾರ್ಭಟಕ್ಕೆ ತತ್ತರಿಸಿದ ಮಹಾರಾಷ್ಟ್ರ: 6 ಮಂದಿ ಸಾವು

ನೂರಾರು ಮಂದಿ ನಿರಾಶ್ರಿತರು!



ಮುಂಬೈ, ಆ.19– ವರುಣನ ಅಬ್ಬರಕ್ಕೆ ಮಹಾರಾಷ್ಟ್ರ ರಾಜ್ಯ ತತ್ತರಿಸಿದೆ. ಕಳೆದ ಎರಡು ದಿನಗಳಿಂದ ಅನೇಕ ಜಿಲ್ಲೆಗಳಲ್ಲಿ ನಿರಂತರವಾಗಿ ಭಾರಿ ಮಳೆಯಾಗುತ್ತಿದ್ದು, 6 ಜನರು ಸಾವನ್ನಪ್ಪಿದ್ದು, ನೂರಾರು ಮಂದಿ ಮನೆ–ಮಠ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಮಂಗಳವಾರ ರಾಜಧಾನಿ ಮುಂಬೈಯಲ್ಲಿಯೂ ಧಾರಾಕಾರ ಮಳೆಯಾಗುತ್ತಿದ್ದು, ಜನಜೀವನ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ.

ವಿಪತ್ತು ನಿರ್ವಹಣಾ ಇಲಾಖೆಯೊಂದಿಗೆ ಪ್ರವಾಹ ಪರಿಸ್ಥಿತಿಯನ್ನು ಅವಲೋಕಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಮುಂಬೈ, ಥಾಣೆ, ರಾಯಗಡ, ರತ್ನಗಿರಿ ಮತ್ತು ಸಿಂಧುದುರ್ಗ ಜಿಲ್ಲೆಗಳಿಗೆ ಮುಂದಿನ 48 ಗಂಟೆಗಳು ನಿರ್ಣಾಯಕ ಎಂದು ಹೇಳಿದ್ದಾರೆ.

ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ: ಮುಂಬೈಯಲ್ಲಿ ಸುರಿದ ಮಳೆ ಇಂದು ಕೂಡಾ ಮುಂದುವರೆದಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಉಪನಗರ ರೈಲು ಸೇವೆಯ ಮೇಲೆ ಪರಿಣಾಮ ಬೀರಿದ್ದು, ಬೃಹನ್ ಮುಂಬೈ ಮುನ್ಸಿಪಲ್ ಕಾರ್ಪೊರೇಷನ್ (BMC) ಎಲ್ಲಾ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಿಗೆ ರಜೆ ಘೋಷಿಸಲಾಗಿದೆ.

ಬೆಳಗ್ಗೆ 11ರಿಂದ ಸಂಜೆ 5ರವರೆಗೆ ಕಾರ್ಯನಿರ್ವಹಿಸುವ ಬಾಂಬೆ ಹೈಕೋರ್ಟ್ ಭಾರಿ ಮಳೆಯಿಂದಾಗಿ 12.30ರವರೆಗೆ ಮಾತ್ರ ಕಾರ್ಯನಿರ್ವಹಿಸಿತು. ಮುಂಬೈ ಮತ್ತು ನೆರೆಯ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಇಂದು ಭಾರಿಯ ಹವಾಮಾನ ಇಲಾಖೆ 'ರೆಡ್ ಅಲರ್ಟ್' ಎಚ್ಚರಿಕೆ ಹಿನ್ನೆಲೆಯಲ್ಲಿ ಶಾಲೆಗಳು ಮತ್ತು ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ರೈಲು ಸೇವೆಯಲ್ಲಿ ವ್ಯತ್ಯಯ: ಉನ್ನತ ಶಿಕ್ಷಣ ನಿರ್ದೇಶನಾಲಯವು ಕೊಂಕಣ ಪ್ರದೇಶದ ಎಲ್ಲಾ ಕಾಲೇಜುಗಳಿಗೆ ರಜೆ ಘೋಷಿಸಿದ್ದು, ಸ್ಥಳೀಯ ರೈಲು ಸೇವೆಯಲ್ಲಿ ವ್ಯತ್ಯಯವಾಗಿದೆ. ಕೆಲವೆಡೆ ರಸ್ತೆ ಜಲಾವೃತವಾಗಿರುವುದರಿಂದ ಬೃಹನ್ ಮುಂಬೈ ಎಲೆಕ್ಟ್ರಿಕ್ ಸಪ್ಲೈ ಅಂಡ್ ಟ್ರಾನ್ಸ್‌ಪೋರ್ಟ್ (ಬೆಸ್ಟ್) ಸಂಸ್ಥೆಯ ಬಸ್ ಸೇವೆಗಳ ಮಾರ್ಗ ಬದಲಾಯಿಸಲಾಗಿದೆ.

ಭಾರಿ ಮಳೆ ನಂತರ ಹಳಿಗಳು ಮುಳುಗಿದ ಕಾರಣ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಮತ್ತು ಕುರ್ಲಾ ನಿಲ್ದಾಣಗಳ ನಡುವಿನ ಹಾರ್ಬರ್ ಮಾರ್ಗದಲ್ಲಿ ಕೆಲ ರೈಲು ಸೇವೆ ಸ್ಥಗಿತಗೊಳಿಸಲಾಗಿದೆ.

ಮುಂಬೈನ ಉಪನಗರದಲ್ಲಿರುವ ಕುರ್ಲಾದಿಂದ ಸುಮಾರು 350 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಕಚೇರಿ ತಿಳಿಸಿದೆ. ಮುಂಬೈನ ಹಲವಾರು ಭಾಗಗಳಲ್ಲಿ ಕಳೆದ 24 ಗಂಟೆಗಳಲ್ಲಿ 200 ಮಿ.ಮೀ ಗಿಂತ ಹೆಚ್ಚು ಮಳೆಯಾಗಿದೆ ಎಂದು IMD ತಿಳಿಸಿದೆ.

ಕಳೆದೆರಡು ದಿನಗಳಲ್ಲಿ ರಾಜ್ಯದಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ ಕನಿಷ್ಠ 6 ಮಂದಿ ಸಾವನ್ನಪ್ಪಿದ್ದಾರೆ. ನಾಂದೇಡ್ ಜಿಲ್ಲೆಯ ಪ್ರವಾಹಪೀಡಿತ ಗ್ರಾಮಗಳಿಂದ 290ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ.

ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ನಿಯಂತ್ರಿಸಲು ರೈತರ ಆಗ್ರಹ

ಮೂರ್ನಾಲ್ಕು ದಿನದಲ್ಲಿ ಸಮರ್ಪಕ ರಸಗೊಬ್ಬರ ಪೂರೈಸದಿದ್ದರೆ ಹೋರಾಟದ ಎಚ್ಚರಿಕೆ

ಮೈಸೂರು, ಆ.19(ಬಿಎಲ್‌ಯು)– ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟಕ್ಕೆ ನಿಯಂತ್ರಣ ಹೇರಿ, ಮೂರ್ನಾಲ್ಕು ದಿನದಲ್ಲಿ ರೈತರಿಗೆ ಸಮರ್ಪಕವಾಗಿ ಗೊಬ್ಬರ ಪೂರೈಸದಿದ್ದರೆ ತೀವ್ರ ರೀತಿಯ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ರಾಜ್ಯ ಸರ್ಕಾರವನ್ನು ಎಚ್ಚರಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಸಗೊಬ್ಬರ ದೊರೆಯದೆ ರೈತರು ಪರದಾಡುವ ಪರಿಸ್ಥಿತಿ ಎದುರಾಗಿದೆ. ಕಾಳಸಂತೆಯಲ್ಲಿ ಗೊಬ್ಬರ ಖರೀದಿ ಮಾಡಲು ಆರ್ಥಿಕ ಶಕ್ತಿ ಇಲ್ಲದ ರೈತರು ಕಂಗಾಲಾಗಿದ್ದಾರೆ ಎಂದು ಹೇಳಿದರು.

ಕರ್ನಾಟಕದಲ್ಲಿ ಯೂರಿಯಾ ಕೊರತೆ ಇದೆ. ನಮ್ಮ ಸಮಸ್ಯೆ ಪರಿಹಾರ ಮಾಡುವಂತೆ ಮನವಿ ಮಾಡಿದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡು ನಮ್ಮ ನೆರವಿಗೆ ಬರುತ್ತಿಲ್ಲ ಎಂದು ಬಡಗಲಪುರ ನಾಗೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರ, ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರ ಪರಸ್ಪರ ಆರೋಪ, ಪ್ರತ್ಯಾರೋಪ ಮಾಡುತ್ತಿವೆ. ಈ ಮೂಲಕ ತಮ್ಮ ಜವಾಬ್ದಾರಿಯನ್ನು ಎರಡು ಸರ್ಕಾರಗಳು ನಿರ್ವಹಣೆ ಮಾಡದೆ ಆಡಳಿತ ನಡೆಸಲು ಸಂಪೂರ್ಣವಾಗಿ ವಿಫಲವಾಗಿವೆ ಎಂದು ಬಡಗಲಪುರ ನಾಗೇಂದ್ರ ಆಪಾದಿಸಿದರು.



ಬಡಗಲಪುರ ನಾಗೇಂದ್ರ

ಸಮರ್ಪಕ ರಸಗೊಬ್ಬರ ಪೂರೈಸಲು ಇನ್ನು ಮೂರ್ನಾಲ್ಕು ದಿನ ಕಾದು ನೋಡುತ್ತೇವೆ. ನಮ್ಮ ಸಮಸ್ಯೆ ಪರಿಹಾರ ಆಗದಿದ್ದರೆ ತೀವ್ರ ರೀತಿಯ ಹೋರಾಟ ರೂಪಿಸುತ್ತೇವೆ ಎಂದು ಎಚ್ಚರಿಸಿದರು.

ಕಾಡಂಚಿನ ಗ್ರಾಮಗಳಲ್ಲಿ ಪ್ರಾಣಿಗಳು ಹಾಗೂ ಮಾನವ ಸಂಘರ್ಷ ಮಿತಿ ಮೀರಿದೆ. ಪ್ರಾಣಿಗಳ ಉಪಟಳ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಯಾವುದೇ ಪ್ರಯತ್ನ ಮಾಡುತ್ತಿಲ್ಲ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ದಸರಾ ಆನೆಗಳನ್ನು ಮಾತ್ರ ಸ್ವಾಗತಿಸುವುದಲ್ಲ, ಆನೆಗಳಿಂದ ರೈತರಿಗೆ ಆಗುತ್ತಿರುವ ತೊಂದರೆಯನ್ನು ಕೂಡ ನಿವಾರಣೆ ಮಾಡಬೇಕೆಂದು ಆಗ್ರಹಿಸಿದರು.

ಈಶ್ವರ ಖಂಡ್ರೆ ಅವರು ಒಂದು ದಿನ ಮೈಸೂರಿನಲ್ಲಿ ವಾಸ್ತವ್ಯ ಹೂಡಿ, ಇಲ್ಲಿನ ಸಮಸ್ಯೆ ಪರಿಹಾರ ಮಾಡಲು ಮುಂದಾಗಬೇಕು ಎಂದು ಬಡಗಲಪುರ ನಾಗೇಂದ್ರ ಒತ್ತಾಯಿಸಿದರು.

ರೈತ ಸಂಘದ ಮಹಿಳಾ ಪ್ರಧಾನ ಕಾರ್ಯದರ್ಶಿ ನೇತ್ರಾವತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಕಾರ್ಯದರ್ಶಿ ನಾಗನಹಳ್ಳಿ ವಿಜೇಂದ್ರ, ಮೈಸೂರು ತಾಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್, ಮಂಡಕಳ್ಳಿ ಮಹೇಶ್, ಕಾರ್ಯದರ್ಶಿ ಮಹೇಶ್, ಚಂದ್ರಶೇಖರ್, ಮೈದುನಹಳ್ಳಿ ಮಹೇಶ್, ವೆಂಕಟೇಶ್‌ಗೌಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ದೇಶ – ವಿದೇಶ

ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್‌ಗೆ ಕೊಲೆ ಬೆದರಿಕೆ ಹಾಕಿದ್ದವನಿಗೆ 14 ವಾರ ಜೈಲು



ಲಂಡನ್: ಕಳೆದ ವರ್ಷ ಜೂನ್‌ನಲ್ಲಿ ಬ್ರಿಟಿಷ್ ಪ್ರಧಾನಿಯಾಗಿದ್ದ ರಿಷಿ ಸುನಕ್‌ಗೆ ಜನಾಂಗೀಯ ಕೊಲೆ ಬೆದರಿಕೆ ಇಮೇಲ್ ಕಳುಹಿಸಿದ್ದ 21 ವರ್ಷದ ವ್ಯಕ್ತಿಗೆ 14 ವಾರಗಳ ಕಾಲ ಜೈಲು ಶಿಕ್ಷೆ ಮತ್ತು ಎರಡು ವರ್ಷ ನಿರ್ಬಂಧ ವಿಧಿಸಲಾಗಿದೆ. ಯಾರ್ಕ್‌ಷೈರ್‌ನ ರಿಚ್‌ಮಂಡ್ ಮತ್ತು ನಾರ್ತಲರ್ಟನ್‌ನ ಸಂಸದ ಸುನಕ್ ಅವರ ಇಮೇಲ್ ವಿಳಾಸಕ್ಕೆ ಎರಡು ಬೆದರಿಕೆ ಮತ್ತು ಆಕ್ಷೇಪಾರ್ಹ ಇಮೇಲ್‌ಗಳನ್ನು ಕಳುಹಿಸಿರುವುದಾಗಿ ವಾಯುವ್ಯ ಇಂಗ್ಲೆಂಡ್‌ನ ಮರ್ಸಿಸೈಡ್‌ನಲ್ಲಿರುವ ಬಿರ್ಕೆನ್‌ಹೆಡ್‌ನ ಲಿಯಾಮ್ ಶಾ ತಪ್ಪೊಪ್ಪಿಕೊಂಡಿದ್ದಾರೆ ಎಂದು ಬ್ರಿಟನ್‌ನ ಕ್ರೌನ್ ಪ್ರಾಸಿಕ್ಯೂಷನ್ ಸರ್ವಿಸ್ ತಿಳಿಸಿದೆ. ಭಾರತೀಯ ಮೂಲದ ಬ್ರಿಟಿಷ್ ನಾಯಕನ ವೈಯಕ್ತಿಕ ಸಹಾಯಕರು ಇಮೇಲ್‌ಗಳನ್ನು ಗುರುತಿಸಿ ಪೊಲೀಸರಿಗೆ ದೂರು ನೀಡಿದ್ದರು.


ಅತ್ಯಂತ ಪ್ರಮುಖ ಹುದ್ದೆಯಲ್ಲಿರುವ ವ್ಯಕ್ತಿಗೆ ಜನಾಂಗೀಯ ಮತ್ತು ಬೆದರಿಕೆ ಸಂದೇಶಗಳನ್ನು ಕಳುಹಿಸಿದ ಲಿಯಾಮ್ ಶಾಗೆ ಶಿಕ್ಷೆ ವಿಧಿಸಲಾಗಿದೆ ಎಂದು ಸಿಪಿಎಸ್ ಮರ್ಸಿಚೆಷೈರ್‌ನ ಹಿರಿಯ ಕ್ರೌನ್ ಪ್ರಾಸಿಕ್ಯೂಟರ್ ಮ್ಯಾಥ್ಯೂ ಡಿಕ್ಸನ್ ಹೇಳಿದ್ದಾರೆ.

ಗಣೇಶ ಮೂರ್ತಿ ಸಾಗಿಸುವಾಗ ವಿದ್ಯುತ್ ತಂತಿ ತಗುಲಿ 2 ಸಾವು



ಹೈದರಾಬಾದ್: ಹೈದರಾಬಾದ್‌ನ ಬಂಡ್ಲಗುಡದಲ್ಲಿ ಗಣೇಶ ಮೂರ್ತಿಯನ್ನು ವಾಹನದಲ್ಲಿ ಪ್ರತಿಷ್ಠಾಪನೆಗೆಂದು ಸಾಗಿಸುವಾಗ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ಇಬ್ಬರು ಮೃತಪಟ್ಟಿರುವ ಘಟನೆ ಸೋಮವಾರ ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ಸಂಭವಿಸಿದೆ. ನಗರದ ಹೋಟೆಲ್‌ವೊಂದರ ಬಳಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲೆಂದು ಸಾಗಿಸುವಾಗ ಆಕಸ್ಮಿಕವಾಗಿ ನಡೆದಿದೆ. ಹೈಟೆನ್ಷನ್ ವಿದ್ಯುತ್ ತಂತಿಗೆ ತಗುಲಿದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇಲ್ಲಿನ ರಾಮನಾಥಪುರದ ಗೋಖಲೆ ನಗರದಲ್ಲಿ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಭಾನುವಾರ ರಾತ್ರಿ ನಡೆಯುತ್ತಿದ್ದ ಕೃಷ್ಣನ ಮೂರ್ತಿಯ ಮೆರವಣಿಗೆಯಲ್ಲಿ ರಥವು ವಿದ್ಯುತ್ ತಂತಿಗೆ ತಗುಲಿದ ಪರಿಣಾಮ ವಿದ್ಯುತ್ ಪ್ರವಹಿಸಿ ಆರು ಮಂದಿ ಸಾವಿಗೀಡಾಗಿದ್ದಾರೆ. ನಾಲ್ಕು ಮಂದಿಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಸುಮಾರು 10 ಮಂದಿ ರಥವನ್ನು ಎಳೆಯುತ್ತಿದ್ದರು. ರಸ್ತೆ ಮೇಲೆ ಹಾದುಹೋಗಿದ್ದ ವಿದ್ಯುತ್ ತಂತಿಗೆ ರಥ ತಾಗಿದ್ದರಿಂದ ವಿದ್ಯುತ್ ಪ್ರವಹಿಸಿತ್ತು. ವಿದ್ಯುತ್ ಆಘಾತದಿಂದ ಸ್ಥಳದಲ್ಲೇ ಐವರು ಮೃತಪಟ್ಟರೆ, ಒಬ್ಬರು ಆಸ್ಪತ್ರೆಯಲ್ಲಿ ಸಾವಿಗೀಡಾದರು.

ಮೂರು ದಿನಗಳ ರಷ್ಯಾ ಪ್ರವಾಸ ಹೊರಟ ಕೇಂದ್ರ ಸಚಿವ ಜೈಶಂಕರ್



ನವದೆಹಲಿ: ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಮಂಗಳವಾರ ಮಾಸ್ಕೋಗೆ 3 ದಿನಗಳ ಭೇಟಿಗೆ ತೆರಳಿದ್ದಾರೆ. ಭೇಟಿಯಲ್ಲಿ ಭಾರತ–ರಷ್ಯಾ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ಉದ್ದೇಶಿಸಲಾಗಿದೆ. ಭಾರತ, ರಷ್ಯಾದಿಂದ ಕಚ್ಚಾ ತೈಲ ಖರೀದಿಗೆ ಶೇ.25ರಷ್ಟು ಹೆಚ್ಚುವರಿ ದಂಡ ವನ್ನು ವಿಧಿಸುವ ಮೂಲಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲಿನ ಸುಂಕವನ್ನು ಶೇ.50ಕ್ಕೆ ಏರಿಸಿದ್ದರು. ಇದರ ನಂತರ ಭಾರತ–ಅಮೆರಿಕ ಸಂಬಂಧದಲ್ಲಿ ಉಂಟಾದ ಒತ್ತಡದ ಹಿನ್ನೆಲೆಯಲ್ಲಿ ಈ ಭೇಟಿ ಮಹತ್ವದ್ದಾಗಿದೆ. ಬುಧವಾರ ನಡೆಯಲಿರುವ 26ನೇ ಭಾರತ–ರಷ್ಯಾ ಅಂತರ ಸರ್ಕಾರ ಆಯೋಗದ ಸಭೆಯ ಜಂಟಿ ಅಧ್ಯಕ್ಷತೆಯನ್ನು ಜೈಶಂಕರ್ ವಹಿಸಲಿದ್ದಾರೆ. ರಷ್ಯಾದ ಮೊದಲ ಉಪಪ್ರಧಾನಿ ಡೆನಿಸ್ ಮಂಟುರೊ ಜಂಟಿ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ರಷ್ಯಾ ಅಧ್ಯಕ್ಷ ಪುಟಿನ್ ಈ ವರ್ಷದ ಕೊನೆಯಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದು, ಅದನ್ನು ಈ ಸಭೆಯು ಸುಗಮಗೊಳಿಸುವ ನಿರೀಕ್ಷೆ ಇದೆ. ಉಕ್ರೇನ್‌ನಲ್ಲಿ ಶಾಂತಿಯ ಬಗ್ಗೆ ಟ್ರಂಪ್ ಆಡಳಿತದ ಕೈಗೊಂಡ ಉಪಕ್ರಮಗಳ ಬಗ್ಗೆ ಕೂಡ ಜೈಶಂಕರ್ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೋವ್ ಜತೆ ಸಭೆ ನಡೆಸುವ ಸಾಧ್ಯತೆಯಿದೆ.

ದಿಢೀರ್ ಪ್ರವಾಹ: ಕೊಚ್ಚಿ ಹೋದ ಸೇತುವೆ, ಅಂಗಡಿಗಳು



ಶಿಮ್ಲಾ: ಹಿಮಾಚಲಪ್ರದೇಶದ ಕುಲ್ಲು ಜಿಲ್ಲೆಯ ಕನಾನ್ ಗ್ರಾಮದಲ್ಲಿ ಸಂಭವಿಸಿದ ಮೇಘಸ್ಫೋಟದಿಂದಾಗಿ ಉಂಟಾದ ದಿಢೀರ್ ಪ್ರವಾಹದಲ್ಲಿ ಸೇತುವೆ ಹಾಗೂ ಮೂರು ಅಂಗಡಿಗಳು ಕೊಚ್ಚಿಹೋಗಿವೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹಲವೆಡೆ ಭೂಕುಸಿತ ವರದಿಯಾಗಿದೆ. ಮುಂಜಾಗ್ರತಾ ಕ್ರಮವಾಗಿ ಕುಲ್ಲು ಮತ್ತು ಬಂಜರ್ ಉಪವಿಭಾಗಗಳಲ್ಲಿ ಶಾಲೆಗಳು, ಕಾಲೇಜುಗಳು ಸೇರಿದಂತೆ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ. ಶಿಮ್ಲಾದ ರಾಮಚಂದ್ರ ಚೌಕ್ ಬಳಿಕ ಸೋಮವಾರ ತಡರಾತ್ರಿ ಭಾರಿ ಭೂಕುಸಿತ ಸಂಭವಿಸಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಆದರೆ ಕಟ್ಟಡಗಳಿಗೆ ಹಾನಿಯಾಗಿದೆ. ಛೋಟಾ ಶಿಮ್ಲಾದಲ್ಲೂ ಮರಗಳು ನೆಲಕ್ಕುರುಳಿವೆ. ಕುಲ್ಲು ಮತ್ತು ಬಂಜರ್ ಪ್ರದೇಶಗಳಲ್ಲಿ ಮೇಘಸ್ಫೋಟ, ದಿಢೀರ್ ಪ್ರವಾಹ ಹಾಗೂ ಭೂಕುಸಿತಗಳು ವರದಿಯಾಗಿವೆ. ಇದರಿಂದಾಗಿ ಹಲವೆಡೆ ಹಾನಿ ಉಂಟಾಗಿದ್ದು, ರಸ್ತೆ ಸಂಚಾರಕ್ಕೆ ತೊಡಕಾಗಿವೆ. ಜೂನ್ 20ರಂದು ಮುಂಗಾರು ಪ್ರಾರಂಭವಾದ ನಂತರ ಈವರೆಗೆ ಮಳೆ ಸಂಬಂಧಿತ ಅವಘಡಗಳಲ್ಲಿ 2,194 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಭಾರಿ ಮಳೆ: ಸಾವಿನ ಸಂಖ್ಯೆ ಮತ್ತಷ್ಟು ಏರಿಕೆ



ಪೇಶಾವರ್: ಪಾಕಿಸ್ತಾನದಲ್ಲಿ ಜೂನ್‌ನಿಂದ ಇದುವರೆಗೆ ಸುರಿದ ಭಾರಿ ಮಳೆ ಮತ್ತು ಪ್ರವಾಹದಿಂದಾಗಿ ಸಂಭವಿಸಿದ ಅವಘಡಗಳಲ್ಲಿ ಸಾವಿಗೀಡಾದವರ ಸಂಖ್ಯೆ ಕನಿಷ್ಠ 700ಕ್ಕೂ ಹೆಚ್ಚಿದ್ದು, ಕನಿಷ್ಠ 1000ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಆ.22ರವರೆಗೂ ಮಳೆಯ ಅಬ್ಬರ ಮುಂದುವರಿಯಲಿದೆ. ಇತ್ತೀಚಿನ ವರ್ಷಗಳಲ್ಲೇ ಇದು ಅತ್ಯಂತ ಹೆಚ್ಚು ಹಾನಿ ಉಂಟುಮಾಡಿದ ಮಳೆಗಾಲ. ಸೆಪ್ಟೆಂಬರ್‌ನಲ್ಲೂ ಮಳೆ ಸುರಿಯಲಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಶೇ 60ರಿಂದ 70ರಷ್ಟು ಹೆಚ್ಚು ಮಳೆಯಾಗಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವಕ್ತಾರ ತಯ್ಯಬ್ ಶಾಹ ತಿಳಿಸಿದ್ದಾರೆ. ಜೂನ್ 26ರ ನಂತರ ಮಳೆ ಹಾನಿಯಿಂದ 171 ಮಕ್ಕಳು, 94 ಮಕ್ಕಳು ಸೇರಿದಂತೆ 657 ಮಂದಿ ಸಾವಿಗೀಡಾಗಿದ್ದಾರೆ. ಖೈಬರ್ ಪಖ್ತುಂಕ್ವಾ ಪ್ರಾಂತ್ಯ ಅತೀ ಹೆಚ್ಚು ಹಾನಿ ಎದುರಿಸಿದ್ದು, 390 ಮಂದಿ ಸಾವಿಗೀಡಾಗಿದ್ದಾರೆ. ಪಂಜಾಬ್ ಪ್ರಾಂತ್ಯದಲ್ಲಿ 164 ಮಂದಿ ಸಾವಿಗೀಡಾಗಿದ್ದಾರೆ. ಖೈಬರ್ ಪಖ್ತುಂಕ್ವಾದ ಬುನೇರ್ ಮತ್ತು ಶಾಂಗ್ಲಾ ಜಿಲ್ಲೆಗಳಲ್ಲಿ 150 ಮಂದಿ ನಾಪತ್ತೆಯಾಗಿದ್ದು, ಅಧಿಕಾರಿಗಳ ಪ್ರಕಾರ ಬುನೇರ್‌ನಲ್ಲಿ ಮದುವೆ ತಯಾರಿಯಲ್ಲಿದ್ದ ಒಂದೇ ಕುಟುಂಬದ 21 ಮಂದಿ ಸೇರಿ 81 ಮಂದಿ ಪ್ರವಾಹಕ್ಕೆ ಸಿಲುಕಿ ಸಾವಿಗೀಡಾಗಿದ್ದಾರೆ.

ಮಡಿಕೇರಿ ಪೊಲೀಸ್ ವಸತಿ ಗೃಹಗಳಲ್ಲಿ ಸರಣಿ ಕಳವು ಪ್ರಕರಣ ಭೇದಿಸಿದ ಪೊಲೀಸರು

ಇಬ್ಬರು ಅಂತರರಾಜ್ಯ ಕಳ್ಳರ ಬಂಧನ

ಉಳಿದ ಆರೋಪಿಗಳ ಸೆರೆಗೆ ಶೋಧ, ಬಂಧಿತರಿಂದ ನಗದು, ಮೊಬೈಲ್‌ಗಳು ವಶ




ಮನೀಶ್ ಭಗೇಲ್ ಸುರೇಶ್ ಸೆಂಗಾರ್

ಆರೋಪಿಗಳು ದೊಡ್ಡ ಮಟ್ಟದ ಕಳವು ಕೃತ್ಯ ಎಸಗಿದ ಬಳಿಕ ತಮ್ಮ ಗ್ರಾಮಕ್ಕೆ ತೆರಳಿ ಅಲ್ಲಿ ಬಯಲಿನಲ್ಲಿರುವ ಗ್ರಾಮ ದೇವತೆಗೆ ಎರಡು ಕುರಿಗಳ ಹರಕೆ ನೀಡುತ್ತಿದ್ದರು. ಅಪರಾಧ ಎಸಗಿ ಪೊಲೀಸರಿಂದ ಬಂಧನಕ್ಕೆ ಒಳಗಾದ ಬಳಿಕ ಜಾಮೀನಿನ ಮೇಲೆ ಹೊರ ಬಂದು ನ್ಯಾಯಾಲಯಕ್ಕೆ ಹಾಜರಾಗದೆ ತಲೆ ಮರೆಸಿಕೊಳ್ಳುತ್ತಿದ್ದರು. ಕಳವು ಪ್ರಕರಣವನ್ನು ತಮ್ಮ ವೃತ್ತಿಯ್ನಾಗಿಸಿಕೊಂಡಿರುವ ಕುರಿತು ಶಂಕೆ ಇದ್ದು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ಬಗ್ಗೆ ರಾಜ್ಯ ಮತ್ತು ಹೊರ ರಾಜ್ಯದ ಪೊಲೀಸ್ ಠಾಣೆಗಳಿಗೂ ಪತ್ರ ಬರೆದು ಸಮಗ್ರ ಮಾಹಿತಿ ಪಡೆಯಲಾಗುತ್ತದೆ. ಅತ್ಯಂತ ಸ್ಪಷ್ಟವಾಗಿ ತನಿಖೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುತ್ತದೆ. –ಕೆ.ರಾಮರಾಜನ್, ಕೊಡಗು ಎಸ್.ಪಿ

ಮಡಿಕೇರಿ, ಆ.19– ಪೊಲೀಸ್ ವಸತಿ ಸಮುಚ್ಚಯದಲ್ಲಿ ವಸತಿ ಗೃಹಗಳ ಬಾಗಿಲು ಮುರಿದು ನಗದು ಮತ್ತು ಚಿನ್ನಾಭರಣ ಕಳವು ಮಾಡಿದ್ದ ಮಧ್ಯ ಪ್ರದೇಶ ಮೂಲದ ಇಬ್ಬರು ಅಂತರರಾಜ್ಯ ಕಳ್ಳರನ್ನು ಕೊಡಗು ಪೊಲೀಸರು ಬಂಧಿಸಿದ್ದಾರೆ.

ಮಧ್ಯ ಪ್ರದೇಶದ ಧಾರ್ ಜಿಲ್ಲೆಯ ಸುರೇಶ್ ಸೆಂಗಾರ್(23) ಮನೀಶ್ ಭಗೇಲ್(27) ಬಂಧಿತ ಕಳ್ಳರು. 50,480 ರೂ. ನಗದು, 9 ಮೊಬೈಲ್ ಫೋನ್‌ಗಳು, 1 ಬೋಲ್ಟ್ ಕಟ್ಟರ್ ಉಪಕರಣವನ್ನು ವಶಕ್ಕೆ ಪಡೆಯಲಾಗಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಇತರ ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಘಟನೆ ಹಿನ್ನೆಲೆ: ಜೂನ್ 17ರ ಮಧ್ಯ ರಾತ್ರಿ 2.30ರ ಸಮಯದಲ್ಲಿ ನಗರದ ಪೊಲೀಸ್ ವಸತಿ ಗೃಹಕ್ಕೆ ಒಂದು ಬೈಕ್‌ನಲ್ಲಿ ಆಗಮಿಸಿದ್ದ 3 ಮಂದಿ ಒಟ್ಟು 8 ವಸತಿ ಗೃಹಗಳ ಬಾಗಿಲು ಮೀಟಿ ರೂ.95 ಸಾವಿರ ನಗದು ಮತ್ತು 5.5 ಗ್ರಾಂ ಚಿನ್ನಾಭರಣಗಳನ್ನು ಕಳವು ಮಾಡಿದ್ದರು. ಈ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ 3 ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಪೊಲೀಸರ ವಸತಿ ಗೃಹದಲ್ಲೇ ಕಳ್ಳತನ ನಡೆದಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗಳು ನಡೆದು ಪೊಲೀಸರಿಗೆ ರಕ್ಷಣೆ ಇಲ್ಲವೇ ಎಂಬ ಪ್ರಶ್ನೆ ಎದ್ದಿತ್ತು. ಈ ಹಿನ್ನೆಲೆಯಲ್ಲಿ ಸಮಾಜಕ್ಕೆ ಪೊಲೀಸ್ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಸಂದೇಶ ನೀಡಲು ಖುದ್ದಾಗಿ ಪ್ರಕರಣದ ನೇತೃತ್ವದ ವಹಿಸಲಾಗಿತ್ತು ಎಂದು ಅವರು ವಿವರಿಸಿದರು.

ಸವಾಲು ಸ್ವೀಕರಿಸಿದ ಪೊಲೀಸರು: ಪೊಲೀಸ್ ವಸತಿ ಗೃಹದ ಸಮೀಪವಿದ್ದ ಸಿ.ಸಿ ಕ್ಯಾಮರಾಗಳಲ್ಲಿ ಒಂದು ಬೈಕ್‌ನಲ್ಲಿ 3 ಮಂದಿ ಆಗಮಿಸಿದ್ದ ಅಸ್ಪಷ್ಟ ಚಿತ್ರಗಳು ಮಾತ್ರವೇ ಕಂಡು ಬಂದಿತ್ತು. ಇದರ ಜಾಡು ಹಿಡಿದು ತನಿಖೆಗೆ ಮುಂದಾದ ಸಂದರ್ಭ ಆರೋಪಿಗಳು ಸೋಮವಾರಪೇಟೆ ಕಡೆಗೆ ತೆರಳಿದ್ದು ಕಂಡು ಬಂದಿತ್ತು. ಮಕ್ಕಂದೂರು ಬಳಿ ಅದೇ ರಾತ್ರಿ ಮತ್ತೊಂದು ಬೈಕ್ ಕಳವು ಘಟನೆ ಕೂಡ ನಡೆದಿದ್ದು, ಆರೋಪಿಗಳು ಮಡಿಕೇರಿಗೆ ಬಂದಿದ್ದ ಬೈಕ್ ಅನ್ನು ಮಕ್ಕಂದೂರು ಸಮೀಪದ ಕೆರೆಯಲ್ಲಿ ಹಾಕಿರುವುದು ಪತ್ತೆಯಾಗಿತ್ತು. ಈ ಮಹಾರಾಷ್ಟ್ರ ನೋಂದಣಿ ಬೈಕ್‌ನ ಮಾಲೀಕರನ್ನು ಗೋವಾದಲ್ಲಿ ಪತ್ತೆ ಹಚ್ಚಿದಾಗ ಆತನ ಬೈಕ್ ಕಳುವಾಗಿರುವುದು ಬೆಳಕಿಗೆ ಬಂದಿದೆ. ಮಾತ್ರವಲ್ಲದೇ ಅಲ್ಲಿಯೂ ಮನೆ ಕಳ್ಳತನ ಮಾಡಿದ್ದ ಘಟನೆ ಪತ್ತೆಯಾಗಿತ್ತು. ಆರೋಪಿಗಳು ಮಕ್ಕಂದೂರು ಗ್ರಾಮದಲ್ಲಿ ಮತ್ತೊಂದು ಬೈಕ್ ಕಳವು ಮಾಡಿ ಆ ಬೈಕ್‌ನಲ್ಲಿಯೇ ಹಾಸನದ ಬೇಲೂರು ಕಡೆಗೆ ತೆರಳಿರುವುದು ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಹಾಸನ, ಕಾರವಾರ, ದಕ್ಷಿಣ ಕನ್ನಡ, ಗೋವಾ, ಮಹಾರಾಷ್ಟ್ರ ತೆಲಂಗಾಣ, ತಮಿಳುನಾಡು, ಗುಜರಾತ್, ಮಧ್ಯ ಪ್ರದೇಶ ರಾಜ್ಯಗಳಿಗೂ ಶಂಕಿತ ಆರೋಪಿಗಳ ಫೋಟೋಗಳನ್ನು ಕಳುಹಿಸಿ ಮಾಹಿತಿ ಬಯಸಲಾಗಿತ್ತು. ಮಡಿಕೇರಿಯಿಂದ ಮಧ್ಯ ಪ್ರದೇಶದವರೆಗಿನ ಒಟ್ಟು 700 ಸಿ.ಸಿ ಕ್ಯಾಮರಾಗಳನ್ನು ಪರಿಶೀಲನೆಗೆ ಒಳಪಡಿಸಲಾಗಿತ್ತು ಎಂದು ಎಸ್.ಪಿ ರಾಮರಾಜನ್ ಹೇಳಿದರು.

ಕ್ರಿಮಿನಲ್ ಹಿನ್ನೆಲೆಯ ತಂಡ: ಕಳವು ಕೃತ್ಯದಲ್ಲಿ ಪಾಲ್ಗೊಂಡಿರುವ ಆರೋಪಿಗಳು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ. ಮಧ್ಯ ಪ್ರದೇಶದ ಹೈಕೋರ್ಟ್ ನ್ಯಾಯಾಧೀಶರ ಮನೆಯಲ್ಲೂ ಆರೋಪಿಗಳು ಕಳವು ಮಾಡಿದ ಆರೋಪ ಇದ್ದು ಗುಜರಾತ್ ರಾಜ್ಯದಲ್ಲಿಯೂ ಕೇಸ್‌ಗಳಿವೆ. ಮಾತ್ರವಲ್ಲದೇ ರಾಜ್ಯದಿಂದ ಮಧ್ಯ ಪ್ರದೇಶಕ್ಕೆ ತೆರಳುವ ಮುನ್ನ ಭದ್ರಾವತಿ ಮತ್ತು ದಾಂಡೇಲಿಯಲ್ಲಿ ಅರ್ಧ ಕೆಜಿ. ಚಿನ್ನ ಹಾಗೂ 10 ಕೆ.ಜಿ ಬೆಳ್ಳಿ ಕಳವು ಮಾಡಿರುವ ಆರೋಪವಿದ್ದು ತನಿಖೆ ನಡೆಸಲಾಗುತ್ತಿದೆ. ಮಡಿಕೇರಿಗೆ ಬಂದಿದ್ದ ಸುರೇಶ್ ಸೆಂಗರ್ ವಿರುದ್ಧ ರಾಜ್ಯ ಸೇರಿದಂತೆ ಹೊರ ರಾಜ್ಯದಲ್ಲಿ 25ಕ್ಕೂ ಅಧಿಕ ಪ್ರಕರಣಗಳಿರುವುದು ಪತ್ತೆಯಾಗಿದೆ. ಈತನ ಜೊತೆಯಲ್ಲಿದ್ದು ಪ್ರಸ್ತುತ ತಲೆ ಮರೆಸಿಕೊಂಡಿರುವ ಕಾಲು ಎಂಬಾತನ ವಿರುದ್ಧ ಕೊಲೆಯತ್ನ ಪ್ರಕರಣ ಹಾಗೂ ಪೂನಮ್ ಎಂಬಾತನ ವಿರುದ್ಧ ಕೊಲೆ ಪ್ರಕರಣ ಧಾರ್ ಠಾಣೆಯಲ್ಲಿ ದಾಖಲಾಗಿರುವ ಮಾಹಿತಿ ಲಭಿಸಿದೆ ಎಂದರು.

ಆರೋಪಿಗಳ ಬಂಧನ: ಪೊಲೀಸ್ ವಸತಿ ಗೃಹದಲ್ಲಿ ಕಳವು ಕೃತ್ಯ ಎಸಗಿದ್ದ ಆರೋಪಿಗಳು ಮಧ್ಯ ಪ್ರದೇಶದ ಧಾರ್ ಗ್ರಾಮಕ್ಕೆ ತೆರಳಿ ತಲೆ ಮರೆಸಿಕೊಂಡಿದ್ದರು. ಆರೋಪಿಗಳ ಪೈಕಿ ಸುರೇಶ್ ಸೆಂಗಾರ್ ಮತ್ತೆ ರಾಜ್ಯಕ್ಕೆ ಆಗಮಿಸಿ ಕಳವು ಕೃತ್ಯದಲ್ಲಿ ಭಾಗಿಯಾಗುವ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಆ.16ರಂದು ಆರೋಪಿಗಳು ಪಿರಿಯಾಪಟ್ಟಣಕ್ಕೆ ಆಗಮಿಸಿದ ಸಂದರ್ಭ ಕ್ರೈಂ ಸಿಬ್ಬಂದಿಗಳು ಆತನನ್ನು ಬಂಧಿಸಿದ್ದಾರೆ. ಈತನಿಗೆ ವಸತಿ ಸಮುಚ್ಚಯಗಳ ಮಾಹಿತಿಯನ್ನು ನೀಡಿ ಕಳವು ಕೃತ್ಯಕ್ಕೆ ಸಹಕರಿಸುತ್ತಿದ್ದ ಮನೀಶ್ ಭಗೇಲ್ ಎಂಬಾತನನ್ನು ಕೂಡ ಬಂಧಿಸಲಾಗಿದೆ ಎಂದು ಹೇಳಿದರು.



ಅಂತರರಾಜ್ಯ ಕಳ್ಳರನ್ನು ಬಂಧಿಸಿದ ಮಡಿಕೇರಿ ಪೊಲೀಸರ ತಂಡ.

ಜಿಗಣೆ ನೀಡಿತ್ತು ಸುಳಿವು...

ಈ ನಡುವೆ ರಾಜ್ಯ ಸೇರಿದಂತೆ ಹೊರ ರಾಜ್ಯಗಳಲ್ಲಿ ಇಂತಹ ಕಳವು ಕೃತ್ಯಗಳಲ್ಲಿ ತೊಡಗಿಕೊಂಡಿದ್ದ ಒಟ್ಟು 50 ಮಂದಿ ಆರೋಪಿಗಳನ್ನು ವಿಚಾರಣೆ ನಡೆಸಲಾಗಿತ್ತು. ಈ ನಡುವೆ ನಗರದ ಪೊಲೀಸ್ ವಸತಿ ಗೃಹದಲ್ಲಿ ಆರೋಪಿಯ ಕಾಲಿಗೆ ಕಚ್ಚಿದ್ದ ಜಿಗಣೆಯ ರಕ್ತದ ಮಾದರಿ ಮಧ್ಯಪ್ರದೇಶದ ತಾಂಡವೊಂದರ ನಿವಾಸಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ಮಧ್ಯಪ್ರದೇಶದ ಕೋರ್ಟ್‌ಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಪೂನಮ್ ಎಂಬ ಆರೋಪಿಗೆ ಹೋಲಿಕೆಯಾಗಿತ್ತು. ಈ ಕಾರಣದಿಂದ ಧಾರ್ ಜಿಲ್ಲೆಯ ಎಸ್‌ಪಿಯನ್ನು ಸಂಪರ್ಕಿಸಿ ಶಂಕಿತರ ಫೋಟೋ ತೋರಿಸಿ ಮಡಿಕೇರಿಯಲ್ಲಿ ಕಳವು ಮಾಡಿದ್ದ ಆರೋಪಿಗಳು ಇವರೇ ಎಂದು ಖಚಿತಪಡಿಸಿಕೊಳ್ಳಲಾಗಿತ್ತು ಎಂದು ವಿವರಿಸಿದರು. ವಿಶೇಷ ತನಿಖಾ ತಂಡ ಕೂಡ 1 ತಿಂಗಳ ಕಾಲ ಧಾರ್ ಜಿಲ್ಲೆಯಲ್ಲಿ ಉಳಿದುಕೊಂಡು ಸೈಬರ್ ಕ್ರೈಂ, ಸ್ಥಳೀಯ ಪೊಲೀಸರು ಹಾಗೂ ವಿವಿಧ ಠಾಣೆಗಳಿಂದ ಆರೋಪಿಗಳ ಮಾಹಿತಿ ಕಲೆ ಹಾಕಿದ್ದರು.

ಸಂಕಷ್ಟದಲ್ಲಿರುವ ಕೊಡಗು ಕಾಫಿ ಬೆಳೆಗಾರರ ಸಂಘ

ಪರಿಹಾರ ನೀಡುವಂತೆ ಸಂಸದ ಯದುವೀರ್ ಮನವಿ



ಮಡಿಕೇರಿ, ಆ.19– ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘ ತೀವ್ರ ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದು ಕೇಂದ್ರ ವಾಣಿಜ್ಯ ಸಚಿವಾಲಯ ಮತ್ತು ಹಣಕಾಸು ಸಚಿವಾಲಯ ಮಧ್ಯ ಪ್ರವೇಶಿಸಿ ಪರಿಹಾರ ದೊರಕಿಸಿ ಕೊಡ ಬೇಕು ಎಂದು ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.

1956ರಲ್ಲಿ ಸ್ಥಾಪನೆಯಾದ ಕಾಫಿ ಸಹಕಾರ ಸಂಘ ಕೊಡಗು, ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ 12 ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕಾಫಿ ಬೆಳೆಗಾರರಿಗೆ ಸಾಕಷ್ಟು ಬೆಂಬಲ ಒದಗಿಸಿದೆ. ಸುಮಾರು 40 ಸಾವಿರ ಕುಟುಂಬಗಳಿಗೆ ಬೆನ್ನೆಲುಬಾಗಿದೆ. ಸೊಸೈಟಿ ಈಗ ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿದ್ದು 13.13 ಕೋಟಿ ರೂ. ನಷ್ಟ ಅನುಭವಿಸಿದೆ. ಈ ಸಂದರ್ಭ ಬಡ್ಡಿಯನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ಬಡ್ಡಿ ಪಾವತಿಸಿದರೆ ಸೊಸೈಟಿ ಆರ್ಥಿಕವಾಗಿ ದಿವಾಳಿಯಾಗಲಿದೆ. ಇದರಿಂದ ಸುಮಾರು 1 ಲಕ್ಷ ಜನರು ತೀವ್ರ ಪರಿಣಾಮ ಎದುರಿಸಬೇಕಾದೀತು ಎಂದು ಮನವರಿಕೆ ಮಾಡಿಕೊಡಲಾಗಿದೆ ಎಂದು ಯದುವೀರ್ ತಿಳಿಸಿದ್ದಾರೆ.

ವಾಣಿಜ್ಯ, ಹಣಕಾಸು ಸಚಿವಾಲಯ ಸಚಿವರು ಕೂಡಲೇ ಮಧ್ಯಪ್ರವೇಶಿಸಿ ಸೊಸೈಟಿಯನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕು ಎಂದು ಮನವಿ ಮಾಡಲಾಗಿದೆ ಎಂದು ಸಂಸದರು ಹೇಳಿದ್ದಾರೆ. ಮನವಿ ಸ್ವೀಕರಿಸಿದ ಸಚಿವರು ಕೂಡಲೇ ಈ ಸಂಬಂಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದ್ದಾರೆ.

ಆಸ್ಟ್ರೋ ಟರ್ಫ್ ಮೈದಾನಕ್ಕೆ ಕೋಟಿ ರೂ. ಚೆಕ್ ಹಸ್ತಾಂತರ



ಗೋಣಿಕೊಪ್ಪ: ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ವತಿಯಿಂದ ಕ್ರೀಡೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ನಿರ್ಮಿಸಿರುವ ಆಸ್ಟ್ರೋ ಟರ್ಫ್ ಮೈದಾನಕ್ಕೆ ಫೆಡರಲ್ ಬ್ಯಾಂಕ್ ವತಿಯಿಂದ 1 ಕೋಟಿ ರೂ. ಅನುದಾನವನ್ನು ನೀಡಲಾಯಿತು. ಫೆಡರಲ್ ಬ್ಯಾಂಕ್ ಬೆಂಗಳೂರು ವಲಯ ಮುಖ್ಯಸ್ಥ ಬಿ. ದಿಲಿಪ್ ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ಮುಖ್ಯಸ್ಥೆ ಅಂತಾರಾಷ್ಟ್ರೀಯ ಓಟಗಾರ್ತಿ ಅಶ್ವಿನಿ ನಾಚಪ್ಪ ಹಾಗೂ ಕರುಂಬಯ್ಯಾಸ್ ಅಕಾಡೆಮಿಕ್ ಆಫ್ ಲರ್ನಿಂಗ್ ಆಂಡ್ ಸ್ಪೋರ್ಟ್ಸ್ ಮುಖ್ಯಸ್ಥ ಮನೆಯಪಂಡ ದತ್ತ ಕರುಂಬಯ್ಯ ಅವರಿಗೆ ಮೈದಾನದಲ್ಲಿ ಚೆಕ್ ಹಸ್ತಾಂತರ ಮಾಡಿದರು.

ಫೆಡರಲ್ ಬ್ಯಾಂಕ್ ಬೆಂಗಳೂರು ವಲಯ ಮುಖ್ಯಸ್ಥ ಬಿ. ದಿಲಿಪ್ ಮಾತನಾಡಿ, ಸಾಮಾಜಿಕ ಜವಬ್ದಾರಿ ಅರಿತು ಕ್ರೀಡೆಗೆ ಉತ್ತೇಜನ ನೀಡಲು ಆರ್ಥಿಕ ಕೊಡುಗೆ ನೀಡಲಾಗಿದೆ ಎಂದರು. ಬ್ಯಾಂಕ್ ಸಿಎಸ್‌ಆರ್ ಮುಖ್ಯಸ್ಥ ಕೆ.ವಿ.ಶಜಿ ಮಾತನಾಡಿದರು.

ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ಮುಖ್ಯಸ್ಥೆ ಅಶ್ವಿನಿ ನಾಚಪ್ಪ ಮಾತನಾಡಿ, ಸ್ಥಳೀಯ ಪ್ರತಿಭೆಗಳನ್ನು ಹೊರ ತರುವ ಕಾರ್ಯ ಅಶ್ವಿನಿ ಸ್ಪೋರ್ಟ್ಸ್ ಫೌಂಡೇಷನ್ ವತಿಯಿಂದ ನಡೆಯುತ್ತಿದೆ. ಸುಮಾರು 5.5 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮೈದಾನದಲ್ಲಿ ಮತ್ತಷ್ಟು ಪ್ರತಿಭೆಗಳು ಹೊರ ಬರಬೇಕಿದೆ. ನಮ್ಮದೇ ವಿದ್ಯಾರ್ಥಿ ಸಿ.ಬಿ.ಪೂವಣ್ಣ ಭಾರತ ತಂಡಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರ. ಕ್ರೀಡೆಗೆ ಬ್ಯಾಂಕ್ ವತಿಯಿಂದ ನೀಡಿದ ಪ್ರೋತ್ಸಾಹ ಪ್ರತಿಭೆಗಳಿಗೆ ಕೂಡ ಬೆಂಬಲ ನೀಡಿದಂತಾಗಿದೆ ಎಂದರು.

ಕ್ಯಾಲ್ಸ್ ಮುಖ್ಯಸ್ಥ ಮನೆಯಪಂಡ ದತ್ತ ಕರುಂಬಯ್ಯ, ಬ್ಯಾಂಕ್ ಸಿಎಸ್‌ಆರ್ ಉಪಾಧ್ಯಕ್ಷ ಕೆ. ಪ್ರವೀಣ್, ವಲಯ ಮುಖ್ಯಸ್ಥ ವಿ.ಸಿ.ರಾಜೀವ್, ಗೋಣಿಕೊಪ್ಪ ಶಾಖಾ ವ್ಯವಸ್ಥಾಪಕ ಅಮಲ್ ಎಳ್‌ದ್ಯತ್ ಇದ್ದರು.

ಗಾಳಿ ಮಳೆಯಿಂದ ಐನ್ ಮನೆ ಗೋಡೆ ಬಿದ್ದು ಹಾನಿ



ನಾಪೋಕ್ಲು: ಸಮೀಪದ ಮರಂದೋಡ ಗ್ರಾಮದ ಅನ್ನಾಡಿಯಂಡ ಕುಟುಂಬಸ್ಥರ ಐನ್ ಮನೆಯ ಒಂದು ಭಾಗವು ವಿಪರೀತ ಗಾಳಿ ಮಳೆಯಿಂದ ಭಾನುವಾರ ಸಂಪೂರ್ಣವಾಗಿ ಬಿದ್ದು ಹೋಗಿ ಹಾನಿಗೊಳಗಾಗಿದೆ. ಬೆಂಗಳೂರಿನಲ್ಲಿ ನೆಲೆಸಿರುವ ಅನ್ನಡಿಯಂಡ ಮೋನಿಷ್ ಎಂಬವರು ತೋಟದಲ್ಲಿನ ಕೆಲಸದ ನಿಮಿತ್ತ ಆಗ್ಗಾಗ್ಗೆ ಬಂದು ಈ ಮನೆಯಲ್ಲಿ ನೆಲೆಸುತ್ತಿದ್ದರು. ಮನೆಯ ಒಂದು ಭಾಗ ಕುಸಿದು ಬಿದ್ದುದ್ದರಿಂದ ಮನೆಯಲ್ಲಿನ ವಸ್ತುಗಳು ಹಾನಿಗೊಳಗಾಗಿವೆ. ಮರಂದೊಡ ಗ್ರಾಪಂ ಸದಸ್ಯರಾದ ಚೋಯಮಾ ಡಂಡ ಹರೀಶ್ ಮೊಣ್ಣಪ್ಪ, ಮತ್ತು ಅನ್ನಾಡಿಯಂಡ ಮಂದಣ್ಣ ಹಾಗೂ ಗ್ರಾಮ ಲೆಕ್ಕಾಧಿಕಾರಿ ಶರ್ಮಿಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ನಾಪತ್ತೆಯಾಗಿದ್ದ ಯುವಕನ ಮೃತದೇಹ ಪತ್ತೆ



ಮಡಿಕೇರಿ,ಆ.19– ನಾಪತ್ತೆಯಾಗಿದ್ದ ಸೋಮವಾರಪೇಟೆ ಬಳಿಯ ಹಣಕೋಡು ಗ್ರಾಮದ ಚಿದಾನಂದ (27)ಎಂಬ ಯುವಕನ ಮೃತದೇಹ ಪತ್ತೆಯಾಗಿದ್ದು ಆತ್ಮಹತ್ಯೆ ಮಾಡಿಕೊಂಡಿರುವುದು ಖಚಿತವಾಗಿದೆ.

ಪುಷ್ಪಗಿರಿ ಸಮೀಪದ ಪ್ರಸಿದ್ಧ ಪ್ರವಾಸಿ ತಾಣ ಮಲ್ಲಳ್ಳಿ ಫಾಲ್ಸ್‌ನಲ್ಲಿರುವ ಹೈಡಲ್ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಹಣಕೋಡು ಗ್ರಾಮದ ಯುವಕ ಚಿದಾನಂದ ಭಾನುವಾರ ರಾತ್ರಿ ನಾಪತ್ತೆಯಾಗಿದ್ದ. ಮಾತ್ರವಲ್ಲದೇ ನಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತನ್ನ ಸ್ನೇಹಿತರಿಗೆ ಮೆಸೇಜ್ ಮಾಡಿದ್ದ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅಲ್ಲಿದ್ದ ಸಿ.ಸಿ ಕ್ಯಾಮರಾಗಳನ್ನು ಪರಿಶೀಲನೆ ನಡೆಸಿದ ಸಂದರ್ಭ ತಾನು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿಯೇ ನೀರಿಗೆ ಧುಮುಕಿದ್ದ ದೃಶ್ಯಗಳು ಕಂಡು ಬಂದಿದ್ದವು.

ಸೋಮವಾರ ಪೊಲೀಸ್ ಹಾಗೂ ಗೃಹ ರಕ್ಷಕ ದಳದ ಸಿಬ್ಬಂದಿಗಳು ಉಕ್ಕಿ ಹರಿಯುತ್ತಿರುವ ನೀರಿನಲ್ಲಿ ಹುಡುಕಾಟ ನಡೆಸಿದ್ದರೂ ಪ್ರಯೋಜನವಾಗಿರಲಿಲ್ಲ. ಮಂಗಳವಾರ ಸ್ಥಳೀಯರು ಹುಡುಕಾಟ ನಡೆಸಿದ್ದು ಮಧ್ಯಾಹ್ನದ ವೇಳೆಗೆ ವಿದ್ಯುತ್ ಉತ್ಪಾದನಾ ಘಟಕದಿಂದ ಅರ್ಧ ಕಿಲೋ ಮೀಟರ್ ದೂರದಲ್ಲಿ ಹೊಳೆಯ ಮಧ್ಯೆ ಮರದ ಬುಡಕ್ಕೆ ಸಿಲುಕಿಕೊಂಡಿದ್ದ ಮೃತದೇಹ ಪತ್ತೆಯಾಗಿದೆ. ಹರಿಯುವ ನೀರಿನ ರಭಸವನ್ನು ಲೆಕ್ಕಿಸದೆ ಸ್ಥಳೀಯ ಗ್ರಾಮಸ್ಥರು ನೀರಿನ ಸೆಳೆತದ ನಡುವೆಯೂ ಮೃತದೇಹವನ್ನು ಹರಸಾಹಸದಿಂದ ಹೊರ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ.


ಪ್ರೇಮ ಕುಮಾರ್ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬೆಟ್ಟಗೇರಿ ಗ್ರಾಮದ ಬಕ್ಕ ಕಡ್ಲೇರ ದಿವಂಗತ ದೇವಯ್ಯನವರ ಮಗ ಪ್ರೇಮ ಕುಮಾರ್ (ರವಿ) ಮಂಗಳವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಬುಧವಾರ ಮೃತರ ಸ್ವಗ್ರಾಮದಲ್ಲಿ ಜರುಗಲಿದೆ. ಮೃತರು ತಾಯಿ ದೇವಕಿ, ಪತ್ನಿ ವನಿತಾ, ಮಕ್ಕಳು ರೋಹನ್, ರಂಜು ಸೇರಿದಂತೆ ಅಪಾರ ಬಂಧು ಭಾಂದವರನ್ನು ಅಗಲಿದ್ದಾರೆ.


ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಬಂಡೀಪುರ ಅರಣ್ಯ

ತುಂಬಿ ಹರಿಯುತ್ತಿವೆ ಕೆರೆ-ಕಟ್ಟೆಗಳು, ಸ್ವಚ್ಛಂದವಾಗಿ ಓಡಾಡುತ್ತಿರುವ ವನ್ಯ ಜೀವಿಗಳ ಕಲರವ



ಬಂಡೀಪುರ ವಲಯದ ಎಲ್ಲಾ ಕೆರೆಗಳಲ್ಲಿಯೂ ಹೂಳೆತ್ತಿದ್ದರಿಂದ ಪೂರ್ವ ಮುಂಗಾರಿನಲ್ಲಿಯೇ ಬಹುತೇಕ ಕೆರೆಗಳಲ್ಲಿ ಹೆಚ್ಚುವರಿ ನೀರು ಸಂಗ್ರಹವಾಗಿದೆ. ಹಸಿರಿನಿಂದ ಕಂಗೊಳಿಸುವ ಅರಣ್ಯ ಹಾಗೂ ವನ್ಯಜೀವಿಗಳ ದರ್ಶನ ಪಡೆಯಲು ಹೆಚ್ಚಿನ ಪ್ರವಾಸಿಗರು ಆಗಮಿಸುತ್ತಿದ್ದಾರೆ. –ಎನ್.ಸಿ.ಮಹದೇವ, ಬಂಡೀಪುರ ವಲಯದ ವಲಯಾರಣ್ಯಾಧಿಕಾರಿ.







ಗುಂಡ್ಲುಪೇಟೆ: ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಬಂಡೀಪುರದ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ಹಸಿರಿನಿಂದ ಕಂಗೊಳಿಸುತ್ತಿದ್ದು, ಅರಣ್ಯ ಪ್ರದೇಶದ ದೊಡ್ಡದೊಡ್ಡ ಕೆರೆಗಳು ಮತ್ತು ಕಟ್ಟೆಗಳು ತುಂಬಿ ಕೋಡಿ ಹರಿಯುತ್ತಿದೆ. ಈ ಬಾರಿ ವನ್ಯಜೀವಿಗಳಿಗೆ ವರ್ಷಪೂರ್ತಿ ಸಮೃದ್ಧ ನೀರು ದೊರಕುವಂತಾಗಿದೆ.

ಹಸಿರು ಹೊದ್ದು ಹಚ್ಚ ಹಸಿರಿನಿಂದ ಕಂಗೊಳಿಸುವ ಬಂಡೀಪುರ ಅರಣ್ಯದಲ್ಲಿ ಹಿಂಡುಹಿಂಡಾಗಿ ಸಂಚರಿಸುವ ಚುಕ್ಕೆ ಜಿಂಕೆಗಳು, ದೊಡ್ಡ ದೊಡ್ಡ ಮರದ ಮೇಲೆ ಕುಳಿತು ಶಿಕಾರಿಗೆ ಹೊಂಚುವ ಚಿರತೆಗಳು, ರಸ್ತೆ ಬದಿಗಳಲ್ಲಿ ಕಂಡು ಬರುವ ಆನೆಗಳ ಗುಂಪು, ಕೆರೆಗಳ ಬಳಿ ದರ್ಶನ ನೀಡುವ ಹುಲಿಗಳು, ನವಿಲುಗಳು, ಕಾಡೆಮ್ಮೆಗಳು ಪ್ರವಾಸಿಗರನ್ನು ಬಂಡೀಪುರದತ್ತ ಸೆಳೆಯುತ್ತಿವೆ.

ಈ ಬಾರಿ ಪೂರ್ವ ಮುಂಗಾರು ಮಳೆ ಅವಧಿಗೂ ಮುನ್ನ ಆರಂಭವಾಗಿರುವುದರಿಂದ ಬಂಡೀಪುರ ವಲಯದ 51 ಕೆರೆಗಳಲ್ಲಿ ಶೇ 90ಕ್ಕೂ ಹೆಚ್ಚು ಕೆರೆ–ಕಟ್ಟೆಗಳು ತುಂಬಿ ಹರಿಯುತ್ತಿವೆ. ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ಎಲ್ಲಾ ಕೆರೆಗಳೂ ಭರ್ತಿಯಾಗಿ ಕೋಡಿಬಿದ್ದ ಪರಿಣಾಮ ಹಳ್ಳಕೊಳ್ಳಗಳಲ್ಲಿ ಭಾರೀ ಪ್ರಮಾಣದ ನೀರು ಹರಿಯುತ್ತಿದೆ.

ಕೆರೆಗಳ ಹೂಳೆತ್ತಿಸಿದ ಅರಣ್ಯ ಇಲಾಖೆ: ಕಳೆದ ವರ್ಷ ಅರಣ್ಯ ಇಲಾಖೆ ಬೇಸಿಗೆ ಸಂದರ್ಭದಲ್ಲಿ ಮಳೆನೀರು ಹರಿಯುತ್ತಿದ್ದ ಕಾಲುವೆಗಳನ್ನು ಪುನಶ್ಚೇತನಗೊಳಿಸಿತ್ತು. ದೊಡ್ಡ ದೊಡ್ಡ ಕೆರೆಗಳಲ್ಲಿ ತುಂಬಿಕೊಂಡಿದ್ದ ಹೂಳೆತ್ತಿಸಿ ಅದರ ಮಣ್ಣನ್ನು ಕೆರೆಗಳ ಏರಿಗಳ ಮೇಲೆ ಹಾಕಿಸಿತ್ತು. ಮೂರ್ಕೆರೆ, ಸುಬ್ಬರಾಯನಕಟ್ಟೆ, ಕೊಳಕುಮಲ್ಲಿ ಕೆರೆ, ಕಿರುಬನಕೊಳ, ಮೂಲಾಪುರ ಕೆರೆ ಮುಂತಾದ ಕೆರೆಗಳೂ ಕೋಡಿ ಬಿದ್ದು ಇದೇ ಮೊದಲ ಬಾರಿಗೆ ಮಂಗಲ ಡ್ಯಾಂಗೆ ನೀರು ಹರಿಯುತ್ತಿದೆ.

ಹರಿವ ನೀರಿಗೆ ಕೊರೆದ ರಸ್ತೆಗಳು: ವಲಯದ ಎಲ್ಲಾ ಕೆರೆಗಳಿಂದ ಕೋಡಿ ಬಿದ್ದ ನೀರು ಏಕಕಾಲದಲ್ಲಿ ಬಿರುಸಾಗಿ ಹರಿಯಲಾರಂಭಿಸಿವೆ. ಸೇತುವೆಗಳ ಮೇಲೂ ನೀರು ಹರಿಯುತ್ತಿದ್ದು ಇದರ ರಭಸಕ್ಕೆ ಬಂಡೀಪುರ ಸಫಾರಿ ವಲಯದ ಹಲವು ರಸ್ತೆಗಳಲ್ಲಿ ಕೊರಕಲುಂಟಾಗಿದೆ. ಅರಣ್ಯ ಪ್ರದೇಶವು ಬಿಸಿಲನ್ನೇ ಕಾಣದ ಪರಿಣಾಮ ಸಫಾರಿ ಮಾರ್ಗದ ಎಲ್ಲಾ ರಸ್ತೆಗಳೂ ಕೆಸರು ಗದ್ದೆಗಳಂತಾಗಿವೆ. ಇದರಿಂದ ಈ ರಸ್ತೆಗಳಲ್ಲಿ ಸಫಾರಿ ವಾಹನಗಳ ಸಂಚಾರಕ್ಕೆ ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತಿದೆ.

ಹಚ್ಚಹಸಿರು ಅರಣ್ಯದಲ್ಲಿ ವನ್ಯಜೀವಿಗಳ ಕಲರವ: ಬಂಡೀಪುರದ ಮಾರ್ಗವಾಗಿ ಸಂಚರಿಸುವ ಪ್ರವಾಸಿಗರಿಗೆ ರಸ್ತೆ ಬದಿಗಳಲ್ಲಿಯೇ ಎಲ್ಲೆಂದರಲ್ಲಿ ಚುಕ್ಕೆ ಜಿಂಕೆಗಳು, ಆನೆಗಳ ಹಿಂಡು, ಕರಡಿ ಮುಂತಾದ ವನ್ಯಜೀವಿಗಳು ದರ್ಶನ ನೀಡುತ್ತಿದ್ದರೆ, ಸಫಾರಿಗೆ ಹೋಗುವ ಪ್ರವಾಸಿಗರಿಗೆ ಎಲ್ಲಾ ಕೆರೆಗಳ ಸುತ್ತಮುತ್ತಲೂ ಹುಲಿ ಚಿರತೆ, ಆನೆ, ಕಾಟಿ, ಕೆನ್ನಾಯಿ ಮುಂತಾದವು ಕಾಣಸಿಗುತ್ತಿವೆ. ಇದರಿಂದ ಪ್ರತಿದಿನವೂ ಸಫಾರಿಗೆ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುತ್ತಿದೆ.

ಕೆರೆಗಳಲ್ಲಿ ಮಲಗಿರುವ ಇಲ್ಲವೇ ನೀರು ಕುಡಿಯಲು ಬರುವ ಭೀಮ ಹೆಸರಿನ ಹುಲಿಯನ್ನು ನೋಡಲು ಸಫಾರಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಹಿಂಡು ಹಿಂಡಾಗಿ ಸಂಚರಿಸುವ ಚುಕ್ಕೆ ಜಿಂಕೆಗಳು ಎಲ್ಲರ ಮನಸೂರೆಗೊಳ್ಳುತ್ತಿವೆ. ಪೊದೆಗಳಿಂದ ಹೊರಬರುವ ಕರಡಿ, ಕೊಂಬೆಗಳ ಮೇಲೆ ಮಲಗಿರುವ ಚಿರತೆ, ಹತ್ತಾರು ವಾಹನಗಳು ನೂರಾರು ಜನರಿದ್ದರೂ ಲೆಕ್ಕಿಸದ ಹುಲಿಗಳು, ಕೆರೆಗಳ ಬಳಿಯಲ್ಲಿ ಸಂಚರಿಸುವ ಹುಲಿಗಳು ಪ್ರವಾಸಿಗರ ಎದೆಬಡಿತ ಹೆಚ್ಚಿಸುತ್ತಿವೆ.

ಕಬಿನಿ, ಕೆಆರ್‌ಎಸ್‌ನಿಂದ ನೀರು ಬಿಡುಗಡೆ, ಕೊಳ್ಳೆಗಾಲ ರೈತರ ಜಮೀನು ಸಂಪೂರ್ಣ ಜಲಾವೃತ

ಮತ್ತಷ್ಟು ನೀರಿನ ಹರಿವಿನ ಪ್ರಮಾಣ ಹೆಚ್ಚಾದರೆ ಗ್ರಾಮಗಳ ಮುಳುಗಡೆ ಭೀತಿ



ಕೊಳ್ಳೇಗಾಲ, ಆ.19– ಕೆಆರ್‌ಎಸ್ ಜಲಾಶಯದಿಂದ 80 ಸಾವಿರ ಕ್ಯೂಸೆಕ್ಸ್, ಕಬಿನಿ ಜಲಾಶಯದಿಂದ 45 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗಳಿಗೆ ಹರಿಬಿಡಲಾಗುತ್ತಿರುವ ಹಿನ್ನೆಲೆ ಕೊಳ್ಳೇಗಾಲ ತಾಲೂಕಿನ ಕಾವೇರಿ ನದಿ ಪಾತ್ರದಲ್ಲಿರುವ ಗ್ರಾಮಗಳು ಮತ್ತೊಮ್ಮೆ ಪ್ರವಾಹದ ಆತಂಕ ಎದುರಿಸುವಂತಾಗಿವೆ.


ಕಬಿನಿ ಹಾಗೂ ಕೆಆರ್‌ಎಸ್‌ನಿಂದ 1.25 ಲಕ್ಷ ಕ್ಯೂಸೆಕ್ಸ್‌ಗೂ ಅಧಿಕ ಪ್ರಮಾಣದಲ್ಲಿ ನದಿಗಳಿಗೆ ನೀರು ಹರಿದು ಬರುತ್ತಿರುವುದರಿಂದಾಗಿ ಕಾವೇರಿ ನದಿ ಉಕ್ಕಿ ಹರಿಯುತ್ತಿದೆ. ತಿ.ನರಸೀಪುರದ ಬಳಿ ಸಾಗಿ ನಂತರ ಮುಂದೆ ನದಿ ಅಪಾಯದ ಮಟ್ಟ ಮೀರಿ ಕೆಳಭಾಗದಿಂದ ಹರಿಯುತ್ತಿದ್ದು ಇದರಿಂದಾಗಿ ತಾಲೂಕಿನ ಹಳೇ ಹಂಪಾಪುರ ಹಾಗೂ ಮುಳ್ಳೂರು, ದಾಸನಪುರ ಗ್ರಾಮಗಳಲ್ಲಿ ಜಮೀನುಗಳು ಪ್ರವಾಹದಿಂದ ಜಲಾವೃತವಾಗಿವೆ. ಗ್ರಾಮದ ಅಂಚಿನಲ್ಲಿ ನೀರು ಹರಿಯುತ್ತಿರುವುದರಿಂದ ಜನರಲ್ಲಿ ಆತಂಕ ಮನೆ ಮಾಡಿದೆ. ದಾಸನಪುರ, ಹಳೆ ಅಣಗಳ್ಳಿ, ಹರಳೆಯಲ್ಲಿ ರೈತರ ಜಮೀನಿಗೆ ನೀರು ನುಗ್ಗಿದ್ದು ಕೆಲವು ಗ್ರಾಮಗಳಲ್ಲಿನ ರೈತರ ಫಸಲು ಹಾನಿಗೊಂಡಿದೆ. ಸತತವಾಗಿ ಪ್ರವಾಹ ಭೀತಿ ಎದುರಿಸುತ್ತಿರುವ ಈ ಗ್ರಾಮಗಳು ಕೆಲ ದಿನಗಳ ಹಿಂದೆ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿ ಜಮೀನುಗಳು ಮುಳುಗಡೆಯಾಗಿ ಗ್ರಾಮದ ಅಂಚಿನಲ್ಲಿ ನೀರು ಹರಿಯುತ್ತಿದ್ದುದ್ದರಿಂದ ಜನರಲ್ಲಿ ಈ ಹಿಂದೆಯೂ ಆತಂಕ ಮನೆ ಮಾಡಿತ್ತು. ಈಗ ಸೋಮವಾರ ರಾತ್ರಿಯಿಂದಲೇ ಜಮೀನುಗಳು ಮುಳುಗಡೆಯಾಗಿದೆ.

ಸದ್ಯ ಜಿಲ್ಲಾಡಳಿತ, ತಾಲೂಕು ಆಡಳಿತ ಅಗತ್ಯ ಕ್ರಮಕ್ಕೆ ಸಜ್ಜಾಗಿರುವುದು ಗ್ರಾಮಸ್ಥರನ್ನು ಆತಂಕದಿಂದ ದೂರ ಮುಕ್ತಮಾಡುವಂತಾಗಿದ್ದು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ರಾಜ್ಯ ಹಾಗೂ ಕೇರಳದ ಕರಾವಳಿ ತೀರದ ಜಿಲ್ಲೆಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ವರುಣನ ಅಬ್ಬರ ನಿರಂತರವಾಗಿರುವುದರಿಂದ ಕಬಿನಿ ಹಾಗೂ ಕೆಆರ್‌ಎಸ್ ಜಲಾಶಯಗಳಿಗೆ ನಿರಂತರವಾಗಿ ನೀರು ಹರಿದು ಬರುತ್ತಿರುವುದರಿಂದ ಜಲಾಶಯಗಳು ಅದಾಗಲೇ ಭರ್ತಿಯಾಗಿದ್ದು ಅಧಿಕ ಪ್ರಮಾಣದಲ್ಲಿ ನೀರನ್ನು ಕಾವೇರಿ, ಕಪಿಲ ನದಿಗಳಿಂದ ಹರಿ ಬಿಡಲಾಗುತ್ತಿದೆ.

ಸೋಮವಾರದ ತನಕ ನದಿ ಪಾತ್ರದಲ್ಲಿ ತುಂಬಿ ಹರಿಯುತ್ತಿದ್ದ ನೀರು ಮಂಗಳವಾರ ಪ್ರಮಾಣ ಹೆಚ್ಚಾದ ಹಿನ್ನೆಲೆಯಲ್ಲಿ ರೈತರ ಜಮೀನುಗಳಿಗೆ ಪ್ರವೇಶಿಸಿದೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನದಿಗಳಿಗೆ ನೀರನ್ನು ಹರಿ ಬಿಡುವ ಸಾಧ್ಯತೆ ಇರುವುದರಿಂದ ನದಿಯಲ್ಲಿ ಪ್ರವಾಹ ಹೆಚ್ಚಳವಾಗಿ ಯಾವುದೇ ಕ್ಷಣದಲ್ಲಾದರೂ ಅಪಾಯದ ಮಟ್ಟ ಮೀರಿ ನೀರು ಹರಿಯಬಹುದು ಎಂದು ಜನ ಆತಂಕಕ್ಕೊಳಗಾಗಿದ್ದಾರೆ.

ಇಂದು ಡಿ.ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆ



ಚಾಮರಾಜನಗರ, ಆ.19– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಾಮಾಜಿಕ ಕ್ರಾಂತಿಯ ಹರಿಕಾರ ಹಾಗೂ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯನ್ನು ಆ.20ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30 ಗಂಟೆಗೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಶ್ರೀ ಚಾಮರಾಜೇಶ್ವರ ದೇವಾಸ್ಥಾನದ ಮುಂಭಾಗದಿಂದ ಡಿ.ದೇವರಾಜ ಅರಸು ಅವರ ಭಾವಚಿತ್ರದ ಮೆರವಣಿಗೆ ಹೊರಡಲಿದೆ. ಬೆಳಿಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ್ ಎಸ್.ತಂಗಡಗಿ ಗೌರವ ಘನ ಉಪಸ್ಥಿತಿ ವಹಿಸುವರು. ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು.

ಕೆ.ಎನ್.ರಾಜಣ್ಣರನ್ನು ವಜಾಗೊಳಿಸಿರುವುದನ್ನು ಖಂಡಿಸಿ

ನಾಯಕ ಸಮುದಾಯದಿಂದ ಆ. 29ರಂದು ಮೈಸೂರಿನಲ್ಲಿ, ಸೆ. 2ರಂದು ಚಾಮರಾಜನಗರದಲ್ಲಿ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ.

ಚಾಮರಾಜನಗರ: ಸಚಿವ ಸಂಪುಟದಿಂದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಏಕಾಏಕಿ ವಜಾಗೊಳಿಸಿರುವುದನ್ನು ಖಂಡಿಸಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮುದಾಯದಿಂದ ಆ.29ರಂದು ಮೈಸೂರಿನಲ್ಲಿ, ಸೆ.2ರಂದು ಚಾಮರಾಜನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಚಿವ ರಾಜಣ್ಣ ಅವರು ಯಾವುದೇ ರೀತಿಯ ಭ್ರಷ್ಟಾಚಾರವಾಗಲಿ, ಪಕ್ಷ ವಿರೋಧಿ ಚಟುವಟಿಕೆಗಳನ್ನು ಮಾಡಿಲ್ಲ. ಇದ್ದುದ್ದನ್ನು ನೇರವಾಗಿ ಮಾತನಾಡುವ ಸ್ವಭಾವ ಅವರದ್ದಾಗಿದೆ. ಅವರಿಗೆ ಸರ್ಕಾರ ಯಾವುದೇ ಕಾರಣ ನೀಡದೆ ಏಕಾಏಕಿ ವಜಾಗೊಳಿಸಿರುವುದು ನಾಯಕ ಸಮುದಾಯಕ್ಕೆ ಮಾಡಿರುವ ಅನ್ಯಾಯವಾಗಿದೆ. ಇದನ್ನು ಖಂಡಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಆ.29ರಂದು ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಮಾವೇಶಗೊಂಡು ಅಲ್ಲಿಂದ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುತ್ತದೆ. ಅದೇ ರೀತಿ ಸೆ. 2ರಂದು ನಗರದ ಚಾಮರಾಜೇಶ್ವರ ಉದ್ಯಾನವನದಲ್ಲಿ ಸಮಾವೇಶಗೊಂಡು ಅಲ್ಲಿಂದ ಮೆರವಣಿಗೆ ಹೊರಟು ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ನಾವು ಯಾವುದೇ ಪಕ್ಷವನ್ನು ಗುರಿಯಾಗಿಟ್ಟುಕೊಂಡು ಪ್ರತಿಭಟನೆ ಮಾಡುತ್ತಿಲ್ಲ. ಸಮಾಜಕ್ಕೆ ಅನ್ಯಾಯವಾದಾಗ ಖಂಡಿಸುವುದು ನಮ್ಮ ಕರ್ತವ್ಯವಾಗಿದೆ. ಸರ್ಕಾರ ರಾಜಣ್ಣ ಅವರನ್ನು ಮತ್ತೆ ಸಚಿವರನ್ನಾಗಿ ಮಾಡಬೇಕು. ಇಲ್ಲದಿದ್ದರೆ ಸಮುದಾಯದಿಂದ ಹೋರಾಟ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಪು.ಶ್ರೀನಿವಾಸನಾಯಕ, ಮಹದೇವನಾಯಕ, ಮಲ್ಲೇಶ್‌ನಾಯಕ, ರಾಚಪ್ಪ, ವೆಂಕಟರಮಣನಾಯಕ, ಸುರೇಶ್ ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ: ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಆ.20ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲ ಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು ಮಿತ್ರ ಬುಧವಾರ 20 ಆಗಸ್ಟ್ 2025

ಮೈಸೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ 'ಸ್ಟಾಪ್ ವೋಟ್ ಚೋರಿ' ಅಭಿಯಾನ

'ಮತಗಳ್ಳತನ ನಿಲ್ಲಿಸಿ' ಸ್ಟಿಕ್ಕರ್‌ಗಳನ್ನು ಸಾರಿಗೆ ಬಸ್‌ಗಳಿಗೆ ಅಂಟಿಸಿ ಜಾಗೃತಿ



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಮಂಗಳವಾರ ಕಾಂಗ್ರೆಸ್ ಕಾರ್ಯಕರ್ತರು ಬಸ್‌ಗಳಿಗೆ 'ಸ್ಟಾಪ್ ವೋಟ್ ಚೋರಿ' ಸ್ಟಿಕ್ಕರ್ ಅಂಟಿಸಿ ಮತಗಳ್ಳತನದ ಬಗ್ಗೆ ಜಾಗೃತಿ ಮೂಡಿಸುವ ಅಭಿಯಾನ ನಡೆಸಿದರು.

ಮೈಸೂರು, ಆ.19(ಬಿಎಲ್‌ಯು)– ಮೈಸೂರು ಸೇರಿದಂತೆ ರಾಷ್ಟ್ರಾದ್ಯಂತ ಚುನಾವಣೆಗಳಲ್ಲಿ ಮತಗಳ್ಳತನವಾಗಿದೆ ಎಂದು ಆರೋಪಿಸಿ ಮೈಸೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಇಂದು 'ಸ್ಟಾಪ್ ವೋಟ್ ಚೋರಿ' ಅಭಿಯಾನ ನಡೆಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ನಗರದ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಘೋಷಣಾ ಫಲಕ ಹಿಡಿದು ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಅಲ್ಲದೆ 'ಸ್ಟಾಪ್ ವೋಟ್ ಚೋರಿ' ಸ್ಟಿಕ್ಕರ್‌ಗಳನ್ನು ಬಸ್‌ಗಳಿಗೆ ಅಂಟಿಸಿದರು. ಈ ಮೂಲಕ ಮತಗಳ್ಳತನ ನಡೆಯುತ್ತಿದೆ ಎಂದು ಜನರಲ್ಲಿ ಜಾಗೃತಿ ಮೂಡಿಸಿದರು.

ನಂತರ ಮಾತನಾಡಿದ ಲಕ್ಷ್ಮಣ್, ದೇಶದ 18 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದ್ದು, ತಮ್ಮ ಪಕ್ಷದ ಸರ್ಕಾರವನ್ನು ಅಸ್ತಿತ್ವಕ್ಕೆ ತರಲು ಮತಗಳ್ಳತನ ಮಾಡಿದೆ. ಲೋಕಸಭಾ ಚುನಾವಣೆಯಲ್ಲಿ ಕೂಡ ಮತಗಳ್ಳತನ ಮಾಡಿ ಅಧಿಕಾರಕ್ಕೆ ಬಂದಿದೆ ಎಂದು ಆರೋಪಿಸಿದರು.

ಬಿಹಾರದಲ್ಲಿ 65 ಸಾವಿರ ಮತದಾರರನ್ನು ಮತಪಟ್ಟಿಯಿಂದ ಕೈ ಬಿಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಮತದಾನ ಮುಗಿಯುವ ಒಂದೆರಡು ಗಂಟೆ ಅವಧಿಯಲ್ಲಿ 90 ಲಕ್ಷ ಮತದಾನವಾಗಿದೆ. ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಬಿಜೆಪಿ ಮತಗಳ್ಳತನ ನಡೆಸಿರುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷ್ಯದ ಅವಶ್ಯಕತೆ ಇದೆಯೇ? ಎಂದು ಪ್ರಶ್ನಿಸಿದರು. ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಯುವ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು.

ಪೊಲೀಸರು ಕ್ರಮ ಕೈಗೊಳ್ಳಲಿಲ್ಲ

ರಾಜಕೀಯ ಪಕ್ಷದ ಕಾರ್ಯಕರ್ತರು ಬಸ್ ನಿಲ್ದಾಣದ ಒಳಗೆ ಪ್ರವೇಶಿಸದಂತೆ ತಡೆಯಬೇಕೆಂದು ಕೆಎಸ್‌ಆರ್‌ಟಿಸಿಯ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಉಸ್ತುವಾರಿ ಅಧಿಕಾರಿ ಪೊಲೀಸರಿಗೆ ತಿಳಿಸಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ.

ಸರ್ಕಾರಿ ಸ್ಥಳದಲ್ಲಿ ಹಾಗೂ ವಾಹನದಲ್ಲಿ ರಾಜಕೀಯ ಪಕ್ಷದ ಭಿತ್ತಿಪತ್ರ ಅಂಟಿಸಬಾರದೆಂಬ ಸರ್ಕಾರದ ನಿಯಮವಿದೆ.

ಈ ಹಿನ್ನೆಲೆ ಇದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಪೊಲೀಸರಿಗೆ ಸೂಚನೆ ನೀಡಿದರೂ ಅವರು ಯಾವುದೇ ಕ್ರಮ ಕೈಗೊಂಡಿಲ್ಲ. ಕಾಂಗ್ರೆಸ್ ಕಾರ್ಯಕರ್ತರು ಅಂಟಿಸಿದ್ದ ಸ್ಟಿಕ್ಕರ್‌ಗಳನ್ನು ತಕ್ಷಣವೇ ತೆರವು ಮಾಡುವಂತೆ ಸೂಚನೆ ನೀಡಲಾಗಿದೆ. ಅದರಂತೆ ನಮ್ಮ ಸಿಬ್ಬಂದಿ ಸ್ಟಿಕ್ಕರ್‌ಗಳನ್ನು ತೆರವು ಮಾಡಿದ್ದಾರೆ.

-ಶ್ರೀನಿವಾಸ, ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ, ಕೆಎಸ್‌ಆರ್‌ಟಿಸಿ

ಬಸ್ ನಿಲ್ದಾಣದಲ್ಲಿ ಪ್ರತಿಭಟನೆಗೆ ಅನುಮತಿ ನೀಡಿದವರ್‍ಯಾರು...!

ಸರ್ಕಾರಿ ಕಟ್ಟಡಗಳು, ವಾಹನಗಳು ಸೇರಿದಂತೆ ಯಾವುದೇ ಸ್ಥಳದಲ್ಲಿ ರಾಜಕೀಯ ಪಕ್ಷಗಳ ಪ್ರತಿಭಟನೆಗೆ ಅನುಮತಿ ಪಡೆಯುವ ಕಟ್ಟುನಿಟ್ಟಿನ ಕಾನೂನು ಇದೆ. ಆದರೆ ಮೈಸೂರಿನಲ್ಲಿ ಇಂದು ಕಾಂಗ್ರೆಸ್ ಕಾರ್ಯಕರ್ತರು ಗ್ರಾಮಾಂತರ ಬಸ್ ನಿಲ್ದಾಣವನ್ನು ತಮ್ಮ ಪ್ರತಿಭಟನೆ ಸ್ಥಳವಾಗಿಸಿಕೊಂಡರು.

ಬಸ್ ನಿಲ್ದಾಣದಲ್ಲಿ ಬಸ್‌ಗಳಿಗೆ 'ಸ್ಟಾಪ್ ವೋಟ್ ಚೋರಿ' ಅಭಿಯಾನದ ಸ್ಟಿಕ್ಕರ್‌ಗಳನ್ನು ಅಂಟಿಸಿದರು. ಕಾರ್ಯಕರ್ತರ ದಂಡು ಘೋಷಣಾ ಫಲಕಗಳನ್ನು ಹಿಡಿದು ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಕಾಂಗ್ರೆಸ್ ಕಾರ್ಯಕರ್ತರಿಗೆ ಬಸ್ ನಿಲ್ದಾಣಕ್ಕೆ ಹೋಗಲು ಪೊಲೀಸರು ಹೇಗೆ ಅವಕಾಶ ನೀಡಿದರು ಎಂದು ಪ್ರಯಾಣಿಕರೊಬ್ಬರು ಪ್ರಶ್ನಿಸಿ, ಇದೊಂದು ವ್ಯವಸ್ಥೆಯಾ ಎಂದು ಬೇಸರಿಸಿದರು.

ರೈಲು ಪ್ರಯಾಣದಲ್ಲಿ 'ರೌಂಡ್ ಟ್ರಿಪ್ ಪ್ಯಾಕೇಜ್' ಘೋಷಣೆ

ಮೈಸೂರು,ಆ.19(ಪಿಎಂ)– ರೈಲ್ವೆ ಇಲಾಖೆ ವತಿಯಿಂದ ದಸರಾ ಸೇರಿದಂತೆ ವಿವಿಧ ಹಬ್ಬಗಳ ದಿನಗಳಲ್ಲಿ ಪ್ರಯಾಣಕ್ಕಾಗಿ 'ರೌಂಡ್ ಟ್ರಿಪ್ ಪ್ಯಾಕೇಜ್' ಶೀರ್ಷಿಕೆಯಡಿ ಪ್ರಯೋಗಾತ್ಮಕ ಯೋಜನೆ ಘೋಷಿಸಲಾಗಿದೆ.

ಈ ಯೋಜನೆಯಡಿ ನಿರ್ದಿಷ್ಟ ಅವಧಿಯಲ್ಲಿ ಹೊರಡುವ ಮತ್ತು ಹಿಂತಿರುಗುವ ಪ್ರಯಾಣ ಸಂಬಂಧ ಟಿಕೆಟ್‌ಗಳನ್ನು ಬುಕ್ ಮಾಡಿದವರಿಗೆ ರಿಯಾಯಿತಿ ಲಭ್ಯವಾಗಲಿದೆ. ಈ ಸಂಬಂಧ ಟಿಕೆಟ್‌ಗಳ ಬುಕ್ಕಿಂಗ್ ಆ.14ರಿಂದ ಆರಂಭವಾಗಿದೆ. ಹೊರಡುವ ಪ್ರಯಾಣದ ಟಿಕೆಟ್‌ಗಳನ್ನು ಅ.13ರಿಂದ ಅ.26ರವರೆಗೆ ಇರುವ ಪ್ರಯಾಣ ದಿನಾಂಕಗಳಿಗೆ ಮೊದಲು ಬುಕ್ ಮಾಡಬೇಕು. ಹಿಂತಿರುಗುವ ಟಿಕೆಟ್‌ಗಳನ್ನು ನ.17ರಿಂದ ಡಿ.1ರವರೆಗೆ ಇರುವ ಪ್ರಯಾಣ ದಿನಾಂಕಗಳಿಗೆ ಕನೆಕ್ಟಿಂಗ್ ಪ್ರಯಾಣ ಸೌಲಭ್ಯ ಬಳಸಿ ಬುಕ್ ಮಾಡಬಹುದು. ಹಿಂತಿರುಗುವ ಟಿಕೆಟ್‌ಗಳಿಗೆ ಅಡ್ವಾನ್ಸ್ ರಿಸರ್ವೇಶನ್ ಅವಧಿ ಅನ್ವಯಿಸುವುದಿಲ್ಲ.

ಈ ಸೌಲಭ್ಯವು ಎರಡೂ ದಿಕ್ಕಿನ ದೃಢೀಕೃತ ಟಿಕೆಟ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಹಿಂತಿರುಗುವ ಪ್ರಯಾಣದ ಮೂಲ ದರದ ಮೇಲೆ ಶೇ.20ರಷ್ಟು ರಿಯಾಯಿತಿ ದೊರೆಯಲಿದೆ. ಈ ಯೋಜನೆ ಅದೇ ಕ್ಲಾಸ್ ಮತ್ತು ಒಂದೇ ಮೂಲಗಮ್ಯ (ಒರಿಜಿನ್–ಡೆಸ್ಟಿನೇಷನ್) ಸ್ಥಳಗಳಿಗೆ ಮಾತ್ರ ಅನ್ವಯಿಸುತ್ತದೆ. ಈ ಯೋಜನೆಯಡಿ ಬುಕ್ ಮಾಡಿದ ಟಿಕೆಟ್‌ಗಳಿಗೆ ಹಣ ಮರುಪಾವತಿ ನೀಡಲಾಗುವುದಿಲ್ಲ.

ಈ ಯೋಜನೆಯು ಎಲ್ಲಾ ಕ್ಲಾಸ್ ಮತ್ತು ಎಲ್ಲಾ ರೈಲುಗಳು, ವಿಶೇಷ ರೈಲುಗಳನ್ನು (ಬೇಡಿಕೆಯ ಮೇಲೆ ರೈಲುಗಳಿಗೆ) ಸೇರಿಸಿ ಅನ್ವಯವಾಗುತ್ತದೆ. ಆದರೆ ಫ್ಲೆಕ್ಸಿ ಫೇರ್ ಯೋಜನೆಯಡಿ ನಡೆಯುವ ರೈಲುಗಳಿಗೆ ಅನ್ವಯಿಸುವುದಿಲ್ಲ. ಬುಕ್ ಮಾಡಿದ ಟಿಕೆಟ್‌ಗಳ ತಿದ್ದುಪಡಿಗೆ ಅವಕಾಶವಿಲ್ಲ. ಜೊತೆಗೆ ರಿಯಾಯಿತಿಗಳು, ರೈಲು ಪ್ರಯಾಣ ಕೂಪನ್‌ಗಳು, ವೋಚರ್‌ಗಳು, ಪಾಸ್‌ಗಳು, ಪಿಟಿಓಗಳು ಅಥವಾ ಇತರ ಸೌಲಭ್ಯಗಳು ಈ ಯೋಜನೆಯಡಿ ಅನ್ವಯಿಸುವುದಿಲ್ಲ.

ಹಬ್ಬದ ಸಂದರ್ಭದಲ್ಲಿನ ಪ್ರಯಾಣವನ್ನು ಸುಗಮಗೊಳಿಸಲು ಮತ್ತು ಪ್ರಯಾಣಿಕರಿಗೆ ಅನುಕೂಲ ಒದಗಿಸಲು ಹಾಗೂ ಟ್ರಾಫಿಕ್ ಅನ್ನು ಉಭಯ ದಿಕ್ಕುಗಳಲ್ಲಿ ಸಮರ್ಪಕವಾಗಿ ಹಂಚಿಕೊಳ್ಳಲು ಈ ವಿಶೇಷ ಯೋಜನೆ ರೂಪಿಸಲಾಗಿದೆ. ಪ್ರಯಾಣಿಕರು ಈ ಸೇವೆಯ ಸದ್ಬಳಕೆ ಮಾಡಿಕೊಳ್ಳಬಹುದು ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹಣಕಾಸು ವ್ಯವಸ್ಥಾಪಕ ಹಾಗೂ ಸಾರ್ವಜನಿಕ ಸಂಪರ್ಕ ಅಧಿಕಾರಿ ವೃಷ್ಟಿ ಎಸ್.ಹುಲ್ಲಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾದವ ಗೊಲ್ಲರ ಬಳಗದಿಂದ ಶ್ರೀಕೃಷ್ಣ ಜನ್ಮಾಷ್ಟಮಿ...



ಮೈಸೂರಿನ ಕೆಆರ್ ಮೊಹಲ್ಲಾದ ಹುಲ್ಲಿನಬೀದಿಯ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಯಾದವ ಗೊಲ್ಲರ ಬಳಗದ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಕೃಷ್ಣನ ವಿಗ್ರಹವನ್ನು ತೊಟ್ಟಿಲಿನಲ್ಲಿ ಕೂರಿಸಿ ತೂಗಲಾಯಿತು. ಜೊತೆಗೆ ದೇವಸ್ಥಾನದ ಗರ್ಭಗುಡಿಯಲ್ಲಿ ಕೃಷ್ಣನ ವಿಗ್ರಹವನ್ನು ಹೂವಿನಿಂದ ಅಲಂಕರಿಸಿ ವಿಶೇಷ ಪೂಜೆ ನೆರವೇರಿಸಲಾಯಿತು.

ಬಿರುಸುಗೊಂಡ ದಸರಾ ಸಿದ್ಧತಾ ಕಾರ್ಯ

ರಸ್ತೆ ದುರಸ್ತಿ, ವಿವಿಧ ವೃತ್ತಗಳ ಪ್ರತಿಮೆಗಳ ಸ್ವಚ್ಛತೆ



ದಸರಾ ಆನೆ ಧನಂಜಯನಿಗೆ ಮಾವುತ, ಕಾವಾಡಿ ಹಾಗೂ ಸಹಾಯಕರಿಂದ ಮಹಾ ಮಜ್ಜನ. ಮತ್ತೊಂದೆಡೆ ಮಾವುತರು, ಕಾವಾಡಿಗರ ಕುಟುಂಬದ ಮಹಿಳೆಯರು ಬಟ್ಟೆ ಸ್ವಚ್ಛ ಮಾಡುತ್ತಿರುವುದು. (ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್)



ಮೈಸೂರಿನ ಜಯಚಾಮರಾಜೇಂದ್ರ ವೃತ್ತ(ಹಾರ್ಡಿಂಗ್)ದಲ್ಲಿರುವ ಜಯಚಾಮರಾಜೇಂದ್ರ ಅವರ ಪ್ರತಿಮೆ ಸ್ವಚ್ಛಗೊಳಿಸುತ್ತಿರುವುದು

ಮೈಸೂರು,ಆ.19(ಎಂಟಿವೈ)– ದಸರಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸಿದ್ಧತಾ ಕಾರ್ಯಗಳು ಆರಂಭವಾಗಿದ್ದು, ಅರಮನೆ ಆವರಣದಲ್ಲಿ ರಸ್ತೆ ದುರಸ್ತಿ ಹಾಗೂ ವಿವಿಧ ವೃತ್ತಗಳಲ್ಲಿನ ಪ್ರತಿಮೆಗಳ ಸ್ವಚ್ಛತಾ ಕಾರ್ಯ ಆರಂಭವಾಗಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಆರಂಭಕ್ಕೆ ಕೇವಲ 34 ದಿನ ಮಾತ್ರ ಇರುವುದರಿಂದ ಸಿದ್ಧತಾ ಕಾರ್ಯ ಆರಂಭವಾಗಿದೆ. ಕಳೆದ ಕೆಲ ದಿನಗಳಿಂದ ತುಂತುರು ಮಳೆ ಹಾಗೂ ಮೋಡ ಕವಿದ ವಾತಾವರಣವಿದ್ದ ಹಿನ್ನೆಲೆಯಲ್ಲಿ ದಸರಾ ಸಿದ್ಧತಾ ಕಾರ್ಯಕ್ಕೆ ಅಡಚಣೆ ಉಂಟಾಗಿತ್ತು. ಆದರೆ, ಇದೀಗ ಸಣ್ಣಪುಟ್ಟ ಕಾಮಗಾರಿ ಆರಂಭಿಸುವ ಮೂಲಕ ದಸರಾಗೆ ಸಿದ್ಧತೆ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ.

ಮೈಸೂರಿನ ಕೃಷ್ಣರಾಜ ಒಡೆಯರ್, ಚಾಮರಾಜ ಒಡೆಯರ್, ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿರುವ ಪ್ರತಿಮೆಗಳ ಸಚ್ಛತಾ ಕಾರ್ಯದೊಂದಿಗೆ ಆ ವೃತ್ತಕ್ಕೆ ದೀಪಾಲಂಕಾರ ಮಾಡಲು ಬೇಕಾದ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ವೃತ್ತದ ಒಳ ಅಳತೆಗೆ ಅನುಗುಣವಾಗಿ ವಿದ್ಯುತ್ ದೀಪಾಲಂಕಾರಕ್ಕಾಗಿ ವಿವಿಧ ಆಕೃತಿಯಲ್ಲಿ ಸಣ್ಣ ಕಬ್ಬಿಣದ ಸಲಾಕೆಯನ್ನು ಜೋಡಣೆಗೆ ವೆಲ್ಡಿಂಗ್ ಮಾಡುವ ಕಾರ್ಯ ಆರಂಭಿಸಲಾಗಿದೆ. ಅಲ್ಲದೆ, ವೃತ್ತದ ಒಳಭಾಗದಲ್ಲಿ ಸಂಗ್ರಹವಾಗಿರುವ ಧೂಳು ಹಾಗೂ ಪ್ರತಿಮೆಯನ್ನು ಸ್ವಚ್ಛಗೊಳಿಸಲಾಗುತ್ತಿದೆ.



ಅರಮನೆ ಆವರಣದ ತ್ರಿನೇಶ್ವರ ದೇವಾಲಯದ ಪಕ್ಕದ ರಸ್ತೆಯ ದುರಸ್ತಿ ಕೈಗೆತ್ತಿಕೊಳ್ಳಲಾಗಿದೆ.

ಅರಮನೆ ಆವರಣದಲ್ಲಿ ರಸ್ತೆ ರಿಪೇರಿ: ದಸರಾ ಗಜಪಡೆ ಬೀಡು ಬಿಟ್ಟಿರುವ ಅರಮನೆ ಆವರಣದ ರಸ್ತೆ ದುರಸ್ತಿ ಪ್ರಕ್ರಿಯೆ ಆರಂಭಿಸಲಾಗಿದೆ. ತ್ರಿನೇಶ್ವರ ದೇವಾಲಯದ ಪಕ್ಕದ ರಸ್ತೆಯಲ್ಲಿ ಉಂಟಾಗಿದ್ದ ಗುಂಡಿ ಸರಿ ಮಾಡುವ ನಿಟ್ಟಿನಲ್ಲಿ ಇಡೀ ರಸ್ತೆಯನ್ನೇ ಸಮತಟ್ಟು ಮಾಡಲಾಗುತ್ತಿದ್ದು, ಪಕ್ಕದಲ್ಲಿ ಅಳವಡಿಸಿದ್ದ ಇಂಟರ್‌ಲಾಕ್ ಅನ್ನು ಮತ್ತೆ ವ್ಯವಸ್ಥಿತವಾಗಿ ಮರುಜೋಡಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಅಲ್ಲದೆ, ಕೋಟೆ ಬಿಸಿಲು ಮಾರಮ್ಮ ದೇವಾಲಯದ ಪಕ್ಕದಿಂದ ಜಯಮಾರ್ತಾಂಡ ದ್ವಾರಕ್ಕೆ ಹೊಂದಿಕೊಂಡಂತೆ ಇರುವ ಪಾರ್ಕಿಂಗ್ ಸ್ಥಳದಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವು ಮಾಡಿ, ಆ ಸ್ಥಳವನ್ನು ಜೆಸಿಬಿ ಬಳಸಿ, ಸಮತಟ್ಟು ಮಾಡಲಾಗಿದೆ. ಇದರಿಂದ ದಸರಾ ವೇಳೆ ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರ ವಾಹನ ನಿಲುಗಡೆಗೆ ಹೆಚ್ಚುವರಿ ಸ್ಥಳಾವಕಾಶ ಮಾಡಿದಂತಾಗಿದೆ.

ಅರಮನೆಯಲ್ಲಿ ಹೂವಿನ ಲೋಕ: ದಸರಾ ಮಹೋತ್ಸವ ಸೆ.22ರಿಂದ ಆರಂಭವಾಗುವ ನವರಾತ್ರಿ ಉತ್ಸವ ಅರಮನೆ ಆವರಣದಲ್ಲಿ ಅ.2ರಂದು ಜಂಬೂಸವಾರಿ ಮೆರವಣಿಗೆ ಮೂಲಕ ಸಮಾಪ್ತಿಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಅರಮನೆ ವೀಕ್ಷಿಸಲು ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅರಮನೆ ಆವರಣದ ಉದ್ಯಾನವನದಲ್ಲಿ ಜೋಡಣೆ ಮಾಡಲು ವಿವಿಧ ಬಗೆಯ ಹೂವಿನ ಗಿಡಗಳನ್ನು ಬೆಳೆಸಲಾಗಿದ್ದು, ಅವುಗಳಿಗೆ ನೀರುಣಿಸಿ ಪೋಷಿಸಲಾಗುತ್ತಿದೆ.



ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಗೆ ಆಲದ ಸೊಪ್ಪು ಸರಬರಾಜು.



ಅರಮನೆ ಆವರಣದ ಉದ್ಯಾನವನದಲ್ಲಿ ಜೋಡಣೆ ಮಾಡಲು ಬೆಳೆಸಿರುವ ಅಲಂಕಾರಿಕ ಗಿಡಗಳನ್ನು, ಪೋಷಿಸುತ್ತಿರುವ ಸಿಬ್ಬಂದಿ.

ಧರ್ಮಸ್ಥಳ ಪ್ರಕರಣ: ಎಸ್‌ಐಟಿ ತನಿಖೆಯಲ್ಲಿ ಮಣ್ಣು, ಮೂಳೆಗಳ ವಿಧಿವಿಜ್ಞಾನ ವಿಶ್ಲೇಷಣೆ

ಬೆಂಗಳೂರು, ಆ.19– ಧರ್ಮಸ್ಥಳದಲ್ಲಿ ಶವಗಳ ಸಮಾಧಿ ಪ್ರಕರಣ ಕೇಸಿನ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ವಶಪಡಿಸಿಕೊಂಡ ಮಣ್ಣು ಮತ್ತು ಅಸ್ಥಿಪಂಜರದ ಅವಶೇಷಗಳ ವಿಧಿವಿಜ್ಞಾನ ಪರೀಕ್ಷೆಯು ಈಗ ಮುಖ್ಯವಾಗಿದೆ.

1995 ರಿಂದ 2014 ರ ನಡುವೆ ಅನೇಕ ಶವಗಳನ್ನು ಧರ್ಮಸ್ಥಳ ಸುತ್ತಮುತ್ತ ಹೂತು ಹಾಕಿದ್ದಾರೆಂದು ಹೇಳಿಕೊಂಡ ಮಾಜಿ ನೈರ್ಮಲ್ಯ ಕಾರ್ಯಕರ್ತ ಪಟ್ಟಿ ಮಾಡಿದ 17 ಸ್ಥಳಗಳನ್ನು ಅಗೆದ ನಂತರ ಧರ್ಮಸ್ಥಳದಲ್ಲಿ ಯಾವುದೇ ಪ್ರಮುಖ ಅಸ್ಥಿಪಂಜರದ ಅವಶೇಷಗಳು ಪತ್ತೆಯಾಗದ ಕಾರಣ, ಈಗ ಸಿಕ್ಕಿರುವ ಅಸ್ಥಿಪಂಜರದ ಅವಶೇಷಗಳು ಮತ್ತು ಮಣ್ಣಿನ ವಿಧಿವಿಜ್ಞಾನ ಪರೀಕ್ಷೆಯತ್ತ ತಂಡ ಗಮನಹರಿಸುತ್ತಿದೆ.

ಲೊಕಾರ್ಡ್ ತತ್ವವನ್ನು ಆಧರಿಸಿದ ಮಣ್ಣು ವಿಜ್ಞಾನವು, ವಿಧಿವಿಜ್ಞಾನದಲ್ಲಿ ಒಂದು ಪ್ರಮುಖ ವಿಭಾಗವಾಗಿದೆ ಮತ್ತು ಅಸ್ಥಿಪಂಜರಗಳ ಹೊರತೆಗೆಯುವ ಪ್ರಕರಣಗಳಲ್ಲಿ ಕಡ್ಡಾಯವಾಗಿದೆ. ಮೂಳೆಗಳು ಮತ್ತು ಮಣ್ಣಿನ ವಿಧಿವಿಜ್ಞಾನ ವಿಶ್ಲೇಷಣೆಯು ಹೊರತೆಗೆಯುವ ಪ್ರಕರಣಗಳಲ್ಲಿ ಪ್ರಮುಖ ವೈಜ್ಞಾನಿಕ ಪುರಾವೆಗಳನ್ನು ನೀಡುತ್ತದೆ.

ಮೂಳೆಗಳಲ್ಲಿ ವಿಷ ಕಂಡುಬಂದರೆ, ಸಮಾಧಿ ಸ್ಥಳ ಮತ್ತು ಸುತ್ತಮುತ್ತಲಿನ ಮಣ್ಣಿನ ರಾಸಾಯನಿಕ ವಿಶ್ಲೇಷಣೆಯು ವಿಷದಿಂದ ಸಾವು ಸಂಭವಿಸಿದೆಯೇ ಅಥವಾ ಮಣ್ಣಿನಲ್ಲಿರುವ ಆರ್ಸೆನಿಕ್, ಸೀಸ ಅಥವಾ ಇತರ ರಾಸಾಯನಿಕಗಳ ಉಪಸ್ಥಿತಿಯಿಂದ ಸಾವು ಸಂಭವಿಸಿದೆಯೇ ಎಂಬುದರ ಕುರಿತು ಸ್ಪಷ್ಟತೆಯನ್ನು ನೀಡುತ್ತದೆ. ಮಣ್ಣಿನಲ್ಲಿರುವ ರಾಸಾಯನಿಕಗಳು ಮೂಳೆಗಳನ್ನು ಕಲುಷಿತಗೊಳಿಸುತ್ತವೆ ಎಂದು ಹೆಸರು ಹೇಳಲು ಇಚ್ಛಿಸದ ವಿಧಿವಿಜ್ಞಾನ ತಜ್ಞರು ಹೇಳುತ್ತಾರೆ.

ಮಣ್ಣಿನ ವಿಜ್ಞಾನವನ್ನು ಕಡಿಮೆ ಅಂದಾಜು ಮಾಡಲಾಗಿದ್ದರೂ, ಕ್ರಿಮಿನಲ್ ಪ್ರಕರಣ ಅಧ್ಯಯನಗಳಲ್ಲಿ ಇದು ಒಂದು ಪ್ರಮುಖ ಸಾಧನವಾಗಿದೆ ಎಂದು ಅವರು ಹೇಳುತ್ತಾರೆ. ಕಡಿಮೆ ಮಳೆ ಮತ್ತು ಕಡಿಮೆ ತೇವಾಂಶವಿರುವ ಒಣ ಪ್ರದೇಶದಲ್ಲಿ, ಅಸ್ಥಿಪಂಜರಗಳು ಮಣ್ಣಿನಲ್ಲಿ 30 ರಿಂದ 50 ವರ್ಷಗಳವರೆಗೆ ಸಂರಕ್ಷಿಸಲ್ಪಡಬಹುದು. ಆದರೆ ಕರಾವಳಿ ಪ್ರದೇಶಗಳು ಮತ್ತು ನದಿಗಳ ಸಮೀಪವಿರುವ ಸ್ಥಳಗಳಲ್ಲಿ, ಭಾರಿ ಮಳೆ ಮತ್ತು ಹೆಚ್ಚಿನ ಮಣ್ಣಿನ ತೇವಾಂಶವಿದ್ದರೆ, ಮೂಳೆಗಳನ್ನು 10 ರಿಂದ 15 ವರ್ಷಗಳಲ್ಲಿ ಪುಡಿ ಮಾಡಬಹುದು, ಅಂತಹ ಸ್ಥಳಗಳಲ್ಲಿ, ದೀರ್ಘಕಾಲದವರೆಗೆ ಅಸ್ಥಿಪಂಜರದ ಅವಶೇಷಗಳು ಪತ್ತೆಯಾಗದಿರಬಹುದು ಎಂದು ತಜ್ಞರು ಹೇಳುತ್ತಾರೆ.

ಪುರಾತತ್ವ ಶಾಸ್ತ್ರದ ಅವಶೇಷಗಳ ಚಿಹ್ನೆಗಳನ್ನು ಅಳಿಸಿಹಾಕುವುದನ್ನು ಮತ್ತು ಪ್ರಮುಖ ರಾಸಾಯನಿಕ ಗುರುತುಗಳನ್ನು ದುರ್ಬಲಗೊಳಿಸುವುದನ್ನು ತಪ್ಪಿಸಲು ನಿಯಂತ್ರಿತ ರೀತಿಯಲ್ಲಿ ನಡೆಸಲಾಗುವ ಅಗೆಯುವಿಕೆಯ ಸಮಯದಲ್ಲಿ, ವಿಧಿವಿಜ್ಞಾನ ತಜ್ಞರು ರಾಸಾಯನಿಕ ವಿಶ್ಲೇಷಣೆಗಾಗಿ ಅಸ್ಥಿಪಂಜರದ ಅವಶೇಷಗಳೊಂದಿಗೆ ಸುಮಾರು 500 ಗ್ರಾಂ ಮಣ್ಣಿನ ಮಾದರಿಯನ್ನು ಸಂಗ್ರಹಿಸುತ್ತಾರೆ.

ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅಂಗೀಕಾರ

ಬೆಂಗಳೂರು, ಆ.19(ಕೆಎಂಶಿ)–ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ 2025ಕ್ಕೆ ಕೆಲವು ತಿದ್ದುಪಡಿಗಳೊಂದಿಗೆ ವಿಧಾನಸಭೆಯಲ್ಲಿಂದು ಅನುಮೋದನೆ ದೊರೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಮಾತನಾಡಿ, ಇತ್ತೀಚೆಗೆ ಕೆಲವು ಸೌಹಾರ್ದ ಸಂಸ್ಥೆಗಳಲ್ಲಿ ಕಂಡು ಬಂದ ಲೋಪ, ಹೈರಿಸ್ಕ್ ನಿರ್ವಹಣೆ ಗಮನಿಸಿ ತಿದ್ದುಪಡಿ ವಿಧೇಯಕ ತರಲಾಗಿದೆ ಎಂದರು.

ಸರ್ಕಾರಿ ಸಂಸ್ಥೆಗಳಿಗೆ ಆರ್ಥಿಕ ಭದ್ರತೆ ಇರಬೇಕು. ರಾಜ್ಯಪಾಲರು ನೀಡಿದ ಸಲಹೆ–ಸೂಚನೆ ಪರಿಗಣಿಸಿದ್ದೇವೆ. ಚಾಲ್ತಿಯಲ್ಲಿನ ಸಹಕಾರಿ ಕ್ಷೇತ್ರ ಚುನಾವಣಾ ಪದ್ಧತಿ ಮುಂದುವರೆಯಲಿದೆ.

ರಾಜ್ಯದಲ್ಲಿ 6,546 ಸೌಹಾರ್ದ ಸಹಕಾರ ಸಂಸ್ಥೆಗಳು ನೋಂದಣಿಯಾಗಿವೆ. 958 ಮುಚ್ಚುವ ಹಂತದಲ್ಲಿವೆ. 32 ಸಂಸ್ಥೆಗಳು ಸಮಸ್ಯಾತ್ಮಕವಾಗಿವೆ. 12 ಸಂಸ್ಥೆಗಳ ವಿರುದ್ಧ ಎಫ್‌ಐಆರ್ ದಾಖಲಾಗಿವೆ. 3 ಸಂಸ್ಥೆ ವಿರುದ್ಧ ಪಿಸಿಆರ್ ಆಗಿದೆ. 9 ಸಂಸ್ಥೆಗಳ ವಿರುದ್ಧ ಪೊಲೀಸ್ ತನಿಖೆ ನಡೆಯುತ್ತಿದೆ.

ಅಕ್ರಮ ಮತ್ತು ವಂಚನೆಗೆ ಸಂಬಂಧಿಸಿದಂತೆ 32 ಪ್ರಕರಣಗಳು ದಾಖಲಾಗಿವೆ. ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್, ಸೌಹಾರ್ದ ಸಹಕಾರ ಸಂಸ್ಥೆಗಳ ಸಭೆ ನಡೆಸಿ, ಠೇವಣಿ ಹಣಕ್ಕೆ ಸೂಕ್ತ ಬಡ್ಡಿದರ ನಿಗದಿ ಮಾಡಲಾಗುವುದು.

ಠೇವಣಿ ಹಣಕ್ಕೆ ವರ್ಷಕ್ಕೊಮ್ಮೆ ಅನುಮತಿ ಪಡೆಯಬೇಕೆಂಬ ತಿದ್ದುಪಡಿ ಮಾಡಲಾಗುವುದು. ನಿರ್ದೇಶಕರ ಸಂಖ್ಯೆಯನ್ನು 21ರ ಬದಲಿಗೆ ಗರಿಷ್ಠ ಸಂಖ್ಯೆಯ ನಿರ್ದೇಶಕರು ಎಂದು ತಿದ್ದುಪಡಿ ಮಾಡಲಾಗುವುದು. ಸಹಕಾರ ಲೆಕ್ಕ ಪರಿಶೋಧಕ ನಿರ್ದೇಶಕರ ಮೂಲಕ ಲೆಕ್ಕ ಪರಿಶೋಧನೆ ಖಚಿತಪಡಿಸಿಕೊಳ್ಳಬೇಕಿದ್ದು, ಸಹಕಾರ ಇಲಾಖೆ ಲೆಕ್ಕ ಪರಿಶೋಧಕರನ್ನು ನಿಯೋಜಿಸಲಾಗುವುದು. ಹೊಸದಾಗಿ 378 ಲೆಕ್ಕ ಪರಿಶೋಧಕರ ನೇಮಕ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ.

ಸಾರ್ವಕಾಲಿಕ ಭತ್ತದ ತೋರಣದ ಅಂದ–ಚಂದಕ್ಕೆ ಮಾರುಹೋದ ನಗರವಾಸಿಗಳು

ಮೈಸೂರು, ಆ.19(ವಿವಿಹೆಚ್)– ನಮ್ಮ ಭಾರತೀಯ ಪರಂಪರೆಯಲ್ಲಿ ಹಬ್ಬ, ಹರಿದಿನಗಳಲ್ಲಿ ಮನೆ ಸಿಂಗರಿಸಿ, ಮಾವಿನ ತೋರಣವನ್ನು ಕಟ್ಟುವ ಸಂಪ್ರದಾಯವಿದೆ. ಮನೆಯ ಮುಖ್ಯದ್ವಾರ ಮತ್ತು ಇತರೆ ಬಾಗಿಲುಗಳನ್ನು ಅಂದವಾಗಿಸುವ, ಪಾಸಿಟಿವ್ ಎನರ್ಜಿ ಹೊಂದುವ ಉದ್ದೇಶದಿಂದಲೂ ತೋರಣಗಳನ್ನು ಹಾಕುವುದುಂಟು. ಇಂತಹ ತೋರಣಗಳ ಸಾಲಿಗೆ ಈಗ ಭತ್ತದ ತೋರಣವನ್ನು ಸಹ ಹಾಕುವುದು ಈಗ ಹೆಚ್ಚು ರೂಢಿಯಲ್ಲಿದೆ.

ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್‌ನ ಬಣ್ಣ ಬಣ್ಣದ ತೋರಣಗಳ ನಡುವೆ ದೇಶಿ ಉತ್ಪನ್ನಗಳು ಕೂಡ ರಾರಾಜಿಸುತ್ತಿವೆ. ಪ್ಲಾಸ್ಟಿಕ್‌ನ್ನು ಕೊಂಚ ಮಟ್ಟಿಗೆ ದೂರ ಸರಿಸಿ ನೈಸರ್ಗಿಕವಾದ ವಸ್ತುಗಳು ಅವುಗಳ ಸ್ಥಾನವನ್ನು ಪಡೆದುಕೊಳ್ಳುತ್ತಿವೆ. ಮನೆಯ ಅಲಂಕಾರಕ್ಕೆ ಪ್ರತಿಯೊಬ್ಬರೂ ಹೆಚ್ಚಿನ ಮಹತ್ವ ನೀಡುತ್ತಾರೆ. ಅದರಲ್ಲಿಯೂ ನೈಸರ್ಗಿಕವಾದ ತೋರಣಗಳ ಕಡೆ ಜನರು ಹೆಚ್ಚು ವಾಲುತ್ತಿರುವುದು ಮೆಚ್ಚುಗೆಯ ಸಂಗತಿಯಾಗಿದೆ.

ಮನೆ ಸಣ್ಣದಿರಲಿ, ದೊಡ್ಡದಿರಲಿ ಪ್ರತಿಕೋಣೆಯ ಬಾಗಿಲಿಗೆ, ಗೋಡೆಗೆ ಈ ಅಲಂಕಾರ ಮಾಡಿ ಸುಂದರವಾಗಿ ಕಾಣುವ ಹಾಗೆ ಮಾಡುತ್ತಾರೆ. ಆದರೆ ಈ ಭತ್ತದ ತೋರಣವನ್ನು ಮನೆಯ ಬಾಗಿಲಿಗೆ ಮಾತ್ರವಲ್ಲದೇ ದೇವಸ್ಥಾನದ ಬಾಗಿಲಿಗೂ ಕೂಡಾ ಹಾಕಬಹುದಾಗಿದೆ.



ವ್ಯಾಪಾರಕ್ಕಾಗಿ ಇಟ್ಟಿರುವ ಭತ್ತದ ತೋರಣಗಳು

ದೀಪಾವಳಿ ಎಂದಾಗ ನರಕಾಸುರನ ವಧೆ, ಶ್ರೀರಾಮ ತನ್ನ ವನವಾಸ ಮುಗಿಸಿ ಅಯೋಧ್ಯೆಗೆ ಮರಳಿದ ದಿನ ಎಂದು ನಾನಾ ಪ್ರತೀತಿ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಲಕ್ಷ್ಮೀದೇವಿಯನ್ನು ಮನೆಗೆ ಆದರದಿಂದ ಬರಮಾಡಿಕೊಳ್ಳಲು ನಡೆಸುವ ಬೆಳಕಿನ ಹಬ್ಬ ಎಂದೂ ಹೇಳಲಾಗುತ್ತದೆ. ಇಂತಹ ದೀಪಾವಳಿಯಲ್ಲಿ ಪಬಂಗಾಳ, ಛತ್ತೀಸ್‌ಗಡ್ ಸೇರಿದಂತೆ ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ಭತ್ತದ ಅಲಂ ಕಾರಿಕ ವಸ್ತುಗಳಲ್ಲಿ ಹಬ್ಬವನ್ನು ಸಂಭ್ರಮಿಸುವುದುಂಟು. ಇದರಲ್ಲಿ ಬಹಳ ಪ್ರಮುಖ ವಾದುದು ಭತ್ತದ ತೋರಣ. ಇದು ಸಾಕಷ್ಟು ಪ್ರಾಮುಖ್ಯತೆ ಪಡೆದಿದೆ. ಇವುಗಳಿಗೆ ಇಲ್ಲಿ ಜಾಲಾರ್, ತೋರಣ ಅಂತಲೂ ಕರೆಯಲಾಗುತ್ತದೆ.

ಇಂದಿನ ಆಧುನಿಕತೆಯ ಭರಾಟೆಯಲ್ಲಿ ನಶಿಸಿ ಹೋಗುತ್ತಿರುವ ಗ್ರಾಮೀಣ ದೇಶಿ ಕರಕುಶಲ ಕಲೆಗಳು ಮತ್ತೆ ಜೀವತಾಳುತ್ತಿವೆ. ಇಂತಹ ದೇಶಿ ಉತ್ಪನ್ನಗಳ ಬಳಕೆ ಅಧಿಕವಾಗುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.



ಈ ಭತ್ತದ ತೋರಣವನ್ನು ಕಾರವಾರದಿಂದ ಮಾಡಿಸಿ ತರಲಾಗುತ್ತದೆ. ಅಲ್ಲದೇ ಈ ಪೈರನ್ನು ಬೆಳೆಯಲು ನೈಸರ್ಗಿಕ ಗೊಬ್ಬರಗಳನ್ನು ಬಳಸಲಾಗುತ್ತದೆ. ಈ ತೋರಣದ ವಿಶೇಷತೆಯೆಂದರೆ 3–4 ವರ್ಷಗಳವರೆಗೆ ಯಾವುದೇ ರೀತಿಯಲ್ಲಿ ಹಾಳಾಗುವುದಿಲ್ಲ. ಅಲ್ಲದೇ ಕೃತಕ ಬಣ್ಣ, ಹಾಳಾಗದ ಹಾಗೇ ಯಾವುದೇ ರಸಾಯನಿಕಗಳನ್ನು ಸಿಂಪಡಿಸುವುದಿಲ್ಲ. ನೈಸರ್ಗಿಕವಾಗಿಯೇ ತೋರಣವನ್ನು ಮಾಡಲಾಗಿದೆ. ಭತ್ತದ ತೋರಣ ಬಳಸುವುದರಿಂದ ಅದೃಷ್ಟ ಲಕ್ಷ್ಮೀ ಮನೆಗೆ ಆಗಮಿಸುತ್ತಾರೆ. ಹೊರಗಿನ ಯಾವುದೇ ನೆಗೆಟಿವ್ ಎನರ್ಜಿ ಮನೆ ಪ್ರವೇಶ ಮಾಡದಂತೆ ತಡೆಯುತ್ತದೆ ಎಂದು ನಂಬಲಾಗಿದ್ದು, ಮೈಸೂರಲ್ಲೂ ಭತ್ತದ ತೋರಣ ಖರೀದಿ ಹೆಚ್ಚಾಗಿದೆ. ಆರಂಭಿಕ ಬೆಲೆ 350 ರೂ. ನಿಂದ 450 ರೂ. ವರೆಗೆ ಭತ್ತದ ತೋರಣಗಳು ಸಿಗಲಿವೆ.

- ಕೆ.ಆರ್. ಸುಮಂತ್ ಕುಮಾರ್, ವ್ಯಾಪಾರಿ

ಭತ್ತದ ತೋರಣವೇ ಏಕೆ?: ಅರೆಬೇಯಿಸಿದ ಭತ್ತದ ತೋರಣಗಳು ಅಥವಾ ಭತ್ತದ ಒಣಹುಲ್ಲಿನ ತೋರಣಗಳು ಮನೆಗಳಿಗೆ ಸಾಂಪ್ರದಾಯಿಕ ನೋಟವನ್ನು ನೀಡುತ್ತದೆ. ಅಲ್ಲದೆ, ಯುಗಯುಗಾಂತರಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವನ್ನು ಜೀವಂತವಾಗಿರಿಸುತ್ತದೆ. ಜೊತೆಗೆ ಪ್ರಾಣಿಗಳು ಮತ್ತು ಪಕ್ಷಿಗಳನ್ನು ರಕ್ಷಿಸುವ ಮಾರ್ಗವಾಗಿ ತಮ್ಮ ಮನೆಗಳ ಬಾಗಿಲಿನ ಮೇಲೆ ಭತ್ತದ ಹುಲ್ಲು ತೋರಣಗಳನ್ನು ಬಳಸುವುದು ಪ್ರಾಚೀನ ಸಂಪ್ರದಾಯವಾಗಿದೆ. ಪ್ರಾಣಿ, ಪಕ್ಷಿಗಳಿಗೆ ಆಹಾರವಾಗಿಯೂ ಇದನ್ನು ಕಟ್ಟಲಾಗುತ್ತದೆ.

ಮೈಸೂರಲ್ಲೂ ಸಿಗಲಿದೆ ಭತ್ತದ ತೋರಣ: ಮೈಸೂರಿಗೂ ಭತ್ತದ ತೋರಣ ಲಗ್ಗೆಯಿಟ್ಟಿದೆ. ನಗರದ ಕುಕ್ಕರಹಳ್ಳಿ ಕೆರೆಯ ಪದ್ಮ ವೃತ್ತದಿಂದ ಮಾನಸ ಗಂಗೋತ್ರಿಗೆ ತೆರಳುವ ರಾಮವಿಲಾಸ್ ರಸ್ತೆ ಬದಿಯಲ್ಲಿ ಆಕರ್ಷಕ ಭತ್ತದ ತೋರಣಗಳು ಕಾಣಸಿಗುತ್ತದೆ.

ರಾಜಕೀಯ ಹಸ್ತಕ್ಷೇಪ ಇದ್ದಲ್ಲಿ ಸಹಕಾರ ಕ್ಷೇತ್ರಕ್ಕೆ ಉಳಿಗಾಲವಿಲ್ಲ

● ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರ ಆತಂಕ ● ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೆ ನಮ್ಮದೇನು ವಿರೋಧವಿಲ್ಲ ● ಸದನದ ಗಮನ ಸೆಳೆದ ಹುಣಸೂರು ಶಾಸಕರು

ಹುಣಸೂರು, ಆ.19(ಪಿಎಂ)– ಸಹಕಾರ ಕ್ಷೇತ್ರದಲ್ಲಿ ಸರ್ಕಾರ ಮತ್ತು ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ನೀಡಬಾರದು. ಅವಕಾಶ ನೀಡಿದ್ದಲ್ಲಿ ಸಹಕಾರ ಕ್ಷೇತ್ರಕ್ಕೆ ಉಳಿಗಾಲವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರು ಎಚ್ಚರಿಸಿದರು.

ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ ಸಂಬಂಧ ಸದನದಲ್ಲಿ ಅವರು ಮಾತನಾಡಿದರು. ಸಹಕಾರಿ ಕಾಯ್ದೆಯ ಕುರಿತು ವಿಸ್ತೃತ ಚರ್ಚೆ ನಡೆಸುವ ಮೂಲಕ ಸಹಕಾರಿ ಕ್ಷೇತ್ರದ ತತ್ವ ಗಳ ಬಗ್ಗೆ ಸದನ ಹಾಗೂ ಸರ್ಕಾರದ ಗಮನ ಸೆಳೆದರು.

ಮೀಸಲಾತಿಗಿಲ್ಲ ವಿರೋಧ: ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ 2024ರಲ್ಲೇ ಬಂದಿದ್ದು, ಇದಕ್ಕೆ ಕೆಲವು ತಿದ್ದುಪಡಿ ಮಾಡಿ ಮತ್ತೆ ಸದನಕ್ಕೆ ತರಲಾಗಿದೆ. ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೆ ನಮ್ಮ ವಿರೋಧವಿಲ್ಲ. ನಾವೂ ಇದನ್ನು ಸ್ವಾಗತಿಸುತ್ತೇವೆ. ಆದರೆ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿಯನ್ನು ಯಾವ ರೀತಿಯಲ್ಲಿ ಅನುಷ್ಠಾನಕ್ಕೆ ತರಲಾಗುತ್ತದೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟ ಮಾಹಿತಿ ನೀಡಬೇಕಿದೆ ಎಂದರು.

ಸಹಕಾರ ಸಂಘಗಳಿಗಿಲ್ಲ ಸರ್ಕಾರದ ಅನುದಾನ: ಮೀಸಲಾತಿ ಜಾರಿಗೊಂಡಿರುವ ಸ್ಥಳೀಯ ಸಂಸ್ಥೆ ಚುನಾವಣೆಗಳು ಯಾವ ರೀತಿ ನಡೆಯುತ್ತವೆ ಎಂಬುದು ಎಲ್ಲರಿಗೂ ತಿಳಿದಿದೆ. ಅಲ್ಲದೇ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ. ಆದರೆ ಸಹಕಾರ ಸಂಘಗಳಿಗೆ ಸರ್ಕಾರ ಯಾವುದೇ ಅನುದಾನ ಕೊಡುತ್ತಿಲ್ಲ. ಹೀಗಿರುವಾಗ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿಯನ್ನು ಯಾವ ರೀತಿಯಲ್ಲಿ ಸರ್ಕಾರ ಅನುಷ್ಠಾನಕ್ಕೆ ತರಲಿದೆ ಎಂಬುದು ಮುಖ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.



ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರು ಸದನದಲ್ಲಿ ಮಾತನಾಡುತ್ತಿರುವುದು.

ಜಿ.ಡಿ.ಹರೀಶ್‌ಗೌಡರ ಬಗ್ಗೆ ಪ್ರಶಂಸೆ...

ಯುವ ಶಾಸಕ ಜಿ.ಡಿ.ಹರೀಶ್‌ಗೌಡ ಸಹಕಾರಿ ಕ್ಷೇತ್ರದ ನ್ಯೂನತೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡುವುದರ ಜೊತೆಗೆ ಸಹಕಾರ ಕ್ಷೇತ್ರಕ್ಕೆ ಒಳ್ಳೆಯದು ಏನೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ನಮ್ಮಂತಹ ಹಿರಿಯ ಸಹಕಾರಿಗಳಿಗೆ ತಿಳಿ ಹೇಳಿದ್ದಾರೆ ಹಾಗೂ ಸರ್ಕಾರದ ಪ್ರಸ್ತಾವನೆಗೆ ಬಲ ನೀಡಿದ್ದಾರೆ ಎಂದು ಸಚಿವ ಹೆಚ್.ಕೆ.ಪಾಟೀಲ್ ಶ್ಲಾಘಿಸಿದರು. ಈ ಮಧ್ಯೆ ಸಭಾಧ್ಯಕ್ಷರು ಕೂಡ ಜಿ.ಡಿ.ಹರೀಶ್‌ಗೌಡರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಹಕಾರ ಕ್ಷೇತ್ರದಲ್ಲಿ ಸ್ವಾಯತ್ತತೆ ಉಳಿಸಿ: ಸಹಕಾರ ಕ್ಷೇತ್ರದಲ್ಲಿ ಸ್ವಾಯತ್ತತೆ ಉಳಿಯಬೇಕಿದ್ದು, ಸರ್ಕಾರದ ಹಸ್ತಕ್ಷೇಪ ಇರಬಾರದು ಎಂಬುದು ಸಹಕಾರಿ ತತ್ವವಾಗಿದೆ. ಆದರೂ ಸರ್ಕಾರದ ಹಸ್ತಕ್ಷೇಪ ಇರಬೇಕೆಂಬ ಉದ್ದೇಶದೊಂದಿಗೆ ಈ ವಿಧೇಯಕಕ್ಕೆ ತಿದ್ದುಪಡಿ ಮೂಲಕ ಮೀಸಲಾತಿ ತರಲಾಗುತ್ತಿದೆ. ಆದರೆ ಈ ಮೀಸಲಾತಿ ನಿಗದಿ ಮಾಡುವವರು ಯಾರು? ಯಾವ ರೀತಿ ಮೀಸಲಾತಿ ಅನುಷ್ಠಾನಕ್ಕೆ ತರುತ್ತೀರಾ? ಎಂದು ಪ್ರಶ್ನಿಸಿದ ಅವರು, ಸಹಕಾರ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಉಂಟಾದರೆ ಸಹಕಾರ ಸಂಘಗಳು ಉಳಿಯುವುದಿಲ್ಲ. ಆದ್ದರಿಂದ ಸಹಕಾರ ಕ್ಷೇತ್ರದಲ್ಲಿ ಸರ್ಕಾರ ಹಾಗೂ ರಾಜಕೀಯ ಹಸ್ತಕ್ಷೇಪ ಇರಬಾರದು ಎಂದು ಜಿ.ಡಿ.ಹರೀಶ್‌ಗೌಡ ಹೇಳಿದರು.

ಎಲ್ಲರನ್ನೂ ಕೊಂಡೊಯ್ಯಬೇಕಿದೆ: ಶಾಸಕ ಜಿ.ಡಿ.ಹರೀಶ್‌ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಹಕಾರ ಸಚಿವ ಎಚ್.ಕೆ.ಪಾಟೀಲ್, ಇತ್ತೀಚಿನ ದಿನಗಳಲ್ಲಿ ಮೀಸಲಾತಿ ಅವಶ್ಯಕವಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಈವರೆಗೂ ರೈತರು ಮಾತ್ರವೇ ಇರುತ್ತಿದ್ದರು. ಆದರೆ ಇಂದು ಎಲ್ಲರನ್ನೂ ಒಗ್ಗೂಡಿ ಕರೆದೊಯ್ಯಬೇಕಾಗಿದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯಡಿ ಎಲ್ಲರಿಗೂ ಆಡಳಿತ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಅವಕಾಶವನ್ನು ನೀಡಿದರೆ ಎಲ್ಲರೂ ತಮ್ಮ ವಿದ್ವತ್ ಹಾಗೂ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ. ಈ ಕಾರಣಕ್ಕೆ ತಿದ್ದುಪಡಿ ಒಪ್ಪಿಕೊಳ್ಳಬೇಕಿದೆ ಎಂದು ತಿಳಿಸಿದರು.

121ರ ಕಾಯಿದೆ ದುರ್ಬಳಕೆ: 'ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121' ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ದುರ್ಬಳಕೆ ಆಗಿರುವ ಬಗ್ಗೆ ಹಿಂದಿನ ಸಹಕಾರ ಸಚಿವ ರಾಜಣ್ಣ ಅವರು ಒಪ್ಪಿಕೊಂಡಿದ್ದಾರೆ ಎಂದ ಶಾಸಕರು, ಈ ಬಗ್ಗೆ ಉತ್ತರಿಸಬೇಕೆಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಹೆಚ್.ಕೆ.ಪಾಟೀಲ್ ಅವರು ಪ್ರಕರಣ 121 ಅನ್ನು ರಾಜಕೀಯವಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಒಪ್ಪಿಕೊಂಡರು.

ಇಂದು ಮಾಜಿ ಸಿಎಂ ಡಿ.ದೇವರಾಜ ಅರಸು ಜಯಂತಿ



ಕೆ.ಆರ್.ನಗರ, ಆ.19– ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಆಡಳಿತ ಹಾಗೂ ಅರಸು ಯುವಕರ ಸೇವಾ ಅಭಿವೃದ್ಧಿ ಸಂಘ ಮಾವನೂರು ಸಂಯುಕ್ತಾಶ್ರಯದಲ್ಲಿ ಆ.20ರಂದು ಬೆಳಗ್ಗೆ 10 ಗಂಟೆಗೆ ದಿವಂಗತ ಡಿ.ದೇವರಾಜ ಅರಸ್ ಅವರ 110ನೇ ಜನ್ಮ ದಿನಾಚರಣೆಯನ್ನು ಪಟ್ಟಣದ ತಾಲೂಕು ಆಡಳಿತ ಸೌಧ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ.ಮೇಘನ ತಿಳಿಸಿದ್ದಾರೆ.

ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಘನ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಗೌರವ ಉಪಸ್ಥಿತಿಯಲ್ಲಿ ಶಾಸಕ ಡಿ. ರವಿಶಂಕರ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ, ಕೆ.ವಿವೇಕಾನಂದ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗಡ್ಡಮಹೇಶ್, ಪುರಸಭಾಧ್ಯಕ್ಷ ಶಿವುನಾಯಕ್, ಉಪಾಧ್ಯಕ್ಷೆ ಪಲ್ಲವಿ ಆನಂದ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಂ.ಎಸ್.ಮಹದೇವ್ ಹಾಗೂ ಉದಯ್ ಶಂಕರ್, ತಾಪಂ ಆಡಳಿತಾಧಿಕಾರಿ ಕೆ.ಬಿ.ಪ್ರಭುಸ್ವಾಮಿ, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ತಾಪಂ ಇಓ ವಿ.ಪಿ.ಕುಲದೀಪ್, ಸಾಲಿಗ್ರಾಮ ತಹಸೀಲ್ದಾರ್ ರುಕಿಯಾ ಬೇಗಂ, ತಾಪಂ ಇಓ ಎ.ಎನ್.ರವಿ, ಪುರಸಭೆ ಮುಖ್ಯಾಧಿಕಾರಿ ಜಿ.ಎಸ್. ರಮೇಶ್ ಮತ್ತಿತರರು ಭಾಗವಹಿಸುವರು.

ದಿವಂಗತ ಡಿ.ದೇವರಾಜ ಅರಸು ಅವರ ಕುರಿತು ಶಿಕ್ಷಕ ಉದಯಗೌಡ ಪ್ರಧಾನ ಭಾಷಣ ಮಾಡಲಿದ್ದಾರೆ. ಜನ್ಮದಿನೋತ್ಸವದ ಅಂಗವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗೆ ಕ್ರೀಡಾಕೂಟ, ಪ್ರಬಂಧ ಮತ್ತು ಆಶುಭಾಷಣ ಸ್ಪರ್ಧೆ ಏರ್ಪಡಿಸಲಾಗಿದ್ದು, ವಿಜೇತರಾದವರಿಗೆ ಬಹುಮಾನ ವಿತರಣೆ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು.

ಅರಸು ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಕೆ.ಮೇಘನ ಮಾಹಿತಿ ನೀಡಿದರು.

ವಸ್ತುಗಳ ಬೆಲೆ ಏರಿಕೆ ಕಾಂಗ್ರೆಸ್ ಸರ್ಕಾರದ ಸಾಧನೆ

ಮಾಜಿ ಸಚಿವ ಸಾ.ರಾ.ಮಹೇಶ್

ಚುಂಚನಕಟ್ಟೆ, ಆ.19– ಗೃಹಲಕ್ಷ್ಮಿ ಯೋಜನೆಯ 2 ಸಾವಿರ ರೂ. ನೀಡಲು ಸರ್ಕಾರದ ಬಳಿ ಹಣ ಇಲ್ಲದೇ ವಸ್ತುಗಳ ಬೆಲೆ ಏರಿಕೆ ಮಾಡಿ ಜನಸಾಮಾನ್ಯರಿಗೆ ಬರೆ ಎಳೆದಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆಯಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಶ್ರೀರಾಮಪುರ ಗ್ರಾಮಸ್ಥರು ಆಯೋಜಿಸಿದ್ದ ಹುಟ್ಟುಹಬ್ಬ ಆಚರಣೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಕೆ.ಅರ್.ನಗರ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದರು. ಆದರೆ ಈಗಿನ ಮುಖ್ಯಮಂತ್ರಿಗಳು ಕ್ಷೇತ್ರಕ್ಕೆ ಎಷ್ಟು ಅನುದಾನ ನೀಡಿದ್ದಾರೆ. ಅವರು ನೀಡಿರುವ ಅನುದಾನ ಪ್ರಚಾರಕ್ಕೆ ಸೀಮಿತವಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಸನ್ಮಾನಿಸಲಾಯಿತು.

ತಾವು ಶಾಸಕರಾಗಿದ್ದ ವೇಳೆ ಶ್ರೀರಾಮಪುರ ಸೇರಿದಂತೆ ಕ್ಷೇತ್ರದ ವಿವಿಧ ಗ್ರಾಮಗಳಿಗೆ ಮಂಜೂರಾಗಿದ್ದ ಕಾಮಗಾರಿಗಳನ್ನು ಬೇರೆ ಗ್ರಾಮಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಅಲ್ಲದೇ ಮಂಡಿಗನಹಳ್ಳಿ ಏತ ನೀರಾವರಿ ಯೋಜನೆಯನ್ನು ಕಾಳೇನಹಳ್ಳಿಗೆ ವರ್ಗಾಯಿಸಿ ಸೇಡಿನ ರಾಜಕಾರಣ ಮಾಡಲಾಗುತ್ತಿದೆ ಎಂದರು.

ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ಆರಂಭವಾಗದೇ ರೈತರು ಕಬ್ಬನ್ನು ಬೇರೆ ಕಾರ್ಖಾನೆಗೆ ಸಾಗಿಸುತ್ತಿದ್ದು, ಕಳೆದ ಬಾರಿ ಪ್ರತಿ ಟನ್ ಕಬ್ಬು ಸಾಗಾಣಿಕೆ ವೆಚ್ಚ 160 ರೂ. ಇತ್ತು. ಈ ಬಾರಿ 280 ರೂ.ಗಳಿಗೆ ಏರಿಕೆಯಾಗಿದ್ದು, ರೈತರ ಹಿತ ಕಾಯಬೇಕಾದವರು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ತಮ್ಮ ತಾಯಿಯ ಸ್ವಗ್ರಾಮ ಶ್ರೀರಾಮಪುರದಲ್ಲಿ ಬಾಲ್ಯದ ನೆನಪುಗಳನ್ನು ಮಾಜಿ ಶಾಸಕರು ನೆನಪಿಸಿಕೊಂಡರು. ಇದೇ ವೇಳೆ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಅನಸೂಯ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಜೆಡಿಎಸ್ ಮುಖಂಡ ಕೆ.ಆರ್. ಸಂತೋಷ್, ಸಿದ್ದಾಪುರ ಗ್ರಾಪಂ ಸದಸ್ಯ ಎಸ್.ಕೆ.ಅಭಿಲಾಷ್, ಪಿಎಸಿಎಸ್ ಮಾಜಿ ಅಧ್ಯಕ್ಷ ಪ್ರಸನ್ನ, ಎಸ್.ಬಿ.ಶಿವಣ್ಣ, ಡೈರಿ ಮಾಜಿ ಅಧ್ಯಕ್ಷ ಎಸ್.ಟಿ.ನಾರಾಯಣ್, ಸದಸ್ಯ ಹರೀಶ್ ಬಾಬು, ಮುಖಂಡರಾದ ಬೋಜೇಗೌಡ, ರಾಘು, ಕುಳ್ಳೇಗೌಡ, ಭಾಸ್ಕರ್, ರಾಮು, ಕುಬೇರ, ಹೆಚ್.ಎಸ್.ರಾಜು, ಎಂ.ಎಸ್. ರಾಮಚಂದ್ರ, ಚಂದನ್‌ಗೌಡ, ಸತ್ಯನಾರಾಯಣ, ಯಶವಂತ್ ಗೌಡ, ಎಸ್.ಎಸ್. ಬಾಲರಾಜ್, ಶಿವರುದ್ರ, ನಂದೀಶ, ಕೆಇಬಿ ಗಿರೀಶ, ಎಸ್.ಪಿ.ಮಂಜುನಾಥ್, ಮನೋಹರ್, ಮಣಿಶ್ರೀ ಸೇರಿದಂತೆ ಮತ್ತಿತರರಿದ್ದರು.

ಶಾಸಕ ಅನಿಲ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ಹೆಚ್.ಡಿ.ಕೋಟೆ, ಆ.19– ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿರುವುದನ್ನು ಖಂಡಿಸಿ, ಶಾಸಕ ಅನಿಲ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಎಸ್.ಚಿಕ್ಕಮಾದು ಅಭಿಮಾನಿ ಬಳಗದ ತಾಲೂಕು ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಲ್ಮೀಕಿ ಜನಾಂಗದ ಪ್ರಭಾವಿ ಮುಖಂಡ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಏಕಾಏಕಿ ಸಂಪುಟದಿಂದ ವಜಾಗೊಳಿಸಿರುವುದನ್ನು ವಾಲ್ಮೀಕಿ ಸಮುದಾಯ ಹಾಗೂ ಎಸ್.ಚಿಕ್ಕಮಾದು ಅಭಿಮಾನಿ ಬಳಗ ಪ್ರಬಲವಾಗಿ ಖಂಡಿಸುತ್ತದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪ.ಪಂಗಡದ 15 ಮೀಸಲಾತಿ ಕ್ಷೇತ್ರಗಳಲ್ಲಿ 14 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಗೆದ್ದು ಶಾಸಕರಾಗಿದ್ದಾರೆ. ಇದರಿಂದ ಗೊತ್ತಾಗುತ್ತದೆ ವಾಲ್ಮೀಕಿ ಜನಾಂಗ ಹೆಚ್ಚಿನದಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದೆ ಎಂದು. ಈ ಕಾರಣದಿಂದಲೇ ಸಚಿವ ಸಂಪುಟದಲ್ಲಿ ವಾಲ್ಮೀಕಿ ಜನಾಂಗಕ್ಕೆ 3 ಸಚಿವ ಸ್ಥಾನಗಳನ್ನು ನೀಡಿ ನ್ಯಾಯ ಕೊಟ್ಟ ಸರ್ಕಾರ ಇತ್ತೀಚಿನ ದಿನಗಳಲ್ಲಿ ಪಕ್ಷದ ಕೆಲವರ ದ್ವೇಷ, ಕುಮ್ಮಕ್ಕು, ಕುತಂತ್ರಗಳಿಂದ ಇಬ್ಬರು ಸಚಿವರನ್ನು ಸಂಪುಟದಿಂದ ಕೈಬಿಟ್ಟಿರುವುದು ವಾಲ್ಮೀಕಿ ಜನಾಂಗಕ್ಕೆ ಬಹಳ ನೋವುಂಟು ಮಾಡಿದೆ. ಈ ಕ್ರಮ ಸಚಿವರ ಜೊತೆಗೆ ಜನಾಂಗವನ್ನು ತೇಜೋವಧೆ ಮಾಡುವ ಹುನ್ನಾರವಾಗಿದೆ. ಸರ್ಕಾರ ಇದನ್ನು ಸರಿಪಡಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸಮಾಜ ಪಕ್ಷದ ವಿರುದ್ಧ ಅಸಮಾಧಾನಗೊಳ್ಳುವ ಸಂಭವವಿರುವುದರಿಂದ ಸರ್ಕಾರ ಕ್ರಮವನ್ನು ಪುನರ್ ಪರಿಶೀಲಿಸಿ ವಾಲ್ಮೀಕಿ ಜನಾಂಗಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು. ಜೊತೆಗೆ ಹಳೇ ಮೈಸೂರು ಭಾಗದ ಏಕೈಕ ನಾಯಕ ಸಮಾಜದ ಶಾಸಕ ಅನಿಲ್ 2ನೇ ಬಾರಿಗೆ ಅತೀ ಹೆಚ್ಚು ಮತಗಳಿಂದ ಗೆದ್ದು ಶಾಸಕರಾಗಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.



ಸುದ್ದಿಗೋಷ್ಠಿಯಲ್ಲಿ ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ರಾಜನಾಯಕ ಮಾತನಾಡಿದರು.

ಈ ವೇಳೆ ಚಿಕ್ಕಮಾದು ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ನಾಗರಾಜು, ತಾಲೂಕು ಉಪಾಧ್ಯಕ್ಷ ಕೃಷ್ಣನಾಯಕ, ಖಜಾಂಚಿ ದಾಸನಾಯಕ, ಜಯಶೀಲ, ಜವರನಾಯಕ, ಚಿಕ್ಕಣ್ಣ, ರಘು ಇತರರಿದ್ದರು.

ಧರ್ಮಸ್ಥಳದ ಘನತೆಗೆ ಧಕ್ಕೆ ತರುತ್ತಿರುವವರ ಬಂಧನಕ್ಕೆ ಆಗ್ರಹ

ನಂಜನಗೂಡು, ಆ.19– ಧರ್ಮಸ್ಥಳದ ಘನತೆಗೆ ಧಕ್ಕೆ ತರುತ್ತಿರುವವರನ್ನು ತಕ್ಷಣ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಯುವ ಬ್ರಿಗೇಡ್ ಹಾಗೂ ಹಿಂದೂಪರ ಸಂಘಟನೆಗಳ ಮುಖಂಡರು ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಯುವ ಬ್ರಿಗೇಡ್ ಸಂಚಾಲಕ ನಿತಿನ್ ಮಾತನಾಡಿ, ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಪ್ರಮುಖವಾಗಿರುವ ಧರ್ಮಸ್ಥಳ ಶ್ರೀಮಂಜುನಾಥಸ್ವಾಮಿ ದೇವಾಲಯ ದಶಕಗಳಿಂದ ಸಮಾಜಮುಖಿ ಕಾರ್ಯಗಳ ಮೂಲಕ ಧಾರ್ಮಿಕ ಶ್ರದ್ಧೆಯ ಸಂಕೇತವಾಗಿ ಗುರುತಿಸಿಕೊಂಡಿದೆ. ಧಾರ್ಮಿಕ ಕಾರ್ಯಕ್ರಮ, ಕ್ಷೇತ್ರಗಳ ಜೀರ್ಣೋದ್ಧಾರ ಹಾಗೂ ಸಾಮಾಜಿಕ ಸೇವಾ ಕಾರ್ಯಗಳಿಂದ ಧರ್ಮಸ್ಥಳ ಕೋಟ್ಯಾಂತರ ಭಕ್ತರ ಭರವಸೆಯ ಕೇಂದ್ರವಾಗಿದೆ. ಆದಾಗ್ಯೂ ಇತ್ತೀಚಿನ ದಿನಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಹಿಂದೂ ವಿರೋಧಿ ಶಕ್ತಿಗಳು ಸಂಘಟಿತವಾಗಿ ಅಪಪ್ರಚಾರ ನಡೆಸುತ್ತಿದ್ದು, ಧರ್ಮಸ್ಥಳದ ಗೌರವ ಹಾಗೂ ಘನತೆಗೆ ಧಕ್ಕೆ ತರುವಂತ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇದು ಕೋಟ್ಯಾಂತರ ಕನ್ನಡಿಗರ ಭಾವನೆಗಳಿಗೆ ನೋವುಂಟು ಮಾಡುವುದರೊಂದಿಗೆ ಸಮಾಜದ ಶಾಂತಿ ಸೌಹಾರ್ದತೆಗೂ ಧಕ್ಕೆ ತರುತ್ತಿದೆ. ರಾಜ್ಯ ಸರ್ಕಾರ ಈಗಾಗಲೇ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸುತ್ತಿರುವ ಸಮಯದಲ್ಲಿಯೇ, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್ ಹಾಗೂ ಸಮೀರ್ ಅವರನ್ನು ಕೂಡಲೇ ಬಂಧಿಸಿ, ವಿಚಾರಣೆಗೊಳಪಡಿಸಿ ಈ ಷಡ್ಯಂತ್ರದ ಪಿತೂರಿ ಮಾಡಿರುವ ಸಮಾಜ ಘಾತುಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.



ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಮುಖಂಡ ಸುನೀಲ್ ಮಾತನಾಡಿ, ಅಪಪ್ರಚಾರ ಮಾಡುವವರ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಳ್ಳದೆ ಹೋದರೆ, ಭಾವನಾತ್ಮಕವಾಗಿ ಉದ್ರಿಕ್ತರಾಗಿ ಸಾರ್ವಜನಿಕರು ತಾವೇ ಕ್ರಮ ಕೈಗೊಳ್ಳುವ ಪರಿಸ್ಥಿತಿ ಉಂಟಾಗಬಹುದಾದ್ದರಿಂದ, ತಕ್ಷಣವೇ ಸೂಕ್ತ ಕ್ರಮ ಕೈಗೊಂಡು ಈ ಮೂವರ ವಿರುದ್ಧ ಕ್ರಮ ಜರುಗಿಸಬೇಕೆಂದು ತಿಳಿಸಿದರು.

ಈ ವೇಳೆ ಯುವ ಬ್ರಿಗೇಡ್ ಮುಖಂಡರಾದ ಅನಂತ್, ಅರ್ಜುನ್, ಸುಜಯ್, ಭಾಗ್ಯರಾಜ್, ಸುರೇಶ್, ಪ್ರಜ್ವಲ್ ಉಪಸ್ಥಿತರಿದ್ದರು.

ಆ.25ಕ್ಕೆ ವಾರ್ಷಿಕ ಮಹಾಸಭೆ

ಮಲ್ಲೂಡಿ, ಆ.19– ಇಲ್ಲಿಗೆ ಸಮೀಪದ ಹುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಆ.25 ರಂದು ಸಂಘದ ಅಧ್ಯಕ್ಷ ಸಣ್ಣಮಾದಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ರೈತರು ಸಭೆಗೆ ಹಾಜರಾಗಬೇಕು ಎಂದು ಸಿಓ ನಾಗರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾತಂತ್ರ್ಯೋತ್ಸವ, ಸಂಗೊಳ್ಳಿ ರಾಯಣ್ಣ ಜಯಂತೋತ್ಸವ

ತಿ.ನರಸೀಪುರ, ಆ.19– ಪಟ್ಟಣದ ಮರೀಗೌಡ ಸ್ಮಾರಕ ಭವನದಲ್ಲಿ ತಾಲೂಕು ಕುರುಬರ ಸಂಘದಿಂದ ಸ್ವಾತಂತ್ರ್ಯೋತ್ಸವ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಪ್ಪಟ ದೇಶ ಪ್ರೇಮಿಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ಅವರ ಜೀವನ ನಮಗೆ ಆದರ್ಶ. ವಿದ್ಯಾರ್ಥಿಗಳು ಅವರ ಬಗ್ಗೆ ಹೆಚ್ಚು ತಿಳಿದು ಅವರಂತೆ ದೇಶ ಪ್ರೇಮಿಯಾಗಬೇಕು ಎಂದರು.

ನಮ್ಮ ಸಮುದಾಯದ ನಾಲ್ವರು ವಿದ್ಯಾರ್ಥಿಗಳು ಈ ಬಾರಿ ವೈದ್ಯಕೀಯ ಪ್ರವೇಶಕ್ಕೆ ಅರ್ಹತೆ ಪಡೆದಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಯಶಸ್ಸು ಪಡೆಯಲು ಸಾಧ್ಯ. ವಿದ್ಯಾರ್ಥಿಗಳು ಈ ದಿಸೆಯಲ್ಲಿ ಸಾಗಿ ಮುಂದಿನ ವರ್ಷಗಳಲ್ಲಿ ಹೆಚ್ಚು ಪ್ರವೇಶ ಪಡೆಯಲು ಅರ್ಹತೆ ಪಡೆಯುವಂತೆ ಕರೆ ನೀಡಿದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಕಾರ್ಯದರ್ಶಿ ಎಂ.ರಮೇಶ್, ನಿವೃತ್ತ ಶಿಕ್ಷಕ ಕೊಂಗಯ್ಯ ಅವರು ಸಂಗೊಳ್ಳಿ ರಾಯಣ್ಣನ ಜೀವನ ಚರಿತ್ರೆ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸಾಧನೆ ಕುರಿತು ಮಾತನಾಡಿದರು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಹಾಗೂ ವೈದ್ಯ ಕೀಯ ಪ್ರವೇಶಕ್ಕೆ ಅರ್ಹತೆ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯದ ಅರ್ಚಕ ದೊರೆ ಸ್ವಾಮೀಜಿ, ಸಂಘದ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜ್, ಕಾರ್ಯಾಧ್ಯಕ್ಷ ಮಾದೇಶ್, ಉಪಾಧ್ಯಕ್ಷೆ ಕುಪ್ಯ ಭಾಗ್ಯಮ್ಮ, ಕಾಳಬಸವನಹುಂಡಿ ಮಲ್ಲೇಶ್, ವೆಂಕಟೇಶ್, ನಾಗೇಶ್, ಅಶ್ವಿನ್ ಕುಮಾರ್, ಸಂಜು ಗೋವರ್ಧನ್, ಅರುಣ್, ಅಕ್ಕೂರು ಗುರುಮೂರ್ತಿ, ವಾಟಾಳ್ ರಾಜೇಗೌಡ, ಬಿ. ಮಹದೇವ್, ಕುಪ್ಯ ಜಯರಾಂ, ಬಸವರಾಜು, ನಾಗರಾಜು, ರವಿ ಹಾಜರಿದ್ದರು.

ಯೋಧರಿಗೆ ಸನ್ಮಾನ



ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಉಪ ಪೊಲೀಸ್ ಠಾಣೆಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಿವೃತ್ತ ಯೋಧರಾದ ಚನ್ನಕೇಶವ, ಚಿಕ್ಕನಾಯಕನಹಳ್ಳಿ ಪಾಪೇಗೌಡ ಅವರನ್ನು ದಫೇದಾರ್ ದೊರೆಸ್ವಾಮಿ ಸನ್ಮಾನಿಸಿದರು. ಈ ವೇಳೆ ಸಿಬ್ಬಂದಿಗಳಾದ ಅವಿನಾಶ್, ಪ್ರಸನ್ನ, ಅರ್ಚನಾ, ಬಾಬು, ಪತಕರ್ತ ಮಧು ಮತ್ತು ಸಿಬ್ಬಂದಿಗಳಿದ್ದರು.

ನಿವೃತ್ತ ನ್ಯಾ.ಹೆಚ್.ಎಸ್.ನಾಗಮೋಹನ್ ದಾಸ್ ಅವೈಜ್ಞಾನಿಕ ವರದಿ ತಡೆ ಹಿಡಿದು

ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಿ

ಅಖಿಲ ಕರ್ನಾಟಕ ಪರಿಶಿಷ್ಟ ಮಹಾಸಭಾ ರಾಜ್ಯಾಧ್ಯಕ್ಷ ಎಸ್.ಆರ್.ಶಶಿಕಾಂತ್

ತಿ.ನರಸೀಪುರ, ಆ.19– ಪ.ಜಾತಿ ವೈಜ್ಞಾನಿಕ ವರ್ಗೀಕರಣಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾ.ಹೆಚ್.ಎಸ್.ನಾಗಮೋಹನ್‌ದಾಸ್ ಏಕ ಸದಸ್ಯ ಆಯೋಗ ನೀಡಿರುವ ಅವೈಜ್ಞಾನಿಕ ವರದಿ ತಡೆ ಹಿಡಿದು ತಕ್ಷಣ ಉಪ ಸಮಿತಿ ರಚಿಸಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿಸುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕೆಂದು ಅಖಿಲ ಕರ್ನಾಟಕ ಪರಿಶಿಷ್ಟ ಮಹಾಸಭಾ ರಾಜ್ಯಾಧ್ಯಕ್ಷ ಎಸ್.ಆರ್.ಶಶಿಕಾಂತ್ ಒತ್ತಾಯಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ಅವರು ವೈಜ್ಞಾನಿಕವಾಗಿ ಒಳ ಮೀಸಲಾತಿ ವರ್ಗೀಕರಣ ಮಾಡುವ ಬದಲು ಆರ್ಥಿಕ ಮತ್ತು ರಾಜಕೀಯ ಅಂಶಗಳನ್ನು ಸೇರಿಸಿ ಅವೈಜ್ಞಾನಿಕವಾಗಿ ದೋಷಪೂರಿತ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಆರೋಪಿಸಿದರು.

ಪ.ಜಾತಿಗಳ ಪಟ್ಟಿಯಲ್ಲಿರುವ 101 ಜಾತಿಗಳನ್ನು ವರ್ಗೀಕರಣ ಮಾಡಲಾಗಿದೆ. ಹೊಲೆಯ ಮತ್ತು ಅದೇ ರೀತಿಯ ಸಾಮಾಜಿಕ ಅಂಶಗಳನ್ನು ಒಳಗೊಂಡ ಕೆಲವು ಜಾತಿಗಳನ್ನು ಪ್ರವರ್ಗ–ಸಿ ನಲ್ಲಿ ಇರಿಸಿ ಇದೇ ಸಾಮಾಜಿಕ ಅಂಶಗಳನ್ನು ಒಳಗೊಂಡ ಹೊಲೆಯ ಸಂಬಂಧಿತ ಜಾತಿಗಳನ್ನು ಪ್ರವರ್ಗ–ಬಿ ಅಂದರೆ ಮಾದಿಗ ಸಂಬಂಧಿತ ಜಾತಿಗಳ ಪಟ್ಟಿಗೆ ಸೇರಿಸಿ ಈ ಮೂಲಕ ಹೊಲೆಯ ಸಂಬಂಧಿತ ಜಾತಿಗಳ ಸಂಖ್ಯೆ ಕಡಿಮೆ ಬರುವಂತೆ ಮಾಡಿ, ಒಳ ಮೀಸಲಾತಿ ವರ್ಗೀಕರಣದ ಹೆಸರಿನಲ್ಲಿ ಅನ್ಯಾಯವೆಸಗಿದ್ದಾರೆ ಎಂದು ದೂರಿದರು.



ಸುದ್ದಿಗೋಷ್ಠಿಯಲ್ಲಿ ಸೋಸಲೆ ಶಶಿಕಾಂತ್ ಮಾತನಾಡಿದರು.

ಪ್ರವರ್ಗ–ಇ ಎಂಬ ವರ್ಗ ಮಾಡಿ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಎಂಬ ಹೆಸರಿನ ಜಾತಿ ಸೂಚಕ ಗುಂಪುಗಳನ್ನು ಸೃಷ್ಟಿಸಿ ಈ ಮೂಲಕ ಹೊಲೆಯ ಸಮುದಾಯದಿಂದ ಆದಿ ಕರ್ನಾಟಕದಲ್ಲಿ ಗುರುತಿಸಿಕೊಂಡಿರುವ ಬಲಗೈ ಸಮುದಾಯವನ್ನು ಪ್ರತ್ಯೇಕಿಸಿ ಇಲ್ಲಿಯೂ ಹೊಲಯ ಸಮುದಾಯವನ್ನು ವಂಚಿಸಲಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ನಾಗಮೋಹನ್ ದಾಸ್ ಆಯೋಗ ಸಮೀಕ್ಷೆ ಆರಂಭಿಸಿದ ಸಂದರ್ಭ ಅನೇಕ ಲೋಪದೋಷಗಳು ಕಂಡು ಬಂದವು. ಗಣತಿದಾರರಿಗೆ ರಾಜ್ಯ ಸರ್ಕಾರ ನೀಡಿದ್ದ ಸೌಲಭ್ಯ ಸಮರ್ಪಕವಾಗಿರಲಿಲ್ಲ. ಗಣತಿದಾರರಿಗೆ ತಂತ್ರಜ್ಞಾನದ ತರಬೇತಿ ಸಹ ನೀಡಿರಲಿಲ್ಲ. ಗಣತಿದಾರರು ಆರಂಭದಲ್ಲಿ ತಮ್ಮ ವೈಯಕ್ತಿಕ ಮೊಬೈಲ್‌ನಲ್ಲಿ ದತ್ತಾಂಶ ಸಂಗ್ರಹ ಮಾಡಿದ್ದು, ನಂತರದಲ್ಲಿ ಸರ್ಕಾರ ಅವರಿಗೆ ಗಣತಿಗೆ ಸಂಬಂಧಿಸಿದ ಸೌಲಭ್ಯ ಒದಗಿಸಿದೆ. ದತ್ತಾಂಶ ಕ್ರೋಢೀಕರಣ ಮಾಡುವ ವೇಳೆ ಮೊಬೈಲ್‌ನಲ್ಲಿ ದಾಖಲಾಗಿದ್ದ ದಾಖಲಾತಿಗಳು ನಷ್ಟವಾಗಿದ್ದು, ಸಂಪೂರ್ಣವಾಗಿ ಸಂಗ್ರಹ ವಾಗಿರಲಿಲ್ಲ. 8 ಲಕ್ಷಕ್ಕಿಂತಲೂ ಅಧಿಕ ಮಕ್ಕಳನ್ನು ಸಮೀಕ್ಷೆಯಿಂದ ಹೊರಗಿಡಲಾಯಿತು. ಸಮೀಕ್ಷೆ ಸಂದರ್ಭ 2011ರ ಜನಗಣತಿ ಪ್ರಕಾರ 101 ಜಾತಿಯ ದಲಿತ ಸಮುದಾಯ 1.42 ಕೋಟಿ ಸಮೀಕ್ಷೆಯಲ್ಲಿತ್ತು. ನಾಗಮೋಹನ್ ದಾಸ್ ಆಯೋಗದ ಸಮೀಕ್ಷೆಯಲ್ಲಿ 1.16 ಕೋಟಿ ಮಾತ್ರ ಜನಗಣತಿ ಮಾಡಲು ಸಾಧ್ಯವಾ ಯಿತು. ಸಮೀಕ್ಷೆ ಹೊರಬಂದ ಸಂದರ್ಭದಲ್ಲಿ ಕೇವಲ 1.05 ಕೋಟಿ ಜನರನ್ನು ಸಮೀಕ್ಷೆಗೆ ಒಳ ಪಡಿಸಲಾಯಿತು. 40 ಲಕ್ಷಕ್ಕೂ ಹೆಚ್ಚು ಮಂದಿ ಈ ಮೀಸಲಾತಿ ಸಮೀಕ್ಷೆಯಿಂದ ಹೊರಗುಳಿಯುವಂತಾಯಿತು. ಬೆಂಗಳೂರು ನಗರದಲ್ಲಿ ನಿಖರವಾದ ಸಮೀಕ್ಷೆ ನಡೆದಿಲ್ಲ ಎಂದರು.

ಶ್ರೀಧರ್, ನಂಜುಂಡಯ್ಯ, ಶಿವಣ್ಣ, ಲಕ್ಷ್ಮಣ, ಜಯರಾಮ, ಮಂಜುನಾಥ್, ಚಿನ್ನಸ್ವಾಮಿ, ಬಿ.ಮಂಜುನಾಥ್, ಗಂಗಾಧರ, ಚಂದ್ರು, ರಂಗಸ್ವಾಮಿ, ಗಂಗಾಧರ, ರುದ್ರ, ಶಿವಣ್ಣ ಹಾಜರಿದ್ದರು.

ಇಂದು ಅರಸು ಜಯಂತಿ: ಸಮಾಧಿಗೆ ವಿಶೇಷ ಪೂಜೆ

ಹುಣಸೂರು, ಆ.19– ತಾಲೂಕು ಆಡಳಿತ, ತಾಪಂ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಾಜಿ ಸಿಎಂ ಡಿ.ದೇವರಾಜ ಅರಸು ಅವರ 110ನೇ ಜಯಂತಿ ಅಂಗವಾಗಿ ಆ.20 ರಂದು ಬೆಳಗ್ಗೆ 10 ಗಂಟೆಗೆ ತಾಲೂಕಿನ ಕಲ್ಲಹಳ್ಳಿಯಲ್ಲಿರುವ ಅರಸರ ಸಮಾಧಿಗೆ ವಿಶೇಷ ಪೂಜೆ ಹಾಗೂ ಬೆಳಗ್ಗೆ 11 ಗಂಟೆಗೆ ನಗರದ ಎಪಿಎಂಸಿ ಬಳಿಯ ಅರಸು ಪ್ರತಿಮೆಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರ್‌ನಾಥ್ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಯದುವೀರ್, ಎಂಎಲ್‌ಸಿಗಳಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಡಾ.ಯತೀಂದ್ರ, ಕೆ.ವಿವೇಕಾನಂದ, ಭಾರತಿ ಅರಸು, ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್, ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ರಾಘು, ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವು, ಉಪ ವಿಭಾಗಾಧಿಕಾರಿ ಹೆಚ್.ಬಿ.ವಿಜಯಕುಮಾರ್ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗ್ರಂಥಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆ



ಸರಗೂರಿನ ಸಾರ್ವಜನಿಕ ಗ್ರಂಥಾಲಯದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಈ ವೇಳೆ ತಾಲೂಕು ಹೋರಾಟ ಸಮಿತಿ ಸಂಚಾಲಕ ಕೃಷ್ಣ, ಗ್ರಂಥಾಪಾಲಕ ಶಿವಣ್ಣ, ದೇವರಾಜು, ಮಂಜು ಹಾಗೂ ಓದುಗರು ಇದ್ದರು.

ಮೈಸೂರು ಮಿತ್ರ

ಬುಧವಾರ 20 ಆಗಸ್ಟ್ 2025

ವಿಶ್ವ ಛಾಯಾಗ್ರಹಣ ದಿನದ ಅಂಗವಾಗಿ 'ಸುದ್ದಿ ಛಾಯಾಚಿತ್ರ ಪ್ರದರ್ಶನ'

ರೋಚಕತೆಯೊಂದಿಗೆ ಮನಮಿಡಿಯುವ ಛಾಯಾಚಿತ್ರಗಳ ಪ್ರದರ್ಶನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ವಿಶ್ವ ಛಾಯಾಗ್ರಹಣ ಕಾರ್ಯಕ್ರಮಕ್ಕೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಚಾಲನೆ ನೀಡಿದರು.

ಮೈಸೂರು,ಆ.19(ಎಂಟಿವೈ)– ವಿಶ್ವ ಛಾಯಾಗ್ರಹಣ ದಿನದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ 'ಸುದ್ದಿ ಛಾಯಾಚಿತ್ರ ಪ್ರದರ್ಶನ' ನೋಡುಗರ ಕಣ್ಮನ ಸೆಳೆಯಿತಲ್ಲದೆ, ಪತ್ರಿಕಾ ಛಾಯಾಗ್ರಾಹಕರ ಪ್ರತಿಭೆ ಅನಾವರಣಗೊಳಿಸಿತು.

ಸುದ್ದಿ ಛಾಯಾಚಿತ್ರ ಪ್ರದರ್ಶನದಲ್ಲಿ ಮೈಸೂರಿನ ವಿವಿಧ ಪತ್ರಿಕೆಗಳ ಛಾಯಾಗ್ರಾಹಕರು ತೆಗೆದಿರುವ ದಸರಾ ಮಹೋತ್ಸವ, ರಥಯಾತ್ರೆ, ಕುಸ್ತಿ, ವಜ್ರಮುಷ್ಠಿ ಕಾಳಗ, ಜಾನುವಾರುಗಳಿಗೆ ಕಿಚ್ಚು ಹಾಯಿಸುವುದು, ಕಾಡ್ಗಿಚ್ಚು ನಂದಿಸುವುದು, ಗಲಭೆ, ಲಾಠಿಚಾರ್ಜ್ ಸೇರಿದಂತೆ ಅತ್ಯಂತ ರೋಚಕ ಮಾನವೀಯ ಮೌಲ್ಯವುಳ್ಳ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಒಂದಕ್ಕಿಂತ ಒಂದು ನೋಡುಗರ ಮನಸೂರೆಗೊಂಡವು. 50ಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿತ್ತು.

ಬಾಂಧವ್ಯ ಬೆಸೆಯುವ ಸನ್ನಿವೇಶ: ಮೈಸೂರು ಮಹಾ ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿ, ವಿಶ್ವ ಛಾಯಾಗ್ರಹಣ ದಿನದ ಅಂಗವಾಗಿ ಅತ್ಯುತ್ತಮವಾದ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ಈ ಪ್ರದರ್ಶನದಲ್ಲಿ ಸದಭಿರುಚಿಯ ಛಾಯಾಚಿತ್ರಗಳಿವೆ. ಯಾವುದೇ ಘಟನೆ ನಡೆದರೂ ಜಿಲ್ಲಾಡಳಿತ, ಪೊಲೀಸ್ ಇಲಾಖೆಗೂ ಮೊದಲೇ ಛಾಯಾಗ್ರಾಹಕರು ಸ್ಥಳಕ್ಕೆ ಹೋಗಿರುತ್ತಾರೆ. ಇದರಿಂದ ಪತ್ರಿಕಾ ಛಾಯಾಗ್ರಾಹಕರಿಗೆ ಇರುವ ಬದ್ಧತೆ ತೋರ್ಪಡಿಸುತ್ತದೆ ಎಂದರು.

ಡಿಸಿಪಿ ಕೆ.ಎಸ್. ಸುಂದರ್‌ರಾಜ್ ಮಾತನಾಡಿ, ಅಪರಾಧ ಕೃತ್ಯಗಳ ಪತ್ತೆ ಮಾಡುವ ನಿಟ್ಟಿನಲ್ಲಿ ಛಾಯಾಚಿತ್ರ, ವಿಡಿಯೋಗಳು ಪ್ರಮುಖ ಪಾತ್ರ ವಹಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಬಹುತೇಕ ಮಂದಿ ಆಂಡ್ರಾಯ್ಡ್ ಮೊಬೈಲ್ ಬಳಸುತ್ತಿದ್ದಾರೆ. ದೇಶದ ಜನಸಂಖ್ಯೆಯಲ್ಲಿ ಅಂದಾಜು ಶೇ.80ರಷ್ಟು ಜನ ಅತ್ಯಾಧುನಿಕ ಮೊಬೈಲ್ ಬಳಸುತ್ತಿದ್ದು, ಅದರಲ್ಲಿ ಛಾಯಾಚಿತ್ರ, ವಿಡಿಯೋ ತೆಗೆಯುವ ಮೂಲಕ ತಾವೂ ಛಾಯಾಗ್ರಾಹಕರೇ ಆಗಿರುತ್ತಾರೆ. ಇತ್ತೀಚೆಗೆ ಮೈಸೂರಲ್ಲಿ ನಡೆದ ಬೆಳ್ಳಿ ಪದಾರ್ಥಗಳ ತಯಾರಿಕಾ ಘಟಕದ ದರೋಡೆ ಪ್ರಕರಣದಲ್ಲೂ ದರೋಡೆಕೋರರನ್ನು ಪತ್ತೆ ಮಾಡಲು ಸಿಸಿ ಕ್ಯಾಮರಾ ದೃಶ್ಯಗಳು ಸಹಕಾರಿಯಾದವು. ಎರಡು ದಿನದ ಹಿಂದಷ್ಟೇ ಪಬ್‌ವೊಂದರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ರೊಬ್ಬರು ಗಲಾಟೆ ಮಾಡಿದ ವಿಡಿಯೋ ವೈರಲ್ ಆದ ಬಳಿಕ ಆತ ಅಮಾನತು ಆದರು. ಈ ರೀತಿ ವಿಡಿಯೋಗಳು ಸಾಕ್ಷ್ಯ ನುಡಿಯುತ್ತವೆ ಎಂದರು.

ದಸರಾ ವೇಳೆ ಸುದ್ದಿ ಛಾಯಾಗ್ರಾಹಕರು ತೆಗೆದ ಲ್ಯಾನ್ಸ್‌ಡೌನ್ ಕಟ್ಟಡ, ಇನ್ನಿತರ ಕಡೆಗಳಲ್ಲಿ ಜನರು ಕಿಕ್ಕಿರಿದು ನಿಂತು ವೀಕ್ಷಿಸುವ ಚಿತ್ರಗಳು ಜನರಿಗೆ ಮಾಹಿತಿ ನೀಡುವುದಷ್ಟೇ ಅಲ್ಲ, ಎಂತೆಂತಹ ಜಾಗಗಳಲ್ಲಿ ಪೊಲೀಸರು ನಿಗಾ ಇರಿಸಬೇಕು ಎಂಬುದನ್ನು ಸಹ ತಿಳಿಸುತ್ತವೆ. ಹೀಗಾಗಿ ಪೊಲೀಸ್ ಇಲಾಖೆಗೂ ಸುದ್ದಿ ಛಾಯಾಚಿತ್ರಗಳು ನೆರವಾಗುತ್ತವೆ ಎಂದರು.

ಸನ್ಮಾನ ಸ್ವೀಕರಿಸಿದ ಬಳಿಕ ಹಿರಿಯ ಛಾಯಾಗ್ರಾಹಕ ಸಗ್ಗೆರೆ ರಾಮಸ್ವಾಮಿ ಮಾತನಾಡಿ, ಪತ್ರಿಕಾ ಛಾಯಾಗ್ರಹಣ ಸವಾಲಿನೊಂದಿಗೆ ಹೆಚ್ಚು ಖುಷಿ ಕೊಡುವ ಕೆಲಸ. ಘಟನೆಗಳನ್ನು ಸಾಕ್ಷೀಕರಿಸುವ ಅಪೂರ್ವ ಅವಕಾಶ ಪತ್ರಿಕಾ ಛಾಯಾಗ್ರಾಹಕರಿಗೆ ದೊರೆಯುತ್ತದೆ. ಹೀಗಾಗಿ ಇದೊಂದು ವಿಶೇಷ ವೃತ್ತಿ. ಆರಂಭದಲ್ಲಿ ವರದಿಗಾರನಾಗಿ ನಗರದ ಪತ್ರಿಕೆಯೊಂದರಲ್ಲಿ ಕೆಲಸ ಮಾಡಬೇಕಾದರೂ ಸಂದರ್ಭಗಳ ಕಾರಣ ಕ್ಯಾಮೆರಾ ಹಿಡಿದು ಛಾಯಾಗ್ರಾಹಕನಾದೆ. ಬಹುತೇಕ ಸ್ಪರ್ಧೆಗಳಲ್ಲಿ ರಾಜಕೀಯ ಆಧಾರಿತ ಛಾಯಾಚಿತ್ರಗಳೇ ಇರುತ್ತವೆ. ಆದರೆ ಇಲ್ಲಿ ಅಂತಹ ಕೇವಲ ಎರಡೇ ಚಿತ್ರ ಇದ್ದು, ಉಳಿದವೆಲ್ಲವೂ ಮೈಸೂರು ಸಾಂಸ್ಕೃತಿಕ ನಗರಿ ಎಂಬುದನ್ನು ಪ್ರತಿಬಿಂಬಿಸಿರುವುದು ಸಂತಸವುಂಟು ಮಾಡುತ್ತದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿ, ಜಗತ್ತಿನ ಎಲ್ಲೇ ಛಾಯಾಚಿತ್ರ ಸ್ಪರ್ಧೆ ನಡೆದರೂ ಮೈಸೂರಿನವರ ಛಾಯಾಚಿತ್ರಗಳು ಇದ್ದೇ ಇರುತ್ತವೆ. ಬಹುಮಾನಗಳಂತೂ ಇವುಗಳಿಗೆ ಬರುವುದು ಸಾಮಾನ್ಯ ಸಂಗತಿಯಾಗಿದೆ. ಹೀಗಾಗಿ ಮೈಸೂರು ಪತ್ರಿಕೆಗಳು ಪ್ರತಿಭಾವಂತ ಛಾಯಾಗ್ರಾಹಕರನ್ನು ಬೆಳೆಸಿವೆ ಎಂದು ಸಂತಸ ವ್ಯಕ್ತಪಡಿಸಿದರು.

ಸ್ಪರ್ಧೆಯಲ್ಲಿ, ಪತ್ರಿಕಾ ಛಾಯಾಗ್ರಾಹಕರಾದ ಉದಯ್ ಶಂಕರ್(ಪ್ರಥಮ), ಗವಿಮಠ ರವಿ(ದ್ವಿತೀಯ), ಎಸ್.ಆರ್.ಮಧುಸೂದನ್ (ತೃತೀಯ), ಅನೂಪ್ ಟಿ.ರಾಘ್(ನಾಲ್ಕನೇ) ಅವರಿಗೆ ನಗದು, ಪದಕ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ.ಮಮತಾ, ನರೆಡ್ಕೋ ಅಧ್ಯಕ್ಷ ವಿ.ಸಿ. ರವಿಕುಮಾರ್, ಉದ್ಯಮಿ ಡಾ.ವಿ. ಕಾರ್ತಿಕ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧ'ರ್ಮಾಪುರ ನಾರಾಯಣ, ಪತ್ರಿಕಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜಾರ್ಜಿಯಾದಲ್ಲಿ ನಡೆದ ವುಶು ಚಾಂಪಿಯನ್‌ಶಿಪ್‌ನಲ್ಲಿ

ಮೈಸೂರು ಬಾಲಪ್ರತಿಭೆ ಸಾನ್ವಿಗೆ ಕಂಚಿನ ಪದಕ




ಕಂಚಿನ ಪದಕ ಹಾಗೂ ಪ್ರಮಾಣಪತ್ರದೊಂದಿಗೆ ಸಾನ್ವಿ.

ಮೈಸೂರು,ಆ.19(ಪಿಎಂ)– ಜಾರ್ಜಿಯಾ ದೇಶದ ಬಟುಮಿ ನಗರದಲ್ಲಿ ನಡೆದ ಅಂತಾರಾಷ್ಟ್ರೀಯ ವುಶು ಮಾರ್ಷಲ್ ಆರ್ಟ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಪಬ್ಲಿಕ್ ಸ್ಕೂಲ್‌ನ 9ನೇ ತರಗತಿಯ ವಿದ್ಯಾರ್ಥಿನಿ ಸಾನ್ವಿ ಕಂಚಿನ ಪದಕ ಗಳಿಸಿದ್ದಾರೆ.

ಅಲ್ಲದೆ, ಖೇಲೋ ಇಂಡಿಯಾ ಗೇಮ್ಸ್‌ನಲ್ಲಿ ರಾಜ್ಯ ಮಟ್ಟದಲ್ಲಿ ಚಿನ್ನದ ಪದಕ ಸಹ ಸಾನ್ವಿಗೆ ಸಂದಿದೆ. ಸದರಿ ವಿದ್ಯಾರ್ಥಿನಿಯು ಶೀಘ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಲಿದ್ದಾರೆ. ಗಮನಾರ್ಹ ಸಾಧನೆಗಾಗಿ ಶಾಲಾ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವತಿಯಿಂದ ಸಾನ್ವಿ ಅವರನ್ನು ಸನ್ಮಾನಿಸಲಾಯಿತು. ಸಾನ್ವಿ, ಮೈಸೂರಿನ ಕೃಷ್ಣಮೂರ್ತಿಪುರಂನ ಮಂಜುಳಾ ಮತ್ತು ಶ್ರೀನಿವಾಸ ದಂಪತಿ ಪುತ್ರಿಯಾಗಿದ್ದಾರೆ.

ಮೈಸೂರು ಮಹಿಳಾ ಒಕ್ಕಲಿಗರ ಸಂಘದ ನೂತನ ಅಧ್ಯಕ್ಷರು



ಇತ್ತೀಚೆಗೆ ಮೈಸೂರಿನ ಸಿದ್ಧಾರ್ಥನಗರದ ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಮೈಸೂರು ಮಹಿಳಾ ಒಕ್ಕಲಿಗ ಸಂಘದ ಮಾಸಿಕ ಸಭೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಶ್ರೀಮತಿ ಪಿ.ಎನ್.ಸವಿತಾ ಆಯ್ಕೆಯಾದರು. ಅವರಿಗೆ ಶ್ರೀಮತಿ ವಸಂತಾ ಮುನಿಶ್ ಅಧಿಕಾರ ಹಸ್ತಾಂತರಿಸಿದರು. ಈ ವೇಳೆ ವೇದಿಕೆ ನಿರ್ದೇಶಕರಾದ ಶ್ರೀಮತಿ ತ್ರಿವೇಣಿ ಕೇಶವ್, ಶ್ರೀಮತಿ ಪ್ರಭಾ ಸಿದ್ದೇಗೌಡ, ಶ್ರೀಮತಿ ಪುಷ್ಪಾ ವಿಜಯ್, ಶ್ರೀಮತಿ ತೇಜಾ ವಿಶ್ವನಾಥ್, ಶ್ರೀಮತಿ ಕಲ್ಪನಾ ಜಯರಾಮ್, ಶ್ರೀಮತಿ ಸುವರ್ಣ ಕರೀಗೌಡ, ಶ್ರೀಮತಿ ಅನುಪಮಾ ಗಣೇಶ್ ಉಪಸ್ಥಿತರಿದ್ದಾರೆ.

ಆರೋಗ್ಯವಂತರು ರಕ್ತದಾನ ಮಾಡುವುದು ಅವಶ್ಯ

ಮಾಹಿತಿ ಹಕ್ಕು ವೇದಿಕೆ ಸಂಸ್ಥಾಪಕ ಅಧ್ಯಕ್ಷ ಹೇಮಂತ್ ನಾಗರಾಜು ಸಮರ್ಥನೆ



ಮೈಸೂರು ತಾಲೂಕು ಮುರಡಗಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ಮೈಸೂರು, ಆ.19– ಆರೋಗ್ಯವಂತ ಅರ್ಹ ವ್ಯಕ್ತಿಗಳು ರಕ್ತದಾನ ಮಾಡುವುದು ಅತ್ಯವಶ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಹೇಮಂತ್ ನಾಗರಾಜು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರ ಸ್ಮರಣಾರ್ಥ ಆವ್‌ಕ್ಯಾಡ್–ಚೈತನ್ಯಪಥ, 'ಅವನೀ' ಸಾಂಸ್ಕೃತಿಕ–ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ಹಾಗೂ ಲಯನ್ಸ್ ಜೀವಧಾರ ಸಂಸ್ಥೆ ಸಹಯೋಗದಲ್ಲಿ ತಾಲೂಕಿನ ಮುರಡಗಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಆಸ್ಪತ್ರೆಗೆ ದಾಖಲಾಗುವ ಪ್ರತಿ 7 ರೋಗಿಗಳಲ್ಲಿ ಒಬ್ಬರಿಗೆ ರಕ್ತದ ಅಗತ್ಯವಿರುತ್ತದೆ ಎಂಬುದು ಸಂಶೋಧನೆಯಲ್ಲಿ ತಿಳಿದುಬಂದಿದೆ. ಅಪಘಾತ, ಶಸ್ತ್ರಚಿಕಿತ್ಸೆ, ರಕ್ತಹೀನತೆ, ಕ್ಯಾನ್ಸರ್, ಹೆರಿಗೆ ಸಂದರ್ಭಗಳಲ್ಲಿ ರಕ್ತದ ಅಗತ್ಯತೆ ಹೆಚ್ಚಾಗಿರುತ್ತದೆ. ಅತೀ ತುರ್ತು ಸಂದರ್ಭದಲ್ಲಿ ಸಕಾಲಕ್ಕೆ ರಕ್ತ ಸಿಗುವುದು ಕಷ್ಟ. ಹಾಗಾಗಿ ಆಸ್ಪತ್ರೆಗಳು ಮತ್ತು ರಕ್ತನಿಧಿಗಳಲ್ಲಿ ಯಾವಾಗಲೂ ಪ್ರತಿ ಗುಂಪಿನ ರಕ್ತದ ಸಿದ್ಧ ಘಟಕ(ಯುನಿಟ್)ಗಳು ಲಭ್ಯವಿದ್ದರೆ ಮಾತ್ರ ಜನರ ಜೀವ ಉಳಿಸಲು ಸಾಧ್ಯ. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಮೂಲಕ ಅರ್ಹ ವ್ಯಕ್ತಿಗಳಿಂದ ರಕ್ತದಾನಕ್ಕೆ ಉತ್ತೇಜಿಸಬೇಕಿದೆ ಎಂದು ತಿಳಿಸಿದರು.

ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್. ಬಸವರಾಜು ಮಾತನಾಡಿ, ರಕ್ತದಾನದ ಮೂಲಕ ಮತ್ತೊಂದು ಜೀವಕ್ಕೆ ನೆರವಾಗುವ ಹೃದಯ ವೈಶಾಲ್ಯತೆ ಬೆಳೆಸಿಕೊಳ್ಳಬೇಕು. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ರಕ್ತವನ್ನು ಪ್ರಯೋಗಾಲಯಗಳಲ್ಲಿ ಸೃಷ್ಟಿಸಲು ಸಾಧ್ಯವಾಗಿಲ್ಲ. ಅಥವಾ ರಕ್ತಕ್ಕೆ ಪರ್ಯಾಯವನ್ನೂ ಸಂಶೋಧಿಸಿಲ್ಲ. ಆದ್ದರಿಂದ ರಕ್ತದಾನ ಬಹಳ ಶ್ರೇಷ್ಠವಾದುದು. ಆದರೆ ಈ ಬಗ್ಗೆ ಈಗಲೂ ತಪ್ಪು ಕಲ್ಪನೆಗಳಿವೆ. ರಕ್ತ ನೀಡಿದ ಕೆಲವೇ ಗಂಟೆಯಲ್ಲಿ ಮತ್ತೆ ನಮ್ಮ ದೇಹದಲ್ಲಿ ಉತ್ಪತ್ತಿಯಾಗುವುದರಿಂದ ಯಾವುದೇ ಭಯವಿಲ್ಲದೆ ಯುವಕರು ರಕ್ತದಾನಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಅಂತರರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಚೇತನ್‌ರಾಮ್ ಮಾತನಾಡಿ, ಒಂದು ಯೂನಿಟ್ ರಕ್ತವು ಮೂರು ಜನರ ಜೀವ ಉಳಿಸಲು ನೆರವಾಗುತ್ತದೆ. ರಕ್ತ ನೀಡಿದರೆ ದೇಹ ದುರ್ಬಲವಾಗುತ್ತದೆ ಎಂಬ ತಪ್ಪು ಕಲ್ಪನೆ ಬೇಡ. ದ್ರವರೂಪದ ರಕ್ತವನ್ನು ದೀರ್ಘಕಾಲ ಸಂಗ್ರಹಿಸಿಡಲಾಗದು. ಜಗತ್ತಿನಲ್ಲಿ ಶೇ.30–35 ಯುನಿಟ್‌ನಷ್ಟು ರಕ್ತದ ಕೊರತೆಯಿದೆ. ರಕ್ತದಾನದ ಬಗ್ಗೆ ಸಾಮಾಜಿಕ ಜಾಗೃತಿ ಮೂಡಿಸಬೇಕಾದ ಅಗತ್ಯತೆ ಇದೆ ಎಂದರು.

ಲಯನ್ಸ್ ಜೀವಧಾರ ಕೇಂದ್ರದ ಸುರೇಶ್, ರಕ್ತದಾನದ ಮಹತ್ವ ಮತ್ತು ಅದರ ಅನಿವಾರ್ಯತೆ ಬಗ್ಗೆ ವಿವರಿಸಿದರು. ಶಿಬಿರದಲ್ಲಿ ಸುಮಾರು 14 ಯುನಿಟ್ ರಕ್ತ ಸಂಗ್ರಹವಾದವು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮಹದೇವಸ್ವಾಮಿ, ದೂರ ಗ್ರಾಮ ಪಂಚಾಯಿತಿ ಅಧ್ಯಕ್ಷ ನಂಜುಂಡಸ್ವಾಮಿ, ಸಮೃದ್ಧಿ ಟ್ರಸ್ಟ್ ಅಧ್ಯಕ್ಷ ಮಧುಸೂದನ್, ಆವ್‌ಕಾಡ್ ಸಂಸ್ಥೆಯ ನಿರ್ದೇಶಕಿ ಶಾರದಾಂಬ, ಅವನೀ ಟ್ರಸ್ಟ್ ಅಧ್ಯಕ್ಷ ಸಂಗಮೇಶ, ಕಾರ್ಯದರ್ಶಿ ಸೂರ್ಯ, ಖಜಾಂಚಿ ಗಾನಶ್ರೀ, ನಿರ್ದೇಶಕ ಚಂದ್ರಶೇಖರ್ ಮತ್ತಿತರರಿದ್ದರು.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಆ. 19– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಆ. 21 ರಂದು ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ದಸರಾ ಗಜಪಡೆ ಮಾವುತರು, ಕಾವಾಡಿಗರ ಮಕ್ಕಳಿಗೆ ತಾತ್ಕಾಲಿಕ ಶಾಲೆ ಪ್ರಾರಂಭ

- ಮೊದಲ ದಿನ 20 ಮಕ್ಕಳು ಹಾಜರ್; ಅಕ್ಷರ ದಾಸೋಹದಿಂದ ಮಧ್ಯಾಹ್ನದ ಬಿಸಿಯೂಟ
- 1 ರಿಂದ 9ನೇ ತರಗತಿ ಮಕ್ಕಳಿಗೆ ಮುಂದುವರೆದ ಶಿಕ್ಷಣ; ಮೂವರು ಶಿಕ್ಷಕಿಯರ ನಿಯೋಜನೆ

ಎಂ.ಟಿ.ಯೋಗೇಶ್ ಕುಮಾರ್



ಅರಮನೆ ಆವರಣದಲ್ಲಿ ದಸರಾ ಗಜಪಡೆ ಮಾವುತರು, ಕಾವಾಡಿಗರ ಮಕ್ಕಳಿಗಾಗಿ ತೆರೆದಿರುವ ತಾತ್ಕಾಲಿಕ ಶಾಲೆಯಲ್ಲಿ ಶಿಕ್ಷಕಿಯರು ಮಕ್ಕಳಿಗೆ ನಲಿ–ಕಲಿ ವಿಧಾನದಲ್ಲಿ ಪಾಠ ಮಾಡುತ್ತಿರುವುದು.

ಮೈಸೂರು, ಆ.19 – ದಸರಾ ಮಹೋತ್ಸವದ ಗಜಪಡೆಯೊಂದಿಗೆ ಬಂದು, ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಮಾವುತರು, ಕಾವಾಡಿಗರ ಮಕ್ಕಳಿಗೆ ಶಿಕ್ಷಣ ಮುಂದುವರೆಸುವ ನಿಟ್ಟಿನಲ್ಲಿ ಶಾಲಾ ಶಿಕ್ಷಣ ಇಲಾಖೆ ಗಜಪಡೆ ಬಿಡಾರದ ಬಳಿ ಟೆಂಟ್ ಶಾಲೆ ಆರಂಭಿಸಿದ್ದು, ಮೊದಲ ದಿನವೇ 20 ಮಕ್ಕಳು ಹಾಜರಾಗಿ ಪಾಠ–ಪ್ರವಚನ ಆಲಿಸಿದರು.

ಈ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆ.4ರಂದು ಗಜಪಯಣದ ಮೂಲಕ ಮೈಸೂರಿಗೆ ಆಗಮಿಸಿದ ಮೊದಲ ತಂಡದ 9 ಆನೆಗಳ ಮಾವುತರು, ಕಾವಾಡಿಗರ ಕುಟುಂಬ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದೆ. ಶಾಲೆ ಬಿಟ್ಟು ಪೋಷಕರೊಂದಿಗೆ ಬಂದಿರುವ ಮಕ್ಕಳು ಪಠ್ಯಕ್ರಮದ ಕಲಿಕೆಯಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಕಳೆದ ಹಲವು ವರ್ಷಗಳಿಂದ ಆನೆ ಬಿಡಾರದ ಬಳಿ ಟೆಂಟ್ ಶಾಲೆ ವ್ಯವಸ್ಥೆ ಮಾಡುತ್ತಾ ಬರಲಾಗಿದೆ. ಕಳೆದ ನಾಲ್ಕೈದು ವರ್ಷದಿಂದ ಟೆಂಟ್ ಶಾಲೆ, ತಾತ್ಕಾಲಿಕ ಶಾಲೆಯಾಗಿ ಮಾರ್ಪಟ್ಟಿದೆ. ಈ ಸಾಲಿನ ತಾತ್ಕಾಲಿಕ ಶಾಲೆ ಔಪಚಾರಿಕವಾಗಿ ಇಂದಿನಿಂದ ಆರಂಭವಾಗಿದೆ. ಇದು ಅಧಿಕೃತವಾಗಿ ಇನ್ನಷ್ಟೇ ಚಾಲನೆಗೊಳ್ಳಬೇಕಿದೆ.

ಕಲಿಕೆಯ ಆಸಕ್ತಿ ತೋರಿದ ಕಾಡಿನ ಮಕ್ಕಳು: ಸಾಮಾನ್ಯವಾಗಿ ದಸರಾ ಗಜಪಡೆ ಮಾವುತರು, ಕಾವಾಡಿಗರ ಮಕ್ಕಳು ನಾಚಿಕೆ ಸ್ವಭಾವದವರಾಗಿದ್ದು, ನಗರ ನಿವಾಸಿಗಳು, ಅಪರಿಚಿತರೊಂದಿಗೆ ಬೆರೆಯುವುದಿಲ್ಲ. ಅದರಲ್ಲೂ ಟೆಂಟ್ ಶಾಲೆಗೆ ಕಲಿಯಲು ಬನ್ನಿ ಎಂದರೂ ಮಕ್ಕಳು ಬರುತ್ತಿರಲಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಮಾವುತರು, ಕಾವಾಡಿಗರ ಮಕ್ಕಳು ತಾತ್ಕಾಲಿಕ ಶಾಲೆಗೆ ಬರಲು ಆಸಕ್ತಿ ತೋರುತ್ತಿದ್ದಾರೆ. ಈ ಸಾಲಿನ ತಾತ್ಕಾಲಿಕ ಶಾಲೆಗಾಗಿ ಮೀಸಲಿಟ್ಟಿರುವ ಟೆಂಟ್‌ನಲ್ಲಿ ಶಿಕ್ಷಕರು ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸಲು ಬೇಕಾದ ಫಲಕ(ಚಾರ್ಟ್) ಅಳವಡಿಸುತ್ತಿದ್ದಂತೆಯೇ 1ರಿಂದ 9ನೇ ತರಗತಿಯ 20 ಮಕ್ಕಳು ಸ್ವಯಂಪ್ರೇರಣೆಯಿಂದ ಪಾಠ ಕಲಿಯುವ ಆಸಕ್ತಿ ಪ್ರದರ್ಶಿಸಿದರು.

ಮೂವರು ಶಿಕ್ಷಕಿಯರ ನಿಯೋಜನೆ: ಮಾವುತರು, ಕಾವಾಡಿಗರ ಮಕ್ಕಳ ತಾತ್ಕಾಲಿಕ ಶಾಲೆಗೆ ಮೂವರು ಶಿಕ್ಷಕಿಯರ ನಿಯೋಜಿಸಲಾಗಿದೆ. ಡಿಡಿಪಿಐ ಜವರೇಗೌಡ ಮಾರ್ಗದರ್ಶನದಲ್ಲಿ ದಕ್ಷಿಣ ವಲಯ ಬಿಇಒ ಎಂ.ಆರ್.ಅನಂತರಾಜು, ಬಿಆರ್‌ಸಿ ಎಂ.ಬಿ.ಶ್ರೀಕಂಠಸ್ವಾಮಿ ನೇತೃತ್ವದಲ್ಲಿ ಶಾಲೆ ನಡೆಯಲಿದ್ದು, ಅದಕ್ಕಾಗಿ ದಕ್ಷಿಣ ಬಿಇಓ ಕಚೇರಿ ವತಿಯಿಂದ ವಿದ್ಯಾರಣ್ಯಪುರಂನ ರೆಹಮಾನಿಯಾ ಉರ್ದು ಶಾಲೆಯ ಶಿಕ್ಷಕಿ ನೂರ್ ಫಾತಿಮ, ಕುಕ್ಕರಹಳ್ಳಿ ಶಾಲೆಯ ದಿವ್ಯ ಪ್ರಿಯದರ್ಶಿನಿ, ಚಾಮುಂಡಿಪುರಂ ವಿಎಂಇ ಬಾಲಬೋಧಿನಿ ಶಾಲೆಯ ಮೋಸಿನ್ ತಾಜ್ ಅವರನ್ನು ಇಲ್ಲಿಗೆ ನಿಯೋಜಿಸಲಾಗಿದೆ.

ನಲಿ–ಕಲಿಗೆ ಆದ್ಯತೆ: ಕಾಡಿನ ಸುಂದರ ಪರಿಸರದ ಮಾವುತರು, ಕಾವಾಡಿಗರ ಮಕ್ಕಳಿಗೆ ಸಾಮಾನ್ಯ ಶೈಲಿಯಲ್ಲಿ ಪಾಠ ಮಾಡಿದರೆ ಮನಮುಟ್ಟುವುದಿಲ್ಲ. ಹಾಗಾಗಿ ಶಿಕ್ಷಣ ಇಲಾಖೆ ನಲಿ–ಕಲಿ ವಿಧಾನದ ಮೂಲಕ ವಿವಿಧ ಫಲಕ(ಚಾರ್ಟ್) ಪ್ರದರ್ಶಿಸಿ, ಪಾಠ ಕಲಿಸಲಾಗುತ್ತಿದೆ. ಈ ಬಾರಿ 1ರಿಂದ 9ನೇ ತರಗತಿಯ ಮಕ್ಕಳು ತಾತ್ಕಾಲಿಕ ಶಾಲೆಯಲ್ಲಿ ಮುಂದುವರೆದ ಶಿಕ್ಷಣ ಪಡೆಯಲು ಬರುವುದರಿಂದ ಶಿಕ್ಷಕರು ಸಿದ್ಧತೆ ಮಾಡಿಕೊಳ್ಳಲಾರಂಭಿಸಿದ್ದಾರೆ. ಮೊದಲ ದಿನವಾದ ಇಂದು ವಿವಿಧ ಫಲಕಗಳನ್ನು ಅಳವಡಿಸಿ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸುವ ಕೆಲಸ ನಡೆದಿದೆ.

> ಗಜಪಡೆಯ ಮಾವುತರು, ಕಾವಾಡಿಗರ ಮಕ್ಕಳು ತಮ್ಮ ಶಾಲೆಯನ್ನು ಬಿಟ್ಟು ಪೋಷಕರೊಂದಿಗೆ ಬಂದಿದ್ದಾರೆ. ಆ ಮಕ್ಕಳು ಪಠ್ಯಕ್ರಮದಿಂದ ದೂರವುಳಿದು, ಶಿಕ್ಷಣದಲ್ಲಿ ಹಿನ್ನಡೆ ಅನುಭವಿಸಬಾರದೆಂದು ತಾತ್ಕಾಲಿಕ ಶಾಲೆ ಆರಂಭಿಸಲಾಗಿದೆ. ಮಕ್ಕಳಿಗೆ ಇಲಾಖೆ ವತಿಯಿಂದ ಸಮವಸ್ತ್ರ ಪಠ್ಯಪುಸ್ತಕ, ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ಮೂವರು ಶಿಕ್ಷಕರನ್ನು ನಿಯೋಜಿಸಲಾಗಿದ್ದು, ಈ ವಾರದೊಳಗೆ ಜಿಲ್ಲಾ ಉಸ್ತುವಾರಿ ಸಚಿವರು ಅಧಿಕೃತವಾಗಿ ತಾತ್ಕಾಲಿಕ ಶಾಲೆಯನ್ನು ಉದ್ಘಾಟಿಸಲಿದ್ದಾರೆ.
> - ಎಸ್.ಟಿ.ಜವರೇಗೌಡ, ಡಿಡಿಪಿಐ

ಅಕ್ಷರ ದಾಸೋಹದಿಂದ ಊಟ: ತಾತ್ಕಾಲಿಕ ಶಾಲೆಗೆ ಬರುವ ಗಜಪಡೆಯ ಮಾವುತರು, ಕಾವಾಡಿಗರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ. ಅಕ್ಷರ ದಾಸೋಹ ಯೋಜನೆಯಡಿ ಇಸ್ಕಾನ್ ಸಂಸ್ಥೆ ಪೂರೈಸುವ ಮಧ್ಯಾಹ್ನದ ಬಿಸಿಯೂಟ ಮಾವುತರು, ಕಾವಾಡಿಗರ ಮಕ್ಕಳಿಗೂ ಸರಬರಾಜು ಮಾಡಲಾಗುತ್ತದೆ.

ಎರಡನೇ ತಂಡದೊಂದಿಗೆ ಮತ್ತಷ್ಟು ಮಕ್ಕಳು: ಗಜಪಡೆಯ ಎರಡನೇ ತಂಡದಲ್ಲಿ ಆ.25ರಂದು ಆಗಮಿಸುವ 5 ಆನೆಗಳ ಮಾವುತರು, ಕಾವಾಡಿಗರ ಮಕ್ಕಳೂ ಸೇರಿದಂತೆ ಇನ್ನಷ್ಟು ಮಕ್ಕಳು ಅರಮನೆಗೆ ಆಗಮಿಸಲಿದ್ದು, ಈ ಬಾರಿ 40 ಮಕ್ಕಳು ತಾತ್ಕಾಲಿಕ ಶಾಲೆಯಲ್ಲಿ ಕಲಿಯುವ ಸಾಧ್ಯತೆ ಇದೆ. ಇದಕ್ಕಾಗಿ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ತಿರುಪತಿ ವೆಂಕಟೇಶ್ವರ ಸ್ವಾಮಿ ದೇಗುಲಕ್ಕೆ 121 ಕೆಜಿ ಚಿನ್ನ ಕಾಣಿಕೆ ನೀಡಿದ ಉದ್ಯಮಿ



ಅಮರಾವತಿ: ತಿರುಪತಿ ವೆಂಕಟೇಶ್ವರ ಸ್ವಾಮಿ ದೇಗುಲಕ್ಕೆ ಉದ್ಯಮಿಯೊಬ್ಬರು 140 ಕೋಟಿ ಮೌಲ್ಯದ 121 ಕೆ.ಜಿ ಚಿನ್ನ ಕಾಣಿಕೆ ನೀಡಿದ್ದಾರೆ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೆಂಕಟೇಶ್ವರ ಸ್ವಾಮಿಯ ಭಕ್ತರೊಬ್ಬರು ಕಂಪನಿಯೊಂದನ್ನು ಸ್ಥಾಪಿಸಿ ಯಶಸ್ವಿಯಾಗಿದ್ದಾರೆ. ಕೃತಜ್ಞತೆಯ ಸಂಕೇತವಾಗಿ ದೇವರಿಗೆ ಚಿನ್ನವನ್ನು ದಾನ ಮಾಡಲು ನಿರ್ಧರಿಸಿದ್ದಾರೆ ಎಂದು ಹೇಳಿದ್ದಾರೆ.

ನನ್ನ ಕಂಪನಿಯ ಶೇ 60ರಷ್ಟು ಷೇರುಗಳನ್ನು ಮಾರಾಟ ಮಾಡುವ ಮೂಲಕ 6,000 ಕೋಟಿಯಿಂದ 7,000 ಕೋಟಿ ಗಳಿಸಿದ್ದೇನೆ. ವೆಂಕಟೇಶ್ವರ ಸ್ವಾಮಿ ಅನುಗ್ರಹದಿಂದಲೇ ನಾನು ಇಷ್ಟೊಂದು ಸಂಪತ್ತನ್ನು ಗಳಿಸಿದ್ದೇನೆ. ಕೃತಜ್ಞತೆಯ ಸಂಕೇತವಾಗಿ ದೇವರಿಗೆ ಚಿನ್ನವನ್ನು ಕಾಣಿಕೆ ನೀಡಲು ನಿರ್ಧರಿಸಿದ್ದೇನೆ ಎಂದು ಹೆಸರೇಳಲಿಚ್ಛಿಸದ ಉದ್ಯಮಿ ತಿಳಿಸಿದ್ದಾರೆ.

ಪ್ರತಿದಿನ ವೆಂಕಟೇಶ್ವರ ಸ್ವಾಮಿಯ ವಿಗ್ರಹವನ್ನು 120 ಕೆ.ಜಿ ತೂಕದ ಚಿನ್ನದ ಆಭರಣಗಳಿಂದ ಅಲಂಕರಿಸಲಾಗುತ್ತದೆ ಎಂದು ಟಿಡಿಪಿ ಮುಖ್ಯಸ್ಥರು ಹೇಳಿದ್ದರು. ಹಾಗಾಗಿ ನಾನು 121 ಕೆ.ಜಿ ತೂಕದ ಚಿನ್ನವನ್ನು ಕಾಣಿಕೆ ನೀಡುತ್ತಿದ್ದೇನೆ ಎಂದು ಉದ್ಯಮಿ ಹೇಳಿದ್ದಾರೆ.

ತಿರುಪತಿಯ ಉಚಿತ ಅನ್ನದಾನ ಕಾರ್ಯಕ್ರಮಕ್ಕೆ ಬೆಂಗಳೂರಿನ ಉದ್ಯಮಿ ಕಲ್ಯಾಣ ರಾಮನ್ ಕೃಷ್ಣಮೂರ್ತಿ 1 ಕೋಟಿ ಹಾಗೂ ಕೆ.ಎಂ. ಶ್ರೀನಿವಾಸ ಮೂರ್ತಿ 148 ಗ್ರಾಂ ತೂಕದ, ಅಂದಾಜು 25 ಲಕ್ಷ ಮೌಲ್ಯದ ಚಿನ್ನದ ಪದಕ ಕೊಡುಗೆಯಾಗಿ ನೀಡಿದ್ದಾರೆ ಎಂದು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಪ್ರಕಟಣೆಯಲ್ಲಿ ತಿಳಿಸಿತ್ತು.

ಕಟ್ಟಡವನ್ನು ಬಾಡಿಗೆಗೆ ಪಡೆಯಲು ಅರ್ಜಿ ಆಹ್ವಾನ

ಮೈಸೂರು, ಆ.19– ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಸೇರಿದ ಸ್ವಂತ ಕಟ್ಟಡವಾದ ಕಾರ್ಮಿಕ ಕಲ್ಯಾಣ ಕೇಂದ್ರ ವಾರ್ಡ್ ನಂ.15ರಲ್ಲಿರುವ ಡೋರ್ ನಂ.53, 7ನೇ ಅಡ್ಡ ರಸ್ತೆ, (ಕೃಷ್ಣರಾಜ ಉದ್ಯಾನವನದ ಎದುರು), ರಾಜೇಂದ್ರನಗರ (ಕೆಸರೆ), ಮೈಸೂರು. ಇಲ್ಲಿರುವ 93X42 ಅಡಿ ವಿಸ್ತೀರ್ಣದ ಜಾಗದಲ್ಲಿರುವ ಆರ್.ಸಿ.ಸಿ. ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯವರು ನಿಯಮಾನುಸಾರ ನಿಗದಿಪಡಿಸಿರುವ ರೂ. 44,300 ಗಳ ಬಾಡಿಗೆ ದರಕ್ಕೆ ಸರ್ಕಾರಿ ಕಚೇರಿ, ನಿಗಮ, ಮಂಡಳಿಯ ಕಚೇರಿಗಳಿಗೆ, ಆಸಕ್ತಿಯುಳ್ಳ ಖಾಸಗಿ ಸಂಸ್ಥೆಗಳಿಗೆ ಮತ್ತು ವ್ಯಾಪಾರ ವಹಿವಾಟುದಾರರಿಗೆ ಬಾಡಿಗೆಗೆ ನೀಡಲು ನಿರ್ಧರಿಸಲಾಗಿದೆ. ಆಸಕ್ತಿಯುಳ್ಳವರು ಕಾರ್ಮಿಕ ಅಧಿಕಾರಿಗಳ ಕಚೇರಿ, ಮೈಸೂರು ಉಪವಿಭಾಗ, ಕಾರ್ಮಿಕ ಭವನ, ಕೆ.ಎನ್.ಎಸ್. ಲೇಔಟ್, ಹರಿಶ್ಚಂದ್ರಘಾಟ್ ಎದುರು, ಅಶ್ರಮ ಅಂಚೆ, ಮೈಸೂರು. ಇವರನ್ನು ಸಂಪರ್ಕಿಸುವುದು. ದೂ.ಸಂ: 0821– 2343990, ಮೊಬೈಲ್ ಸಂಖ್ಯೆ: 9945657519 ಅರ್ಜಿ ಸಲ್ಲಿಸಿ ಈ ಕಟ್ಟಡವನ್ನು ನಿಯಮಾನುಸಾರ ಬಾಡಿಗೆಗೆ ಪಡೆಯಬಹುದಾಗಿರುತ್ತದೆ ಎಂದು ಮೈಸೂರು ಉಪವಿಭಾಗದ ಕಾರ್ಮಿಕ ಅಧಿಕಾರಿಗಳು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

WANTED

Well Established Electrical Panel Manufacturing Company with Siemens India Limited Partnership

REQUIRES FOLLOWING

1. Estimation Engineer - 2 posts (Diploma/BE Electrical)
2. Electricians for Panel Wiring - 10 posts
3. Bus Bar Fitters - 2 posts
4. Mechanical Fitters - 2 posts (Experience in Panel enclosure)

What's up the CV to the contact : 7204870444
Email Id : accounts@bkpowertech.com

IMPERIAL CITY
Mega Residential Villa Township
Mysuru - Hunsur Main Road, Mysuru
Just 4 km from Ilavala Satellite Bus Stand
MUDA LIMITS
Just ₹749/ per Sq.ft.
Easy 4 Instalment Facility
BOOKING OPEN
30x40 | 30x50 | 40x60 | 50x80
Sites with all facilities
HYLAND PROPERTIES 90713 86615 95133 01854
Kalidasa Road, Vijayanagara 1st Stage, Mysuru

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ ಮತ್ತು ಲಾರಿ ಡ್ರೈವರ್ ಬೇಕಾಗಿದ್ದಾರೆ
ವಿದ್ಯಾರ್ಹತೆ: ಐ.ಟಿ.ಐ. ಯಾವುದೇ ಡಿಗ್ರಿ
6364580688

2 BHK HOME INTERIORS @ ₹ 2.9 Lakh*
Home Space Mart
ISO 9001:2015 Certified Company Depot
Mysuru • Kushalnagar • Bengaluru
For Site Visit : 9108923123

ಬೇಕಾಗಿದ್ದಾರೆ
FLIPKART AMAZON ಕಂಪನಿಗೆ OFFICE ಕೆಲಸಕ್ಕೆ ಯುವಕ ಯುವತಿಯರು (18K - 45K) 7th,10th, Any Degree Pass/ Fail ಊಟ ವಸತಿ ಇರುತ್ತದೆ
8792041687/ 7022485742

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ– 9300(24CT)
9108146123

Land for Sale
7Acre Land with Farm House is for Sale in Sunkathonnur Near Pandavapura Tq. Mandya 30km From Mysore. Channel Water is Available, 2 Bore Water Price: 1.25 Lack Per Gunta.
9632434689
8496000727

100% TEAK WOOD
FACTORY FINISH DOORS & WINDOWS
@ FACTORY DEPOT RATES
10 YEARS WARRANTY
9731591267
9901291267


Site for Sale
20x30 North Facing Site for Sale @ Dattagalli, Mysore
Price: 56 Lakh neg.
6364464247

WELL DEVELOPED FARM LAND FOR SALE
For sale with an Ext of 4 acres includes coconut, Areca Nut and Mango trees with drip irrigation and fencing available for immediate sale with clear titles, 20kms away from the Mysuru city centre of T. Narsipura Road. Contact:
99162 31821 / 99861 56035

Aquaguard & Kent Water Purifier
Sales & Service
9901200444
#319, Near Mega Medical Store, Kuvempunagar

69 projects
MUDA APPROVED
e - Khata Ready
VAISHNAVI LAYOUT
RT NAGAR ENTRANCE
30×40 30×50
HERITAGE CITY
NEAR NEW MYSURU NANJANGUD HIGHWAY
OWN 20x30 site
PAY ₹ 2 LAKHS ONLY
Rest With Installments
8088-707-707

Flat for Lease
2BHK Flat for Lease at Laxmipuram
Contact
9902817576




ಕಲ್ಟ್ cult
Biggest Gym in Lakshmipuram, Mysore
ಕಮಿಂಗ್ ಸೂನ್
First 100 customers will get exclusive pre-launch offers & gym bag
Scan QR code for Enquiry
90358 54048, 90358 54049
#44/2A, 2nd & 3rd Floor, Sheshadri Iyer Rd / Dewans Rd (Behind Nexa Showroom) Lakshmipuram, Mysuru



JOCKEY
FACTORY SECONDS
UPTO 50% OFF*
10 am to 8 pm • Open All Days • Master / Visa Card Accepted
INNERWEAR • LEISUREWEAR • ACTIVEWEAR • KIDSWEAR • SOCKS
Venue In Mysore
JLB Road
The Institution Of Engineers (Auditorium Hall), Jhansi Lakshmibai Road - 5


BOOKINGS ARE OPEN
Starts from 99 Lakhs*
Save 10%*
AVENUE SAINIK NAGAR



Build your Own Dream Palace in the City of Palaces
Beside Toll, Nanjangud Road, Mysore
• 1.5 km from airport • 9 km from city
Sainik Homes 94484 64479 / 63633 10169

REPCO BANK
Govt. of India Enterprise
(ಭಾರತ ಸರ್ಕಾರದ ಉದ್ಯಮ)
1022, 1ನೇ ಮಹಡಿ, ಜೆ & ಹೆಚ್ ಬ್ಲಾಕ್, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು–570023
ವಿಶೇಷ ಆವರ್ತಕ ಠೇವಣಿ ಸಂಗ್ರಹಣ ಅಭಿಯಾನ
ಪ್ರತಿ ತಿಂಗಳು ರೂ.2,500/– ವಿನಿಯೋಜಿಸಿ
ಮೂರು ವರ್ಷಗಳ ನಂತರ ರೂ.1.00 ಲಕ್ಷಕ್ಕೂ ಅಧಿಕ ಮೊತ್ತ ಗಳಿಸಿ.
*ಷರತ್ತುಗಳು ಅನ್ವಯಿಸುತ್ತವೆ. *ಸದಸ್ಯ ಗ್ರಾಹಕರಿಗೆ ಮಾತ್ರ
ಹೆಚ್ಚಿನ ಮಾಹಿತಿಗಾಗಿ ಶಾಖೆಯನ್ನು ಸಂಪರ್ಕಿಸಿ :
PH: 0821 - 2562211 | Mob: 9449856210

REMEMBRANCE



Theetharamada Ravi Nanjappa
11.12.1947 — 20.08.2021

You are dearly missed and you will forever be in our hearts.

Wife-Indira, daughter, son, son-in-law, daughter-in-law, relatives and family members.

ಗೌರಿ ಗಣೇಶ ಹಬ್ಬದ ಪ್ರಯುಕ್ತ ಭಾರಿ ರಿಯಾಯಿತಿ ಮಾರಾಟ ಕುವೆಂಪುನಗರದಲ್ಲಿ

ಬ್ರಾಂಡೆಡ್ ಫ್ಯಾಷನ್ ಎಕ್ಸ್‌ಪೋ ಸೇಲ್

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ
ಮಾರಾಟ 8 ದಿನಗಳು ಮಾತ್ರ : ಆಗಸ್ಟ್ 20 ರಿಂದ ಆಗಸ್ಟ್ 27 ರವರೆಗೆ
Upto 90% Discount

Lee Cooper, NETPLAY, JOHN PLAYERS, INDIGO NATION, LAWMAN, Buffalo, SCULLERS, Roadster, KNIGHTHOOD — And many more brands available

ಪುರುಷರ ಉಡುಪುಗಳು ನಂಬಲಾರದಂತಹ ಬೆಲೆಯಲ್ಲಿ

ಬ್ರಾಂಡೆಡ್ ಜೀನ್ಸ್ / ಪ್ಯಾಂಟ್ಸ್ 500/- | ಕಾಟನ್ & ಫಾರ್ಮಲ್ ಪ್ಯಾಂಟ್ 450/- | ಕಾಲರ್ ಟೀ–ಶರ್ಟ್ 250/- | ಬ್ರಾಂಡೆಡ್ ಜೆಪ್ಪರ್ ಹುಡ್ಡೀಸ್ 500/-
ಮೆನ್ಸ್ ಶರ್ಟ್ಸ್ 250/- | ರೌಂಡ್ ನೆಕ್ ಟಿ–ಶರ್ಟ್ಸ್ 150/- | ಟ್ರಾಕ್ ಪ್ಯಾಂಟ್ 350/- | ಪುರುಷರ ಪಾದರಕ್ಷೆ 200/-
ಪ್ರೀಮಿಯಂ ಶರ್ಟ್ಸ್ 500/- | ಫಾರ್ಮಲ್ & ಕ್ಯಾಷುಯಲ್ ಶೂಸ್ 500/- | ಮೆನ್ಸ್ ಜಾಕೆಟ್ಸ್ 750/- | ಸ್ವೆಟ್ ಶರ್ಟ್ಸ್ 400/- | ಮೆನ್ಸ್ ಟ್ರಂಕ್ 150/-

ಮಹಿಳೆಯರ ಉಡುಪುಗಳು ನಂಬಲಾರದ ಕೊಡುಗೆಗಳು

ಲೆಗ್ಗಿಂಗ್ಸ್ 150/- | ಸ್ಕಾರ್ಟ್ಸ್ & ಶಾರ್ಟ್ಸ್ 100/- | ಕುರ್ತೀಸ್ 200/- | ವೆಸ್ಟರ್ನ್ ಟಾಪ್ಸ್ 150/- | ಜಾಕೆಟ್ಸ್ 500/- | ಜಿಪ್ಪರ್ ಹುಡ್ಡೀಸ್ 400/-
ಮಹಿಳೆಯರ ಡ್ರೆಸ್ಸಸ್, ಸ್ವೆಟ್ ಶರ್ಟ್, ಜೀನ್ಸ್ & ಟ್ರಾಕ್ ಪ್ಯಾಂಟ್ ಯಾವುದೇ ಖರೀದಿಸಿದರೂ 300/-
ಮಹಿಳೆಯರ ಶೂಸ್ 350/- | ಮಹಿಳೆಯರ ಸ್ಯಾಂಡಲ್ಸ್ 200/- | ಲೇಡೀಸ್ ಬಾಟಮ್ 200/- | ಬ್ರಾ 150/- | ಪ್ಯಾಂಟಿ 80/-

ಮಹಿಳೆಯರ ಶಿಫಾನ್, ಜಾರ್ಜೆಟ್, ಕಾಟನ್ ಇನ್ನೂ ಮುಂತಾದ ವೆರೈಟಿ ಸೀರೆಗಳು ಕೇವಲ 100/- ಮಾತ್ರ
ಮಕ್ಕಳ ಉಡುಪುಗಳು 100/- ರಿಂದ 150/- ಮಾತ್ರ | ಮಕ್ಕಳ ಫುಟ್‌ವೇರ್ 100/- ರಿಂದ 250/- ಮಾತ್ರ
ಈ ಕೊಡುಗೆ ಸೀಮಿತ ಅವಧಿಗೆ ಮಾತ್ರ ಈ ಅದ್ಭುತ ಕೊಡುಗೆಗಳನ್ನು ಕಳೆದುಕೊಳ್ಳಬೇಡಿ
ಮಾರಾಟ 2 ಸ್ಥಳಗಳಲ್ಲಿ ಮಾತ್ರ

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ — ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು
ನಂಜರಾಜ ಬಹದ್ದೂರು ಛತ್ರ — ವಿನೋಬಾ ರಸ್ತೆ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು
ಸಮಯ : ಬೆ.10 ರಿಂದ ರಾತ್ರಿ 10ರವರೆಗೆ ಸಂಪರ್ಕ : 8747869888 ಉಚಿತ ಪ್ರವೇಶ & ಪಾರ್ಕಿಂಗ್

ಭಾರತ ಸರ್ಕಾರ

ಬುಡಕಟ್ಟು ವ್ಯವಹಾರಗಳ ಸಚಿವಾಲಯ

[ವಿದ್ಯಾರ್ಥಿವೇತನ ವಿಭಾಗ]

2025–26ನೇ ಸಾಲಿಗೆ ST ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಫೆಲೋಶಿಪ್ (NFST).

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯವು 2025–26ನೇ ಸಾಲಿಗೆ "ST ಅಭ್ಯರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಫೆಲೋಶಿಪ್ ಮತ್ತು ವಿದ್ಯಾರ್ಥಿವೇತನ" ಯೋಜನೆಯಡಿಯಲ್ಲಿ ರಾಷ್ಟ್ರೀಯ ಫೆಲೋಶಿಪ್‌ಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ. ಪಿಎಚ್‌ಡಿ ಅಧ್ಯಯನಗಳ ಮುಂದುವರಿಸಲು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡಲಾಗುತ್ತದೆ.

ಫೆಲೋಶಿಪ್‌ಗಾಗಿ ಸ್ಥಾನಗಳ ಸಂಖ್ಯೆ: 750

ಆಸಕ್ತ ಅಭ್ಯರ್ಥಿಗಳು ರಾಷ್ಟ್ರೀಯ ಬುಡಕಟ್ಟು ಫೆಲೋಶಿಪ್ ಪೋರ್ಟಲ್ https://fellowship.tribal.gov.in/ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು. ಅರ್ಜಿಗಳನ್ನು ಸಲ್ಲಿಸಲು ಪೋರ್ಟಲ್ ಆಗಸ್ಟ್ 1, 2025 ರಿಂದ ಸೆಪ್ಟೆಂಬರ್ 30, 2025 (ಸಂಜೆ 5:30) ರವರೆಗೆ ತೆರೆದಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಸಚಿವಾಲಯದ ಪೋರ್ಟಲ್‌ಗೆ ಭೇಟಿ ನೀಡುವುದು:– https://tribal.nic.in/Scholarship.aspx

CBC-43101/11/0019/2526

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ, ವನ್ಯಜೀವಿ ವಿಭಾಗ, ಅರಣ್ಯ ಭವನ, ಅಶೋಕಪುರಂ, ಮೈಸೂರು,
ದೂ: 0821–2481159, ಇ–ಮೇಲ್: dcfwlmys@gmail.com

ಸಂಖ್ಯೆ: ಎ1/ಬಿಯುಡಿ/ಸಿ.ಆರ್–03/ಟೆಂಡರ್/2025–26 ದಿನಾಂಕ: 16.08.2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ಪ್ರಕಾರ 2025–26ನೇ ಸಾಲಿನಲ್ಲಿ ಮೈಸೂರು ವನ್ಯಜೀವಿ ವಿಭಾಗದ ವ್ಯಾಪ್ತಿಯ ಅರಬಿತಿಟ್ಟು ವನ್ಯಧಾಮದಲ್ಲಿ ಲಾಂಟಾನ ಕಳೆ ತೆಗೆದು ವಿವಿಧ ಬಗೆಯ ಹುಲ್ಲುಹಾಸು ನೆಡುವುದಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿವುಳ್ಳ ಸಂಸ್ಥೆ/ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಟೆಂಡರ್ ಸ್ವೀಕರಿಸುವ ದಿನಾಂಕ: **02.09.2025** ರಂದು **16.00** ಗಂಟೆಯವರೆಗೆ, ತಾಂತ್ರಿಕ ಬಿಡ್ಡುಗಳನ್ನು ತೆರೆಯಲು ದಿನಾಂಕ: **03.09.2025** ರಂದು **16.10 ಗಂಟೆಗೆ** ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯಲು **04.09.2025** ರಂದು **11.00**ಕ್ಕೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ಹಾಗೂ ಷರತ್ತುಗಳನ್ನು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://kppp.karnataka.gov.in** ರಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/ಶಿರಪಿ ಸಾಯು/815/2025–26

ALL INDIA COUNCIL FOR TECHNICAL EDUCATION

(A Statutory Body of the Government of India)

Nelson Mandela Marg, Vasant Kunj, New Delhi-110 070
Ph: 011-26131577, 78, 80 & 011-29581000
E-mail: pubgrv@aicte-india.org, Website: www.aicte.gov.in

PUBLIC NOTICE

CURBING THE MENACE OF RAGGING IN AICTE APPROVED TECHNICAL INSTITUTIONS

It is brought to the notice of all AICTE approved Institutions, students and other various stakeholders that ragging is a criminal offence and AICTE has already notified its 'All India Council for Technical Education (Prevention and Prohibition of Ragging in Technical Institutions, Universities including Deemed to be Universities imparting technical education) Regulations 2009' vide F.No. 37-3/Legal/AICTE/2009 dated July 1, 2009 and subsequent amendments notified from time to time in order to prohibit, prevent and eliminate the scourge of ragging in AICTE approved Technical Institutions.

The above Regulations are mandatory and applies to all AICTE approved Institutions. Therefore, all the Institutions should take necessary steps for its proper implementation such as:

- **Constitution of Anti-Ragging Committee and Anti-Ragging Squad**
- **Obtaining Undertakings at the time of admission and allotment of Hostel accommodation**
- **Dedicated cadre of Warden(s) and regular visits to hostels**
- **Creating awareness through regular meetings with students**
- **Appointing Professional Counselor (s) for Freshers**
- **Erection of Poster/Banners displaying provisions of law, punishments etc.**

Any violation of AICTE Regulations as cited above by an AICTE approved Institution or an instance wherein any Institution fails to take adequate steps to prevent ragging or fails to act in accordance with these Regulations or fails to punish perpetrators for incidents of ragging suitably, AICTE shall call for punitive action against erring Institutions as per the provisions of the Approval Process Handbook.

Students in distress owing to ragging related incidents can access the National Anti-Ragging **Helpline No. (Toll Free): 1800-180-5522** or e-mail at helpline@antiragging.in or visit www.antiragging.in or to write **the Member Secretary, All India Council for Technical Education (AICTE), Nelson Mandela Marg, Vasant Kunj, New Delhi-110070.**

Advt. No. PGRC/AICTE/08(01)/2025
cbc 21300/12/0009/2526

Member Secretary, AICTE